
ರಂಜನೆ ಬೋಧನೆ ಪ್ರಚೋದನೆ





ಲಂಕೇಶ್

ಡಿಸೆಂಬರ್ 11, 2013 ಪುಟ 20 ರೂ. 15/-




ಜೈಲು ಅಧಿಕಾರಿಗಳ ಲೂಟಿ



ರೈತರನ್ನು ಅರೆಯುತ್ತಿರುವ ಸಕ್ಕರೆ ಧಣಿಗಳು

ವಸಂತ್ ಹೊರಟ್ಟಿಯ ರಾಜಕೀಯ ಲಾಗಾ!



ಶ್ರೀರಾಮಪುರ ನಾಗನ ಹತ್ಯೆಗೆ ಪೋಲೀಸರ ಕುಮ್ಮಕ್ಕು

ಮಂಡ್ಯ ಅರುಣ್‌ಕುಮಾರ್‌ನ ಕಲಿ ನೋಟ್ ಪೊಲೀಸರ ಕಲಿ ಶಾಟ್





ಹೆತ್ತವರೇ ಕೊಂದರೆ?

ಕುದುರೆಮುಖ ರಾಷ್ಟ್ರೀಯ ಉದ್ಯಾನವಾಸಿಗಳ ಪುನರ್‌ವಸತಿಯ ಸುತ್ತಮುತ್ತ

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಪುನರ್‌ವಸತಿಯದ್ದೇ ಕಾರುಬಾರು. ಇದು ನಿರಂತರವಾಗಿ ನಡೆಯುತ್ತಿದ್ದರೂ ಒಂದು ಹಂತಕ್ಕೆ ತಲುಪಿದ್ದು ಇತ್ತೀಚೆಗೆ. ಆದಿವಾಸಿಗಳ ವಿರೋಧದ ನಡುವೆಯೂ ಉದ್ಯಾನವಾಸಿಗಳನ್ನು ಬೀದಿಪಾಲು ಮಾಡಲು ತುದಿಗಾಲಲ್ಲೇ ನಿಂತಿರುವ ಹೊತ್ತು ಗೊತ್ತಿಲ್ಲದ ಸ್ವಯಂ ಸೇವಾಸಂಸ್ಥೆಗಳು, ಪುನರ್‌ವಸತಿ ಹೆಸರಿನಲ್ಲಿ ಮುಗ್ಧ ಆದಿವಾಸಿಗಳನ್ನು 10 ಲಕ್ಷಕ್ಕೆ ಅಳೆದು ಕುಟುಂಬ ಸಮೇತ ಮಾರಾಟ ಮಾಡುತ್ತಿದ್ದಾರೆ. ಇದು ರಾಷ್ಟ್ರೀಯ ಉದ್ಯಾನವಾಸಿಗಳಿಗೆ ಜಾಗತೀಕರಣ ಪ್ರಕ್ರಿಯೆಯ ಆರಂಭದ ಕೊಡುಗೆ!!?

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್‌ವಸತಿಯ ಪ್ರಕ್ರಿಯೆಯ ಬಗ್ಗೆ ಬರೆಯುವುದು ಇಂದಿನ ಅನಿವಾರ್ಯವೂ ಹೌದು. ಇಲ್ಲಿನ ಜನರನ್ನು ಮೋಸಗೊಳಿಸುವುದೇ ಹಣದ ಆಮಿಷವೊಡ್ಡಿ. ನೆಮ್ಮದಿಯಿಂದ ಬದುಕುತ್ತಿದ್ದವರನ್ನು ಈಗಲೇ ಪುನರ್‌ವಸತಿ ಹೊಂದಿದರಾಯಿತು, ನಂತರ ನಿಮಗೆ ಹಣ ಸಿಗಲಾರದು, ಜಾಗ ಬಿಟ್ಟು ಬೀದಿಗೆ ಬೀಳಬೇಕಾದೀತು ಎಂದು ಪ್ರಥಮವಾಗಿ ಮಾನಸಿಕವಾಗಿ ಬಲಿಷ್ಠರಲ್ಲದ ಜನರನ್ನು ಭೇಟಿ ಮಾಡಲಾಗುತ್ತದೆ! ಪುನರ್‌ವಸತಿಯ ವಿಷಯದಲ್ಲಿ ಗೊಂದಲಗಳನ್ನು ಮೂಡಿಸಿ ಅವರ ಭೂಮಿಯ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಅದೂ ರಾತ್ರಿಯ ಸಮಯದಲ್ಲಿ.

ಪುನರ್‌ವಸತಿ ಮಧ್ಯವರ್ತಿಗಳು ಉದ್ಯಾನವನವನ್ನು ಪ್ರವೇಶಿಸುವ ಮೊದಲು ಯಾರೂ ಕೂಡ ಪುನರ್‌ವಸತಿ ಪಡೆಯಲು ಮುಂದೆ ಬಂದಿರಲಿಲ್ಲ. ಯಾವಾಗ ತಮ್ಮ ಭೂಮಿಯನ್ನು ಬಿಟ್ಟುಕೊಡಲು ತಯಾರಿಲ್ಲವೆಂದರೋ ಆಗ ದೈವ ದೇವರ ಹೆಸರಲ್ಲಿ ಪ್ರಮಾಣವನ್ನು ಮಾಡಿಸಲಾಯಿತು. ಇದಕ್ಕೂ ಜಗ್ಗದೇ ಇದ್ದಾಗ ಕತ್ತಿಕಾಳಗವನ್ನು ಮಾಡಲು ಹಿಂಜರಿಯಲಿಲ್ಲ ದಲ್ಲಾಳಿಗಳು!!

ಸ್ಥಳೀಯ ನಿವಾಸಿಗಳು ಯಾವಾಗ ಪುನರ್‌ವಸತಿಯ ವಿರುದ್ಧ ಎದ್ದು ನಿಂತರೋ ಆಗ ದಲ್ಲಾಳಿಗಳಿಗೆ ತಲೆಬಿಸಿಯಾಗಲಾರಂಭಿಸಿತು. ಜನರು ಬಗ್ಗುವುದಿಲ್ಲವೆಂದಾದಾಗ ಅವರಿಗೆ ನಕ್ಸಲ್ ಬೆಂಬಲಿಗರೆಂಬ ಹಣೆಪಟ್ಟಿ ಕಟ್ಟಲಾಯಿತು. ಪುನರ್‌ವಸತಿ ಹೊಂದಲು ಜನರು ತಯಾರಿಲ್ಲವೆಂದಾದಾಗ, ಮುಖ್ಯಮಂತ್ರಿಗಳಿಗೆ 'ರಾಷ್ಟ್ರೀಯ ಉದ್ಯಾನವಾಸಿಗಳ ಪುನರ್‌ವಸತಿ ವೇದಿಕೆ'ಯ ಹೆಸರಿನಲ್ಲಿ ಮನವಿ ಸಲ್ಲಿಸಿ ತಮಗೆ ಎರಡು ಎಕರೆ ಭೂಮಿ ಮತ್ತು ಪರಿಹಾರ ಹಣವನ್ನು ಹೆಚ್ಚಿಸಬೇಕೆಂದು ಉದ್ಯಾನದ ಯಾರಿಗೂ ಗೊತ್ತಿಲ್ಲದಂತೆ ತಮ್ಮದೇ ಭೂಮಿ ಎಂಬಂತೆ ಉದ್ಯಾನವಾಸಿಗಳ ಪರವಾಗಿ ಮನವಿ ಸಲ್ಲಿಸಲಾಯಿತು. ರಾಷ್ಟ್ರೀಯ ಉದ್ಯಾನವಾಸಿಗಳಿಗೆ ಎಎನ್‌ಎಫ್‌ನ ಸಿಬ್ಬಂದಿ ಹಲ್ಲೆ ಮಾಡಿದಾಗ, ಹಲವರನ್ನು ಬಂಧಿಸಿದಾಗ, ಮನೆಯ ಬಾಗಿಲು ಮುರಿದು ದಾಂಧಲೆ ಮಾಡಿದಾಗ, ಸಂಗ್ರಹಿಸಿಟ್ಟ ಅಕ್ಕಿ, ಕಾಡುತ್ಪತ್ತಿ, ಹಣವನ್ನು ಪೊಲೀಸರು ದರೋಡೆ ಮಾಡಿದಾಗ ಯಾರೂ ಕೂಡಾ ಮುಖ್ಯಮಂತ್ರಿಯನ್ನು ಭೇಟಿಯಾಗಿಲ್ಲ, ಕನಿಷ್ಠ ಜಿಲ್ಲಾಧಿಕಾರಿಗಳು ಪರಿಸ್ಥಿತಿಯನ್ನು ನೋಡುವಂತೆ ಮಾಡಲು ಪ್ರಯತ್ನಿಸಿರಲಿಲ್ಲ, ಯಾವುದೇ ಸಮಸ್ಯೆಗಳಲ್ಲಿದ್ದರೂ ಯಾರಿಗೂ ಮನವಿ ಕೊಡದ ಇವರು ಪುನರ್‌ವಸತಿಗೆ ಹಣ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುವ ಪ್ರಮೇಯ ಯಾಕೆ ಬೇಕಿತ್ತು? ಇದಕ್ಕೂ ಉದ್ಯಾನವಾಸಿಗಳು ತೀವ್ರ ರೀತಿಯಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಆಗ ತನ್ನ ಬೇಳೆ ಬೇಯದೆಂದಾಗ ಕುದುರೆಮುಖವನ್ನು ಹುಲಿ ಯೋಜನೆಗೆ ಸೇರಿಸಿ ಎಂದು ಅರಣ್ಯ ಸಚಿವರಲ್ಲಿ ಮನವಿ ಸಲ್ಲಿಸಿ ಹೆಚ್ಚು ಹಣದ ಬೇಡಿಕೆಯನ್ನು ಇಟ್ಟು ಇನ್ನು ಪುನರ್‌ವಸತಿ ಪಡೆಯುವವರಿಗೆ ಅನುಕೂಲವಾಗುತ್ತದೆಂದು ತಿಳಿಸಲಾಯಿತು. ಇದರ ಹಿಂದಿರುವ ಕ್ರೂರತೆ ಯಾವ ಮಟ್ಟದಲ್ಲಿದೆಯೆಂಬುದನ್ನು ತಿಳಿದ ಉದ್ಯಾನವಾಸಿಗಳು ಮಾತ್ರವಲ್ಲದೆ ಇತರ ಸಂಘ-ಸಂಸ್ಥೆಗಳಿಂದ ತೀವ್ರ ವಿರೋಧ ವ್ಯಕ್ತವಾಯಿತು.

ಗ್ರಾಮಸಭೆಗಳಲ್ಲೂ ಆದಿವಾಸಿ ಕಲ್ಯಾಣಕ್ಕಿರಿಸಿದ ಹಣವನ್ನು ಪುನರ್‌ವಸತಿಗೆ ಬಳಸುವಂತೆ ಒತ್ತಾಯಿಸಲಾಯಿತು. ಇದು ಉದ್ಯಾನವಾಸಿಗಳನ್ನು ನಿಯಂತ್ರಿತವಾಗಿ ತನ್ನೊಳಗೆ ಇಟ್ಟುಕೊಳ್ಳುವಂತಿದೆ. ಯಾವುದೇ ಅಭಿವೃದ್ಧಿ ಸಾಧಿತವಾಗದಿದ್ದಾಗ ಅವರಾಗೇ ಪುನರ್‌ವಸತಿ ಹೊಂದುತ್ತಾರೆಂಬ ಭಾವನೆಯು ಸ್ಪಷ್ಟವಾಗಿತ್ತು. ಆ ಮುಖಾಂತರ ಬರುವ ನಕ್ಸಲ್ ಫಂಡ್‌ನ ಹಣಕ್ಕೆ ಕಡಿವಾಣ ಹಾಕುವ ಪ್ರಯತ್ನ ಪಟ್ಟರೂ ಆದಿವಾಸಿಗಳ ಮಧ್ಯಪ್ರವೇಶದಿಂದ ಸಾಧ್ಯವಾಗಲಿಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್‌ವಸತಿಯನ್ನು ಜಾಗತೀಕರಣದ ಪ್ರಕ್ರಿಯೆಯಲ್ಲಿ ನೋಡಿದಾಗ ಗ್ರಾಮೀಣ ಭಾರತದ ಅವಮಾನದ ಪಯಣದಂತೆ ಕಾಣುತ್ತದೆ. ಗ್ರಾಮೀಣ ಭಾರತವೇ ನಿಜವಾದ ಭಾರತವೆಂಬ ಗಾಂಧೀ ತತ್ವ ಮಸುಕಾದಂತೆ ಕಾಣುತ್ತದೆ. ಸಾಂಪ್ರದಾಯಿಕ ಕಸುಬುಗಳನ್ನು, ಗ್ರಾಮೀಣ ಭಾರತವನ್ನು ದೋಚಿ ನಗರೀಕರಣ ಪ್ರಕ್ರಿಯೆಗೆ ಒಳಪಡಿಸಲಾಗುವ ಎಲ್ಲ ಪ್ರಕ್ರಿಯೆಗಳೂ ಇಲ್ಲಿ ಕಾಣುತ್ತದೆ.



> ಪುನರ್‌ವಸತಿಗಾಗಿ ಪ್ರತೀ ಕುಟುಂಬಕ್ಕೆ 10-20 ಲಕ್ಷದವರೆಗೆ ಪರಿಹಾರ ನೀಡಲಾಗಿದೆ ಎಂದು ಹೇಳಲಾಗಿದ್ದು, ಇಷ್ಟೊಂದು ಹಣದ ಮೂಲ ಯಾವುದು ಎಂಬ ಪ್ರಶ್ನೆಗೆ ಉತ್ತರ ದೊರಕಬೇಕಾಗಿದೆ. ಅರಣ್ಯ ಸಂರಕ್ಷಣೆ ಹೆಸರಿನಲ್ಲಿ ಭಾರೀ ಪ್ರಮಾಣದಲ್ಲಿ ವಿದೇಶಿ ಹಣ ಸಂಗ್ರಹವಾಗುತ್ತಿರುವ ಬಗ್ಗೆ ಇದು ಪುಷ್ಠಿ ನೀಡುತ್ತಿದೆ. ಪುನರ್‌ವಸತಿಗಾಗಿ ಯಾರಿಗೆ ಅರ್ಜಿ ಸಲ್ಲಿಸಬೇಕು ಎಂಬ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳೇ ಜನರಿಗೆ ಸರಿಯಾಗಿ ಮಾಹಿತಿ ನೀಡಿಲ್ಲ. ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆ ನಡುವೆ ಯಾವುದಾದರೂ ಒಪ್ಪಂದವೇರ್ಪಟ್ಟಿದ್ದರೆ ಅದು ಸ್ಥಳೀಯ ಜನರ ಮಾಹಿತಿಗಂತೂ ಬಂದೇ ಇಲ್ಲ. ಮೂಲ ನಿವಾಸಿಗಳಲ್ಲಿ ಒಬ್ಬರಿಗೆ ಹೆಚ್ಚು ಪರಿಹಾರ, ಮತ್ತೊಬ್ಬರಿಗೆ ಕಡಿಮೆ ಪರಿಹಾರ ದೊರಕುತ್ತಿದ್ದು ಅನುಮಾನದಿಂದ ನೋಡುವಂತಾಗಿದೆ. ಕಡಿಮೆ ಪರಿಹಾರ ಪಡೆದವರು ಪೂರ್ತಿ ಹಣ ಕೊಡದೇ ಹೊರಹೋಗುವುದಿಲ್ಲವೆಂದಾದಾಗ ಅವರಿಗೆ ಪುನಃ ಸ್ವಲ್ಪ ಹಣವನ್ನು ಅವರ ಅಕೌಂಟಿಗೆ ಹಾಕಲಾಗುತ್ತದೆ!! ಅಷ್ಟರವರೆಗೆ ಆ ಪರಿಹಾರದ ಹಣ ಯಾರಲ್ಲಿರುತ್ತದೆಂದು ಯಾರಿಗೂ ಗೊತ್ತಿರುವುದಿಲ್ಲ!

ಅಲ್ಪ ಸ್ವಲ್ಪ ಗದ್ದೆ, ತೋಟ, ಜೀವನಾಧಾರಕ್ಕೆ ಕಾಡುತ್ಪತ್ತಿ ಮಾರಾಟ ಮಾಡಿ ಸ್ವಾವಲಂಬನೆಯ ಜೀವನವನ್ನು ಮಾಡುತ್ತಿದ್ದ ಉದ್ಯಾನವಾಸಿಗಳಿಗೆ ನಗರದ ಯಾವುದೇ ಕೆಲಸಗಳಲ್ಲಿ ನೈಪುಣ್ಯತೆ ಇರುವುದಿಲ್ಲ. ಒಂದು ವೇಳೆ ಪುನರ್‌ವಸತಿ ಪಡೆದಿದ್ದೇ ಆದರೆ ಅವರು ಇನ್ಯಾರದೋ ತೋಟದಲ್ಲಿ ತಮ್ಮ ಸ್ವಾವಲಂಬಿ ಬದುಕನ್ನು ಬಿಟ್ಟು ಜೀತ ಮಾಡಿಸುವ ವ್ಯವಸ್ಥಿತ ತಂತ್ರಗಳನ್ನು ನಾವು ಅಲ್ಲಗಳೆಯುವಂತಿಲ್ಲ. ಬಂಡವಾಳಶಾಹಿಗಳ ಕೈಕೆಳಗೆ ಕೆಲಸ ಮಾಡುವ ಪಾಳೆಗಾರಿಕೆ ಸಂಸ್ಕೃತಿಗೆ ಮುಂದೊಂದು ದಿನ ಇವರು ಬಲಿಯಾಗುವ ಎಲ್ಲಾ ಅನಿವಾರ್ಯತೆಗಳೂ ಇವೆ.

ಬುದ್ಧಿವಂತ ಉದ್ಯಾನವಾಸಿಗಳೇನೋ ಹೆಚ್ಚು ಹಣ ಪಡೆಯುತ್ತಾರೆ. ಉದ್ಯಾನದಿಂದ ಪುನರ್‌ವಸತಿಗೊಂಡು ಪುನಃ ಉದ್ಯಾನದಲ್ಲೇ ಭೂಮಿ ಖರೀದಿಸಿ ಇನ್ನಷ್ಟು ಬಂಡವಾಳ ಮಾಡಿಕೊಳ್ಳಲು ತೊಡಗುತ್ತಾರೆ. ಆದರೆ ಬಡವನಿಗೆ ಇಲ್ಲಿ ಸರಿಯಾದ 10 ಲಕ್ಷ ಪರಿಹಾರವೂ ಸಿಕ್ಕಿರುವುದಿಲ್ಲ. ಅತ್ತ ಭೂಮಿಯೂ ಇಲ್ಲದೆ ಇತ್ತ ಕೆಲಸವೂ ಇಲ್ಲದೆ ಅಕ್ಷರಶಃ ಬೀದಿಗೆ ಬಿದ್ದವರೂ ಇದ್ದಾರೆ.

ಈ ಎಲ್ಲಾ ಪ್ರಕ್ರಿಯೆಗಳನ್ನು ಗಮನಿಸಿದ ಉದ್ಯಾನವಾಸಿಗಳು ಬೆಳ್ತಂಗಡಿ ತಾಲೂಕು ಕೇಂದ್ರದಲ್ಲಿ



ಪ್ರತಿಭಟಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ಸೇರದ ಜನ ತಮ್ಮ ಬದುಕು ಛಿದ್ರವಾಗುತ್ತದೆಂದು ಒಗ್ಗಟ್ಟಾಗಿ ಪ್ರತಿಭಟಿಸಿದ್ದರು. ಇದೆಲ್ಲವೂ ದಲ್ಲಾ[illegible] ನುಂಗಲಾರದ ತುತ್ತಾಗಿತ್ತು. ಉದ್ಯಾನದಲ್ಲಿ ಅ[illegible] ಸಾಧ್ಯವಾಗದೇ ತಾವು ಹೊರಬಂದೆವೆಂಬ ಹೇಳಿಕೆ [illegible] ಇವರೇ ಅಭಿವೃದ್ಧಿಗೆ ಬಳಸುವ ಹಣವನ್ನು ಪುನರ್[illegible] ಕೊಡಿ ಎಂದು ಹೇಳಿ ಅಭಿವೃದ್ಧಿಯ ದಿಕ್ಕು ತಪ್ಪಿಸು[illegible] ಆಗಿದ್ದಾರೆ.

ಇಷ್ಟೆಲ್ಲಾ ಪ್ರಕ್ರಿಯೆಗಳಿಗಿಂತ ಮುಖ[illegible] ವಿಷಯವೆಂದರೆ, ಕುದುರೆಮುಖ ರಾಷ್ಟ್ರೀಯ ಉದ್ಯಾ[illegible] ಮೂಲನಿವಾಸಿಗಳಿಗೆ ಪುನರ್‌ವಸತಿ ಪ್ರಕ್ರಿಯೆಯಲ್ಲಿ [illegible] ಪುನರ್‌ವಸತಿ ಕಲ್ಪಿಸಿದ್ದಕ್ಕಿಂತಲೂ ಹೆಚ್ಚು ಸರ್ಕಾರೇತ[illegible] ತನ್ನದೇ ಹಣದಿಂದ ಪುನರ್‌ವಸತಿ ಕಲ್ಪಿಸುತ್ತಿದೆ. ಪುನ[illegible] ಕೈಗೊಳ್ಳುವವರಿಗೆ ಹಣವು ಎಲ್ಲಿಂದ ಬರುತ್[illegible] ಗೊತ್ತಿಲ್ಲವೆಂದು ಅವರೇ ಹೇಳುತ್ತಾರೆ!! ಮುಂ[illegible] ಪ್ರದೇಶದಲ್ಲಿ ಇವರೇ ಸರಕಾರಕ್ಕೆ ಗೊತ್ತಾಗದಂತೆ ಪಯ[illegible] ಸರಕಾರ ರಚಿಸಿದರೂ ಆಶ್ಚರ್ಯಪಡಬೇಕಾಗಿಲ್ಲ.

ದ.ಕ ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ [illegible] ಕುಟುಂಬಗಳು ಪುನರ್‌ವಸತಿಗೊಂಡಿದ್ದರೆ, ವೈಲ್ಡ್[illegible] ಕನ್ಸರ್ವೇಟಿವ್ ಸೊಸೈಟಿ ವತಿಯಿಂದ 62 ಕುಟುಂ[illegible] ಇದುವರೆಗೆ ಪುನರ್‌ವಸತಿಗೊಂಡಿದ್ದಾರೆ. [illegible] ಸಮಯದಲ್ಲಿ ಎರಡೆರಡು ಪುನರ್‌ವಸತಿಯೋಜ[illegible] ಅನುಷ್ಠಾನಗೊಂಡಿದೆ ಎಂಬ ಪತ್ರಿಕಾ ವರ[illegible] ಆಶ್ಚರ್ಯವನ್ನೇ ಉಂಟುಮಾಡಿವೆ.

ಪುನರ್‌ವಸತಿಗಾಗಿ ಪ್ರತೀ ಕುಟುಂಬಕ್ಕೆ [illegible] ಲಕ್ಷದವರೆಗೆ ಪರಿಹಾರ ನೀಡಲಾಗಿದೆ ಎಂದು ಹೇಳ[illegible] ಇಷ್ಟೊಂದು ಹಣದ ಮೂಲ ಯಾವುದು ಎಂಬ [illegible] ಉತ್ತರ ದೊರಕಬೇಕಾಗಿದೆ. ಅರಣ್ಯ ಸಂರಕ್ಷಣೆ ಹೆ[illegible] ಭಾರೀ ಪ್ರಮಾಣದಲ್ಲಿ ವಿದೇಶಿ ಹಣ ಸಂಗ್ರಹವಾಗು[illegible] ಬಗ್ಗೆ ಇದು ಪುಷ್ಠಿ ನೀಡುತ್ತಿದೆ. ಪುನರ್‌ವಸತಿಗಾಗಿ [illegible] ಅರ್ಜಿ ಸಲ್ಲಿಸಬೇಕು ಎಂಬ ಬಗ್ಗೆ ಕಂದಾಯ [illegible] ಅಧಿಕಾರಿಗಳೇ ಜನರಿಗೆ ಸರಿಯಾಗಿ ಮಾಹಿತಿ [illegible] ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆ [illegible] ಯಾವುದಾದರೂ ಒಪ್ಪಂದವೇರ್ಪಟ್ಟಿದ್ದರೆ ಅದು [illegible] ಜನರ ಮಾಹಿತಿಗಂತೂ ಬಂದೇ ಇಲ್ಲ. ಮೂಲ ನಿವಾ[illegible] ಒಬ್ಬರಿಗೆ ಹೆಚ್ಚು ಪರಿಹಾರ, ಮತ್ತೊಬ್ಬರಿಗೆ ಕಡಿಮೆ [illegible] ದೊರಕುತ್ತಿದ್ದು ಅನುಮಾನದಿಂದ ನೋಡುವಂ[illegible] ಕಡಿಮೆ ಪರಿಹಾರ ಪಡೆದವರು ಪೂರ್ತಿ ಹಣ ಕೆ[illegible] ಹೊರಹೋಗುವುದಿಲ್ಲವೆಂದಾದಾಗ ಅವರಿಗೆ ಪು[illegible] ಹಣವನ್ನು ಅವರ ಅಕೌಂಟಿಗೆ ಹಾಕಲಾಗುತ್ತದೆ!! ಅ[illegible] ಆ ಪರಿಹಾರದ ಹಣ ಯಾರಲ್ಲಿರುತ್ತದೆಂದು ಯ[illegible] ಗೊತ್ತಿರುವುದಿಲ್ಲ!

ಎನ್.ಜಿ.ಓಗಳಿಗೆ ಪುನರ್‌ವಸತಿ ಮಾಡಲು [illegible] ಗೊತ್ತಿದೆ. ಅನಂತರದ ಬದುಕನ್ನು ಇವರು ಗ್ರಹಿಸಿದ್ದಾ[illegible] ಎನ್.ಜಿ.ಓ ಸಂಘಟನೆಗಳು ಮಾಡಬೇಕಾಗಿರುವುದು[illegible] ಪ್ರದೇಶದಲ್ಲಿ ತಲೆತಲಾಂತರದಿಂದ ಬದುಕಿದ [illegible] ಬೀದಿಪಾಲು ಮಾಡುವುದಲ್ಲ. ಸಾವಿರಾರು ಎಕರೆ[illegible] ವಶಪಡಿಸಿ ಕಡಿದು ರಬ್ಬರ್, ಚಹಾ ತೋಟ ಮಾ[illegible] ಬಂಡವಾಳಶಾಹಿಗಳಿಗೆ ಪುನರ್‌ವಸತಿ ಬಗ್ಗೆ [illegible] ತಲೆತಲಾಂತರದಿಂದ ಬದುಕಿಕೊಂಡು ಬಂದಿರುವ [illegible] ಅರಣ್ಯ ಹಕ್ಕಿನ ಬಗ್ಗೆ ಮಾಹಿತಿ ನೀಡಲಿ. [illegible] ಮಾರಕವಾಗುವ ವಿದ್ಯುತ್ ಯೋಜನೆಗಳನ್ನು, [illegible] ಯೋಜನೆಯನ್ನು ವಿರೋಧಿಸಲಿ. ಇದರಿಂದ ಪಶ್ಚಿಮ[illegible] ಮಾರಕ ಪರಿಣಾಮಗಳಾಗುತ್ತವೆಂದು ಇವರಿಗೆ ಗೊ[illegible] ಪಶ್ಚಿಮಘಟ್ಟದಲ್ಲಾಗುವ ಗಣಿಗಾರಿಕೆ, ಅಕ್ರಮ ಚಟ[illegible] ಪ್ರವಾಸೋದ್ಯಮ ನಿಷೇಧಿಸಿ ಸಮಾಜದಲ್ಲಾಗುವ [illegible] ಅತ್ಯಾಚಾರಗಳ ಶೋಷಕ ಸಮಾಜದ ಬಗ್ಗೆ ಧ್ವ[illegible] ಈಗಾಗಲೇ ಪುನರ್‌ವಸತಿಗೊಂಡು ಬೀದಿಗೆ ಬಿ[illegible] ನೆರವಾಗಿ.

ಉದ್ಯಾನವನದ ಭೂಮಿಯನ್ನು ಬಿಟ್ಟುಹೋದ[illegible] ಮತ್ತು ಅರಣ್ಯ ಇಲಾಖೆಯ ಭ್ರಷ್ಟರ ಸಹಯೋ[illegible] ಕಾಡು ನಾಶವಾಗುತ್ತದೆಯೇ ವಿನಃ ಉಳಿಯು[illegible] ಅಂತೆಯೇ ಈಗಾಗಲೇ ಹಲವಾರು ಯೋಜನೆಗಳ [illegible] ಬೀದಿಪಾಲಾಗಿರುವ ಜನರ ಪರಿಸ್ಥಿತಿಗ[illegible] ತಿಳಿದುಕೊಳ್ಳಬೇಕಾಗಿದೆ. ಪುನರ್‌ವಸತಿ ಬೇಕಾಗಿದ್ದ[illegible] ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳ[illegible] ಹೊರತು ಮಧ್ಯವರ್ತಿಗಳ ಮಧ್ಯಪ್ರವೇಶ ಬೇಕಾಗಿ[illegible] ಸಂದರ್ಭದಲ್ಲಿ ರಾಷ್ಟ್ರೀಯ ಉದ್ಯಾನವಾಸಿಗಳು [illegible] ಪುನರ್‌ವಸತಿಗೆ ಎಲ್ಲಿಂದ ಹಣ ಬರುತ್[illegible] ತಿಳಿದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಉನ್ನತ [illegible] ತನಿಖೆ ಮಾಡಲು ಒತ್ತಾಯಿಸಬೇಕಾಗಿದೆ. ಎಲ್ಲೇ [illegible] ದಾಳಿಯಾದರೂ ಪೊಲೀಸ್ ವೈಫಲ್ಯವನ್ನು ಆದಿ[illegible] ತಲೆಮೇಲೆ ಹಾಕುವ ಪ್ರಯತ್ನವನ್ನು [illegible] ಪ್ರತಿಭಟಿಸಬೇಕಾಗಿದೆ. ಬದುಕು ಬೀದಿಗೆ ಬೀಳುವ [illegible] ರಾಷ್ಟ್ರೀಯ ಉದ್ಯಾನವಾಸಿಗಳು ಎಚ್ಚೆತ್ತುಕೊಳ್ಳಬೇ[illegible]

■ ವಿಠಲ್ ಮಲೆಕು[illegible]

ತರುಣ್ ತೇಜ್‌ಪಾಲ್: ಉರಿದು ಬಿದ್ದ ಉಲ್ಕೆ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಈಗ ಅತ್ಯಾಚಾರ ಎಸಗಿದ ಆರೋಪದಲ್ಲಿ ಸಿಲುಕಿರುವ ತರುಣ್ ತೇಜ್‌ಪಾಲ್ ನನ್ನ ಹಲವಾರು ದಶಕಗಳ ಮಿತ್ರ ಎಂಬುದು ನಮ್ಮ ಓದುಗರಿಗೆ ಗೊತ್ತಿರುವ ವಿಷಯವೇ.

ಸಮಕಾಲೀನರಾದ ನಾವು ಪತ್ರಿಕೋದ್ಯಮವನ್ನು ಹತ್ತಿರಹತ್ತಿರ ಒಂದೇ ಸಮಯದಲ್ಲಿ ಪ್ರವೇಶಿಸಿದ್ದೆವು. ಅದು 80ರ ದಶಕದ ಮಧ್ಯಭಾಗ. ಆಗ ನಾನು ದೆಹಲಿಯಲ್ಲಿ ಟೈಮ್ಸ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದೆ. ತರುಣ್ ಚಂಡೀಘರ್‌ನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ. ಒಮ್ಮೆ ನಾನು, ಚಿದು, ಪತ್ರಲೇಖಾ, ಜೋಯ್‌ದೀಪ್, ಗೌತಮ್ ಮತ್ತು ತರುಣ್‌ನ ತಮ್ಮ ಮಿಂಟಿ ಎಲ್ಲರೂ ಚಂಡೀಘರ್‌ಗೆ ಭೇಟಿ ನೀಡಿ ತರುಣ್ ಮತ್ತು ಆತನ ಪತ್ನಿ ಗೀತನ್ ಅವರ ಮನೆಯಲ್ಲೇ ಉಳಿದುಕೊಂಡಿದ್ದೆವು. ಆಗತಾನೇ ತರುಣ್ ಮತ್ತು ಗೀತನ್ ದಂಪತಿಗಳಿಗೆ ಟಿಯಾ ಎಂಬ ಮೊದಲ ಮಗಳು ಜನಿಸಿದ್ದಳು.

ನಾವೆಲ್ಲರೂ ಒಂದೆರಡು ದಿನಗಳ ಮಟ್ಟಿಗೆ ಚಂಡೀಘರ್‌ನಿಂದ ಕಸೌಲಿಗೆ ಹೋಗಿದ್ದೆವು. ಆಗತಾನೇ ಮಗುವನ್ನು ಬೆನ್ನಿಗೆ ಕಟ್ಟಿಕೊಳ್ಳುವ ಬ್ಯಾಗ್ ಮಾರುಕಟ್ಟೆಗೆ ಬಂದಿತ್ತು. ಆದರೆ ತರುಣ್ ಆ ಬ್ಯಾಗಿನಲ್ಲಿ ಟಿಯಾಳನ್ನು ಇಟ್ಟುಕೊಂಡು ಅದನ್ನು ತನ್ನ ಬೆನ್ನಿಗೆ ಬದಲಾಗಿ ಎದೆಗೆ ಕಟ್ಟಿಕೊಂಡಿದ್ದ. "ಯಾಕೆ ಹಾಗೆ ಅದನ್ನು ಉಲ್ಟಾ ಕಟ್ಟಿಕೊಂಡಿದ್ದೀಯಾ?" ಎಂದು ನಾನು ಕೇಳಿದಾಗ "ಬೆನ್ನಿಗೆ ಕಟ್ಟಿಕೊಳ್ಳುವ ಬದಲಾಗಿ ಮುಂದೆ ಕಟ್ಟಿಕೊಂಡರೆ ನನ್ನ ಮಗಳ ಮತ್ತು ನನ್ನ ಹೃದಯಬಡಿತ ಒಂದೇ ಎನಿಸುತ್ತದೆ. ಅದು ನನಗೆ ಇಷ್ಟ" ಎಂದು ತರುಣ್ ಉತ್ತರಿಸಿದ್ದ.

ಅದೇ ತರುಣ್ ಈಗ ತನ್ನ ಮಗಳ ಗೆಳತಿಯಾದ, ಟಿಯಾಳಷ್ಟೇ ಕಿರಿಯವಳಾದ, ತನ್ನ ಗೆಳೆಯನ ಮಗಳಾದ, ತನ್ನ ಕಚೇರಿಯಲ್ಲಿ ಕಿರಿಯ ವರದಿಗಾರ್ತಿಯಾಗಿರುವ ಯುವತಿಯ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದ್ದಾನೆ ಎಂದು ಕಳೆದ ಬುಧವಾರ ರಾತ್ರಿ ತಿಳಿದು ಬಂದಾಗ ನಾನು ತತ್ತರಿಸಿಹೋದೆ...

ಯಾಕೆ ತರುಣ್ ಹೀಗೆ ಮಾಡಿದ? ಆತನ ತಲೆ ಕೆಟ್ಟಿತ್ತೆ? ಇಂತಹ ಘೋರ ಅಪರಾಧ ಎಸಗಿಯೂ ಪಾರಾಗುತ್ತೇನೆ ಎಂಬ ಧೈರ್ಯ ಮತ್ತು ಧಿಮಾಕು ಆತನಿಗೆ ಹೇಗೆ ಬಂದೀತು ಎಂಬೆಲ್ಲ ಪ್ರಶ್ನೆಗಳು ನನ್ನನ್ನು ಕಾಡಲಾರಂಭಿಸಿದವು.

ತರುಣ್ ಪ್ರತಿಭಾವಂತ ಎಂಬುದರ ಬಗ್ಗೆ ಎರಡು ಮಾತಿಲ್ಲ. ನಮ್ಮೆಲ್ಲರಿಗಿಂತ ಇಂಗ್ಲಿಷ್ ಭಾಷೆಯ ಮೇಲೆ ಪ್ರಬಲವಾದ ಹಿಡಿತವನ್ನು ಸಾಧಿಸಿದ್ದ ತರುಣ್‌ಗೆ ಸಾಹಿತ್ಯದಲ್ಲಿ ಅಪಾರ ಆಸಕ್ತಿ. ಅವನ ಮನೆಯಲ್ಲಿ ಹಲವಾರು ಬುಕ್ ಶೆಲ್ಫ್‌ಗಳಿದ್ದು ಅವುಗಳಲ್ಲಿ ಸಾವಿರಾರು ಪುಸ್ತಕಗಳಿದ್ದವು. ನಾನು ಹೆಚ್ಚು ಇಷ್ಟಪಡದ ವಿ.ಎಸ್.ನೈಪಾಲ್ ಆತನ ಅಚ್ಚುಮೆಚ್ಚಿನ ಲೇಖಕ.

ಒಮ್ಮೆ ಆತನಿಗೆ ರಾಮಚಂದ್ರ ಶರ್ಮ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದ ಪೂರ್ಣಚಂದ್ರ ತೇಜಸ್ವಿ ಅವರ 'ಕರ್ವಾಲೋ' ಪುಸ್ತಕ ಸಿಕ್ಕಿತ್ತು. ಅದನ್ನು ಓದಿದ ತರುಣ್ "ಕನ್ನಡದಲ್ಲಿ ಇಷ್ಟು ಚೆನ್ನಾಗಿ ಬರೆಯುವ ತೇಜಸ್ವಿ ಎನ್ನುವವರು ಇದ್ದಾರೆ ಎಂದೇ ನನಗೆ ಗೊತ್ತಿರಲಿಲ್ಲ. ಮುಂದಿನ ಬಾರಿ ಬೆಂಗಳೂರಿಗೆ ಹೋದರೆ ಅವರನ್ನು ಭೇಟಿ ಆಗಲೇಬೇಕು ನಾನು" ಎಂದು ಹೇಳಿದ್ದ. ಆಗ ನಾನು "ಅದು ಕಷ್ಟ. ಯಾಕೆಂದರೆ ತೇಜಸ್ವಿ ಮೂಡಿಗೆರೆಯನ್ನು ಬಿಟ್ಟುಬರುವುದೇ ಇಲ್ಲ" ಎಂದಿದ್ದೆ. ತೇಜಸ್ವಿ ಅವರಲ್ಲದೆ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಗೊಂಡಿರುವ ಅನಂತಮೂರ್ತಿ ಅವರ ಎಲ್ಲಾ ಕೃತಿಗಳನ್ನೂ ತರುಣ್ ಓದಿಕೊಂಡಿದ್ದ. ಹಾಗೆಯೇ ಬೇರೆ ಭಾಷೆಗಳಲ್ಲಿನ ಪ್ರಮುಖ ಲೇಖಕರ ಕೃತಿಗಳನ್ನು ಕೂಡ.

ಇಂಗ್ಲಿಷ್‌ನಲ್ಲಿ ಪ್ರಬಂಧ ಬರೆಯುವಲ್ಲಿಯೂ ತರುಣ್ ಪಳಗಿದ ಕೈ. ಅವನು ನಾವರಿಯದ ಎಂತೆಂಥದ್ದೋ ಪದಗಳನ್ನು ತನ್ನ ಪ್ರಬಂಧಗಳಲ್ಲಿ ಬಳಸುತ್ತಿದ್ದ. ಆಗ ನಾವು "ಪಂಜಾಬಿ ಯಾದ ನೀನೂ ಇಂಗ್ಲಿಷ್ ಚೆನ್ನಾಗಿ ಬಲ್ಲೆ ಎಂದು ಜಗತ್ತಿಗೆ ತೋರಿಸಿಕೊಡುವ ವಿಫಲ ಪ್ರಯತ್ನ ಮಾಡುತ್ತಿದ್ದೀಯ" ಎಂದು ಅವನನ್ನು ರೇಗಿಸುತ್ತಿದ್ದೆವು.

ತರುಣ್‌ನದ್ದು ಒಂದು ರೀತಿಯಲ್ಲಿ ಧಿಮಾಕಿನ ವ್ಯಕ್ತಿತ್ವ. ಆ ಕಾರಣಕ್ಕೇ ಆತ ಬಹಳ ಕಾಲ ಯಾವ ಪತ್ರಿಕೆಯಲ್ಲೂ ಉಳಿಯುತ್ತಿರಲಿಲ್ಲ. ಒಂದಾದನಂತರ ಮತ್ತೊಂದು ಪತ್ರಿಕೆ ಸೇರಿ, ಅಲ್ಲೊಂದಿಷ್ಟು ದಿನ ತನ್ನ ಛಾಪನ್ನು ಮೂಡಿಸಿ, ಕೆಲವೇ ವರ್ಷಗಳಲ್ಲಿ ಹೊರಬರುತ್ತಿದ್ದ. ಅವನ ಈ ಸ್ವಭಾವವನ್ನು ನೋಡಿ ಈತ ಸದ್ಯದಲ್ಲೇ ಸ್ವತಂತ್ರ ಪ್ರಯತ್ನ ಮಾಡುತ್ತಾನೆ ಎಂಬುದು ಆತನ ಮಿತ್ರರ ಅಂದಾಜಾಗಿತ್ತು.

1998ರಲ್ಲಿ ಡಾಟ್‌ಕಾಮ್ ಹುಚ್ಚು ಜಗತ್ತಿನಾದ್ಯಂತ ಹಬ್ಬಿತು. ಇನ್ನು ಮುಂದೆ ಪತ್ರಿಕೆಗಳಿಗೆ ಭವಿಷ್ಯವೇ ಇಲ್ಲ ಎಂಬ ವಾತಾವರಣ ಸೃಷ್ಟಿಯಾಯಿತು. ಪತ್ರಿಕೋದ್ಯಮ ದಿಗ್ಗಜರನ್ನೂ ಆ ಹುಚ್ಚು ಆವರಿಸಿ ಬಹಳಷ್ಟು ಪತ್ರಕರ್ತರು ಪತ್ರಿಕೆಗಳನ್ನು ತೊರೆದು ಡಾಟ್ ಕಾಮ್ ಕಂಪನಿಗಳನ್ನು ಸೇರಿದರು. ಆಗ ತರುಣ್ ಮತ್ತು ಅನಿರುದ್ಧ್ ಬಹಾಲ್ ಇಬ್ಬರೂ 'ಔಟ್‌ಲುಕ್' ಪತ್ರಿಕೆಯನ್ನು ತೊರೆದು ಇಂಟರ್‌ನೆಟ್‌ನಲ್ಲಿ ತೆಹೆಲ್ಕಾ ಎಂಬ ಪೋರ್ಟಲ್ ಶುರು ಮಾಡಿದರು.

ಆಗಿನ್ನೂ ಇಂಟರ್‌ನೆಟ್ ಈಗಿನಷ್ಟು ವ್ಯಾಪಕವೂ ಆಗಿರಲಿಲ್ಲ, ತ್ವರಿತವೂ ಆಗಿರಲಿಲ್ಲ. ಆರಂಭದಲ್ಲಿ 'ತೆಹೆಲ್ಕಾ' ವೆಬ್ ಪೋರ್ಟಲ್ ಕುಂಟುತ್ತಾ ತೆವಳುತ್ತಾ ಸಾಗಿತ್ತು. ಅದಕ್ಕೆ ಬಂಡವಾಳ ಹೂಡಿರುವವರು ಯಾರು, ಎಷ್ಟು ಆದಾಯ ಬರುತ್ತಿದೆ ಎಂಬುದೆಲ್ಲ ನಿಗೂಢವಾಗಿತ್ತು. ಆದರೆ ಅನಿರುದ್ಧ್ ಬಹಾಲ್ ಅವರು ಸ್ಫೋಟಿಸಿದ 'ಆಪರೇಶನ್ ವೆಸ್ಟ್ ಎಂಡ್' ಹಗರಣ ಇಡೀ ದೇಶದ ಗಮನವನ್ನು ಸೆಳೆಯಿತು. ನನಗಿನ್ನೂ ನೆನಪಿದೆ ಆ ಹಗರಣವನ್ನು ತರುಣ್ ಬಯಲು ಮಾಡಿದ ದಿನ ನಾನು ಮೈಸೂರಿನಲ್ಲಿ ರಾಮದಾಸ್ ಅವರೊಂದಿಗೆ ಇದ್ದೆ. ಆಗ ಮಿತ್ರ ಜುಟ್ಟಿ ಫೋನ್ ಮಾಡಿ "ಬಂಗಾರು ಲಕ್ಷ್ಮಣ್ ಲಂಚ ಸ್ವೀಕರಿಸುತ್ತಾ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ. ಅದನ್ನು ಟಿವಿಯಲ್ಲಿ ತೋರಿಸುತ್ತಿದ್ದಾರೆ" ಎಂದಿದ್ದ. ನಾನು



ಮತ್ತು ರಾಮದಾಸ್ ಕೂಡಲೆ ಟಿವಿ ಆನ್ ಮಾಡಿ ನೋಡಿದ್ದೆವು. ಭಾರತದ ಪತ್ರಿಕೋದ್ಯಮದಲ್ಲೇ ಅದು ಪ್ರಥಮ ಸ್ಟಿಂಗ್ ಆಪರೇಶನ್ ಆಗಿತ್ತು. ಮಾತ್ರವಲ್ಲ 'ದೇಶಭಕ್ತ' ಬಿಜೆಪಿಗಳು ಎಂಥದಕ್ಕೂ ಹೇಸಲ್ಲ ಎಂಬುದನ್ನು ಜಗಜ್ಜಾಹೀರುಪಡಿಸಿತ್ತು.

ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತೆಹೆಲ್ಕಾ ವಿರುದ್ಧ ಕದನಕ್ಕೆ ಬಿತ್ತು. ಅದರಲ್ಲಿ ಬಂಡವಾಳ ಹೂಡಿದ್ದ ವ್ಯಕ್ತಿಯ ಮೇಲೆ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ಮಾಡಿ ಆತನನ್ನು ಬಂಧಿಸಿದರು. ತೆಹೆಲ್ಕಾ ಪತ್ರಕರ್ತರ ವಿರುದ್ಧವೂ ಹಲವಾರು ಕೇಸುಗಳನ್ನು ದಾಖಲಿಸಲಾಯಿತು. ಅನಿರುದ್ಧ್ ಬಿಹಾಲ್ ಕೂಡ ಕೆಲವು ದಿನ ಬಂಧನದಲ್ಲಿದ್ದರು. ನಿಧಾನವಾಗಿ ತೆಹೆಲ್ಕಾ ಕರಗುತ್ತಾ ಹೋಯಿತು. ಕೊನೆಗೊಂದು ದಿನ ಬಾಗಿಲು ಮುಚ್ಚಿತು.

ತರುಣ್ ಮುಂದೇನು ಮಾಡುತ್ತಾನೆ ಎಂದು ನೋಡುತ್ತಿರುವಾಗಲೇ ಆತ ಮತ್ತೊಂದು ಪ್ರಯತ್ನಕ್ಕೆ ಕೈಹಾಕಿದ. ಅದೇ ತೆಹೆಲ್ಕಾ ಪತ್ರಿಕೆ. ತನ್ನ ಹತ್ತಾರು ಮಿತ್ರರಿಂದ ಹಣವನ್ನು ಸಂಗ್ರಹಿಸಿದ ತರುಣ್ ತೆಹೆಲ್ಕಾ ಹೆಸರಿನಲ್ಲಿ ಹೊಸ ವಾರ ಪತ್ರಿಕೆಯನ್ನು ಪ್ರಾರಂಭಿಸುವುದಾಗಿ ಘೋಷಿಸಿದ. ಅದನ್ನು ಕುರಿತು ಆತ ಬೆಂಗಳೂರಿನಲ್ಲಿ ನಡೆಸಿದ ಚರ್ಚೆಯನ್ನು ನಾನು ಯೋಜಿಸಿದ್ದೆನಲ್ಲದೆ ಅದಕ್ಕೆ ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಕನ್ನಡದ ಇತರೆ ಪ್ರಮುಖ ಬರಹಗಾರರನ್ನು, ಚಿಂತಕರನ್ನೂ ಆಹ್ವಾನಿಸಿದ್ದೆ. ಚರ್ಚೆಯ ನಂತರ ಒಂದು ಪತ್ರಿಕಾ ಗೋಷ್ಠಿಯನ್ನೂ ತರುಣ್ ಪರವಾಗಿ ಕರೆದಿದ್ದೆ. ಅದಾದ ಕೆಲವೇ ದಿನಗಳಲ್ಲಿ ತೆಹೆಲ್ಕಾ ಟ್ಯಾಬ್ಲಾಯ್ಡ್ ರೂಪದಲ್ಲಿ ಹೊರಬಂತು. ತೆಹೆಲ್ಕಾ ಪೋರ್ಟಲ್‌ನಲ್ಲಿದ್ದ ಹುರುಪು, ಜನಪರ ನಿಲುವು, ಭ್ರಷ್ಟಾಚಾರದ ವಿರುದ್ಧದ ಹೋರಾಟ, ಅಂದ ಚಂದ ಎಲ್ಲವೂ ಪತ್ರಿಕೆಯಲ್ಲೂ ಇದ್ದು ಅದು ಬಹಳ ಬೇಗನೆ ಎಲ್ಲರ ಗಮನ ಸೆಳೆಯಿತು. ಹಲವು ತಿಂಗಳಲ್ಲಿ ಅದು ತನ್ನ ಟ್ಯಾಬ್ಲಾಯ್ಡ್ ಸ್ವರೂಪವನ್ನು ತೊರೆದು ಮ್ಯಾಗಜೀನ್ ರೂಪ ಪಡೆಯಿತು. ಪರ್ಯಾಯ ಪತ್ರಿಕೋದ್ಯಮಕ್ಕೆ ತೆಹೆಲ್ಕಾ ಹೆಸರುವಾಸಿಯಾಯಿತು.

ಅದರಲ್ಲೂ ಗುಜರಾತಿನಲ್ಲಿ ನಡೆದ ನರಮೇಧದ ಹಿಂದಿದ್ದ ಚಡ್ಡಿಗಳ ಕೈವಾಡವನ್ನು ಮತ್ತೊಂದು ಸ್ಟಿಂಗ್ ಆಪರೇಷನ್ ಮೂಲಕ ಬಹಿರಂಗಪಡಿಸಿದ್ದು ಆಗ ತೆಹೆಲ್ಕಾ ಪತ್ರಿಕೆಗೆ ಕೆಲಸ ಮಾಡುತ್ತಿದ್ದ ಆಶೀಶ್ ಖೇತಾನ್ (ಕಳೆದ ವಾರ ಮೋದಿಯ ಅಕ್ರಮ ಬೇಹುಗಾರಿಕೆಯನ್ನು ಬಹಿರಂಗಪಡಿಸಿದ್ದೂ ಇದೇ ಖೇತಾನ್). ಹಾಗೆಯೇ ಸೋನಿ ಸೋರಿ ಎಂಬ ಆದಿವಾಸಿ ಮಹಿಳೆಯ ಪರ, ಈಶಾನ್ಯ ಭಾರತದಲ್ಲಿ ಭಾರತದ ಸೈನ್ಯ ಎಸಗುತ್ತಿರುವ ಅಕ್ರಮಗಳ ವಿರುದ್ಧ, ಛತ್ತೀಸಗಢ, ಜಾರ್ಖಂಡ್‌ಗಳಲ್ಲಿ ಆದಿವಾಸಿಗಳ ಹೋರಾಟ... ಹೀಗೆ ಹತ್ತು ಹಲವಾರು ಮುಖ್ಯ ವಿಷಯಗಳನ್ನು ಕೈಗೆತ್ತಿಕೊಂಡದ್ದು ತೆಹೆಲ್ಕಾ ಪತ್ರಿಕೆಯ ತಂಡ ಎಂಬುದು ಗಮನಾರ್ಹ.

ತರುಣ್ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗುತ್ತಿದ್ದ ಸಮಯದಲ್ಲೇ ನನ್ನ ಬದುಕಿನಲ್ಲೂ ಕೆಲವು ಬದಲಾವಣೆಗಳಾದವು. ಅವುಗಳಲ್ಲಿ ಪ್ರಮುಖ ವಾದದ್ದು ಈ ಪತ್ರಿಕೆಯ ಜನನ. ಇದನ್ನು 2005ರ ಮಾರ್ಚ್ 8ರಂದು ಬಿಡುಗಡೆ ಮಾಡಿದ್ದೂ ಇದೇ ತರುಣ್ ತೇಜ್‌ಪಾಲ್. ಆತನ ಪತ್ರಿಕೋದ್ಯಮದ ಬಗ್ಗೆ ನಮಗೆಲ್ಲ ಮೆಚ್ಚುಗೆ ಇದ್ದಿದ್ದರಿಂದ ಮತ್ತು ಆತ ನನ್ನ ಮಿತ್ರನಾಗಿದ್ದರಿಂದ ಆತನನ್ನೇ ಆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೆವು. ಅವತ್ತು ಎಡಿಎ ರಂಗಮಂದಿರದಲ್ಲಿ ಸಾವಿರಕ್ಕೂ ಹೆಚ್ಚು ಜನ ಕಿಕ್ಕಿರಿದಿದ್ದನ್ನು ನೋಡಿ ತರುಣ್ ಬೆರಗಾಗಿದ್ದ. "ದೆಹಲಿಯಲ್ಲಿ ಒಂದು ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಪಂಚತಾರಾ ಹೋಟೆಲ್‌ನಲ್ಲಿ ಏರ್ಪಡಿಸಿ ಜೊತೆಗೆ ಡ್ರಿಂಕ್ಸ್ ಕೂಡ ಇರುತ್ತದೆ ಅಂದರೆ ಮಾತ್ರ ಒಂದೈವತ್ತು ಜನ ಬರಬಹುದು. ಆದರೆ ಒಂದು ಪತ್ರಿಕೆಯ ಬಿಡುಗಡೆಗೆ ಇಷ್ಟು ಜನ ಬರುತ್ತಾರೆಂದರೆ ಅಚ್ಚರಿ ಆಗುತ್ತದೆ" ಎಂದಿದ್ದ ತರುಣ್.

ತೆಹೆಲ್ಕಾ ಪತ್ರಿಕೆ ನೋಡಿದರೆ ಅದು ಆರ್ಥಿಕ ನಷ್ಟ ಅನುಭವಿಸುತ್ತಿದೆ ಎಂಬುದು ಮೇಲುನೋಟಕ್ಕೇ ಕಾಣಿಸುತ್ತಿತ್ತು. ಯಾಕೆಂದರೆ ಒಂದೆಡೆ ಅದಕ್ಕೆ ಸಿಗುತ್ತಿದ್ದ ಜಾಹೀರಾತುಗಳು ತುಂಬಾ ಕಡಿಮೆ ಮತ್ತು ಇನ್ನೊಂದೆಡೆ ಅದಕ್ಕೆಂದು ವೆಚ್ಚವಾಗುತ್ತಿದ್ದ ಹಣ ಹೆಚ್ಚು. ಇದೆಲ್ಲದರ ನಡುವೆಯೇ ಮೂರು ವರ್ಷಗಳ ಹಿಂದೆ ಗೋವಾದಲ್ಲಿ 'ಥಿಂಕ್' ಎಂಬ ಅದ್ದೂರಿ ಕಾರ್ಯಕ್ರಮವನ್ನು ಮಾಡಲು ತೆಹೆಲ್ಕಾ ತಂಡ ಹೊರಟಾಗ ತರುಣ್‌ಗೆ ಇದಕ್ಕೆಲ್ಲ ಹಣ ಎಲ್ಲಿಂದ ಬರುತ್ತಿದೆ ಎಂದು ಅಚ್ಚರಿಗೊಂಡಿದ್ದೆ.

ಆಮೇಲೆ ಕೆಲವು ಮಿತ್ರರು 'ತೆಹೆಲ್ಕಾ ತಂಡವನ್ನು ಸೇರಿಕೊಂಡು ಹಲವು ತಿಂಗಳಲ್ಲೇ ಹೊರಬಂದು "ನಾವು ದೂರದಿಂದ ನೋಡಿ ತೆಹೆಲ್ಕಾ ಬಗ್ಗೆ ಯಾವ ಅಭಿಪ್ರಾಯ ಇಟ್ಟುಕೊಂಡಿರುವೆವೋ ಅದು ವಾಸ್ತವ ಅಲ್ಲ. ಅಲ್ಲಿ ನಾವಂದುಕೊಂಡಷ್ಟು ಪ್ರಾಮಾಣಿಕತೆಯಾಗಲಿ, ಜನಪರ ನಿಲುವಾಗಲಿ ಇಲ್ಲ" ಎಂದಾಗ ಬೇಸರವೂ ಆಗಿತ್ತು. ಯಾಕೆಂದರೆ ತರುಣ್ ಸಾರ್ವಜನಿಕವಾಗಿ ಕೊಡುತ್ತಿದ್ದ ಪೋಸಿಗೂ, ಒಳಗೆ ಆತ ಮಾಡಿಕೊಳ್ಳುತ್ತಿದ್ದ ರಾಜಿಗಳಿಗೂ ತಾಳೆ ಆಗುತ್ತಿರಲಿಲ್ಲ.

ಅದರಲ್ಲೂ ಕಳೆದ ನವೆಂಬರ್ ತಿಂಗಳಲ್ಲಿ ತೆಹೆಲ್ಕಾ ಗೋವಾದಲ್ಲಿ ಆಯೋಜಿಸಿದ್ದ 'ಥಿಂಕ್' ಕಾರ್ಯಕ್ರಮದ ಅದ್ದೂರಿತನ ನೋಡಿ ಶಾಕ್ ಆಗಿತ್ತು. ಯಾಕೆಂದರೆ ಅದಕ್ಕೆಂದು ಅಮೆರಿಕದಿಂದ ಖ್ಯಾತ ನಟ ರಾಬರ್ಟ್ ಡಿ ನೆರೋನನ್ನೇ ಆಹ್ವಾನಿಸಲಾಗಿತ್ತು. ಪಂಚತಾರ ಹೋಟೆಲ್‌ನಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ಬಂದಿದ್ದ ಆಹ್ವಾನಿತರ ಪಟ್ಟಿ ನೋಡಿ ಇದಕ್ಕೆ ಕೋಟ್ಯಾಂತರ ರೂಪಾಯಿ ವೆಚ್ಚ ಆಗಿರಬೇಕೆಂದು ನಾನು ಲೆಕ್ಕ ಹಾಕಿದ್ದೆ. ಅಷ್ಟೊಂದು ಹಣ ತೆಹೆಲ್ಕಾ ತರಹದ ಪುಟ್ಟ ಪತ್ರಿಕೆಗೆ ಬಂದಿದ್ದು ಎಲ್ಲಿಂದ?

'ಥಿಂಕ್' ಕಾರ್ಯಕ್ರಮದ ಸುತ್ತ ಪ್ರಕಟಿಸಿದ್ದ ವಿಶೇಷ ಸಂಚಿಕೆಯನ್ನು ಕಳೆದ ಬುಧವಾರ ರಾತ್ರಿ ಓದುತ್ತಿರುವಾಗಲೇ "ತರುಣ್ ತೇಜ್‌ಪಾಲ್ ಯುವ ವರದಿಗಾರ್ತಿಯ ಮೇಲೆ ಲೈಂಗಿಕ ದಾಳಿ ಮಾಡಿದ ಆರೋಪದ ಮೇಲೆ ತೆಹೆಲ್ಕಾ ಪತ್ರಿಕೆಯ ಸಂಪಾದಕನ ಸ್ಥಾನದಿಂದ ದೂರ ಸರಿಯುತ್ತಿದ್ದಾನೆ" ಎಂಬ ಎಸ್‌ಎಂಎಸ್ ಬಂತು. ಅದನ್ನು ಓದಿ ತಲ್ಲಣಿಸಿಹೋದೆ.

ಮಾರನೆ ಬೆಳಗ್ಗೆ ಆ ಯುವತಿ ಸಲ್ಲಿಸಿದ್ದ ದೂರಿನ ಪ್ರತಿ ಸಿಕ್ಕನಂತರವಂತೂ ತರುಣ್ ಬಗ್ಗೆ ಅಸಹ್ಯ ಹುಟ್ಟಿತು. ತನ್ನನ್ನು ನಂಬಿದ್ದ, ಆದರ್ಶಿಸಿದ್ದ, ತಂದೆಯ ಜಾಗದಲ್ಲಿ ಕಂಡಿದ್ದ ಆ ಯುವತಿಯ ಮೇಲೆಯೇ ತರುಣ್ ಇಂತಹ ಕೃತ್ಯವೆಸಗುವಷ್ಟು ಅಸೂಕ್ಷ್ಮನೂ, ಕ್ರೂರಿಯೂ ಆಗಿ ಬದಲಾಗಿದ್ದು ಹೇಗೆ? ತಾನು ಹೊಸ ಪೀಳಿಗೆಯ ಪತ್ರಕರ್ತರಿಗೆ ಹೀರೋ ಎಂಬ ಅಹಂ ಆತನ ನೆತ್ತಿಗೇರಿತೆ? 'ಥಿಂಕ್'ನ ಯಶಸ್ಸು ಅವನಲ್ಲಿದ್ದ ಮೃಗತ್ವವನ್ನು ಕೆರಳಿಸಿತೆ? ತಾನು ಏನು ಮಾಡಿದರೂ ನಡೆಯುತ್ತದೆ ಎಂಬ ಧಿಮಾಕು ಆತನನ್ನು ದಾರಿ ತಪ್ಪಿಸಿತೆ?

ಆರಂಭದಲ್ಲಿ ತಾನು ಮಾಡಿದ್ದ ತಪ್ಪನ್ನು ಒಪ್ಪಿಕೊಂಡಿದ್ದ ತರುಣ್ ಈಗ ಅದನ್ನು ನಿರಾಕರಿಸಲಾರಂಭಿಸಿದ್ದಾನೆ. ತಾನು ತಪ್ಪು ಮಾಡಿಲ್ಲವೆಂದೂ, ಆ ಯುವತಿ ಸುಳ್ಳು ಹೇಳುತ್ತಿದ್ದಾಳೆಂದೂ ಪ್ರಕರಣವನ್ನು ತಿರುಚಿ ಬಚಾವಾಗಲು ಯತ್ನಿಸುತ್ತಿದ್ದಾನೆ. ಆತ ಮನಸ್ಸಾರೆ ಮಹಿಳಾಪರ ಇದ್ದಿದ್ದರೆ ಆತ ಕನಸು ಮನಸಿನಲ್ಲೂ ಇಂತಹ ಅಪರಾಧ ಎಸಗುತ್ತಿರಲಿಲ್ಲ ಎಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ.

ತರುಣ್ ಭಾರತದ ಪತ್ರಿಕೋದ್ಯಮಕ್ಕೆ ಒಂದು ಹೊಸ ತಿರುವು, ದಿಕ್ಕು, ಚೆಂದ ಎಲ್ಲವನ್ನೂ ಕೊಟ್ಟ ವ್ಯಕ್ತಿ ಎಂಬುದು ಎಷ್ಟು ಸತ್ಯವೋ ಆತ ಎಸಗಿರುವ ಅಪರಾಧಕ್ಕೆ ಸೂಕ್ತ ಶಿಕ್ಷೆಯನ್ನೂ ಅನುಭವಿಸಬೇಕು ಎಂಬುದೂ ಅಷ್ಟೇ ಸತ್ಯ. ಅದರ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ.

ಆದರೆ ನಿಜವಾದ ದುರಂತ ಯಾವುದೆಂದರೆ ತರುಣ್‌ನ ಈ ಹಗರಣದಿಂದಾಗಿ ತೆಹೆಲ್ಕಾ ಎಂಬ ವಿಶಿಷ್ಟ ಪತ್ರಿಕೆಯೂ ಕಣ್ಣುಮುಚ್ಚುತ್ತಿರುವುದು... ■

ಅನಂತಮೂರ್ತಿ ವಿಶೇಷಾಂಕ

ಡಿಸೆಂಬರ್ 21ರಂದು ಸಾಹಿತಿ ಡಾ. ಯು.ಆರ್. ಅನಂತಮೂರ್ತಿ 82ನೇ ವರ್ಷಕ್ಕೆ ಕಾಲಿಡಲಿದ್ದಾರೆ.

ಅರ್ಧ ಶತಮಾನ ಕರ್ನಾಟಕದ ಸಾಹಿತ್ಯ-ವಿಮರ್ಶೆ-ಚಿಂತನೆ ಸೇರಿದಂತೆ ಸಾಂಸ್ಕೃತಿಕ ಹಾಗೂ ರಾಜಕೀಯ ಆಗುಹೋಗುಗಳಲ್ಲಿ ಸಕ್ರಿಯರಾಗಿರುವ ಅನಂತಮೂರ್ತಿ ಕುರಿತಂತೆ 'ಲಂಕೇಶ್' ಒಂದು ವಿಶೇಷ ಸಂಚಿಕೆ ರೂಪಿಸಲಿದೆ.


ನಾಡಿನ ಅನೇಕ ಪ್ರಮುಖ ಬರಹಗಾರರು ಹಾಗೂ ಚಿಂತಕರೂ ಈ ವಿಶೇಷಾಂಕಕ್ಕೆ ಬರೆಯಲಿದ್ದಾರೆ. ನೀವು ನಿಮಗೆ ಇಷ್ಟವಾದ ಅನಂತಮೂರ್ತಿಯವರ ಕೃತಿ ಕುರಿತು ಸಂಕ್ಷಿಪ್ತವಾಗಿ focussed ಆಗಿ ಬರೆದು ಕಳುಹಿಸಿ.

ನಿಮ್ಮ ಬರಹ ನಮಗೆ ಡಿಸೆಂಬರ್ 13ರೊಳಗೆ ತಲುಪಲಿ.

ಕೈಬರಹ ಕಳಿಸುವವರು ಲಂಕೇಶ್ ವಿಳಾಸಕ್ಕೆ, ಇ-ಮೇಲ್ ಕಳಿಸುವುದಾದಲ್ಲಿ ನುಡಿ/ಬರಹದಲ್ಲಿ glankesh@gmail.com ಗೆ ಹಾಗೂ ಫ್ಯಾಕ್ಸ್ ಮಾಡುವುದಾದಲ್ಲಿ 080-26604536ಗೆ ಕಳುಹಿಸಿ.

ಹಾಗೆಯೇ...

ನಿಮ್ಮಲ್ಲಿ ಅನಂತಮೂರ್ತಿಯವರ ಅಪರೂಪದ ಫೋಟೋಗಳಿದ್ದಲ್ಲಿ ದಯಮಾಡಿ ಕಳುಹಿಸಿ.



ಅನಂತಮೂರ್ತಿ ವಿಶೇಷಾಂಕ ಬಿಡುಗಡೆ ಡಿಸೆಂಬರ್ 20ರಂದು

ಶ್ರೀರಾಂಪುರದಲ್ಲಿ ರಿವೆಂಜ್ ಪಾಲಿಟಿಕ್ಸ್

ನಾಗನ ಹತ್ಯೆಗೆ ಪೊಲೀಸರ ಬೆಂಬಲ

ಪತ್ನಿಯ ಕೈಕಡಿದರು, ತಮ್ಮನ ಬೆನ್ನು ಸೀಳಿದರು



ವಿ. ನಾಗರಾಜ್

ಶ್ರೀರಾಂಪುರದ ಗ್ಯಾಂಗ್‌ವಾರೋ, ಪಾಲಿಕೆ ಪಾಲಿಟಿಕ್ಸ್ ಜಿದ್ದಾಜಿದ್ದಿಯೋ ಅಥವಾ ದಿನೇಶ್ ಗುಂಡೂರಾವ್ ಮಂತ್ರಿಯಾದ ಪರಿಣಾಮವೋ ಸ್ಪಷ್ಟವಿಲ್ಲ. ಬಹುಶಃ ಇವೆಲ್ಲವೂ ಒಟ್ಟೊಟ್ಟಿಗೆ ಕೈಗೂಡಿರಲಿಕ್ಕೂ ಸಾಕು.

ಒಂದಲ್ಲ, ಎರಡಲ್ಲ ಒಟ್ಟು ನಲವತ್ತು ಮಂದಿ ಶಸ್ತ್ರಸಜ್ಜಿತ ದುಷ್ಕರ್ಮಿಗಳ ಗ್ಯಾಂಗ್ ನಡುರಸ್ತೆಯಲ್ಲಿ ಹಿಡಿದು ಕತ್ತರಿಸಿದ್ದು ಶ್ರೀರಾಂಪುರದ ಮಾಜಿ ಕೌನ್ಸಿಲರ್ ಲಕ್ಷ್ಮಿ ಎಂಬ ಮಹಿಳೆಯನ್ನು!

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಶ್ರೀರಾಂಪುರದ ಮಾಜಿ ಕೌನ್ಸಿಲರ್ ಲಕ್ಷ್ಮಿ ಬೇರೆ ಯಾರೂ ಅಲ್ಲ; ಹಾಲೀ ಮಂತ್ರಿ ದಿನೇಶ್ ಗುಂಡೂರಾವ್‌ರ ರಾಜಕೀಯ ಕಡುವೈರಿ ಮತ್ತು ಮಾಜಿ ಕೌನ್ಸಿಲರ್ ವಿ. ನಾಗರಾಜ್ ಉರ್ಫ್ ಹಾಲುನಾಗನ ಧರ್ಮಪತ್ನಿ!

ಮೊನ್ನೆ ಅಂದರೆ ನವೆಂಬರ್ 21ರ ರಾತ್ರಿ ಒಂಬತ್ತೂವರೆ ಹೊತ್ತಿಗೆ ಏಕಾಏಕಿ ಲಾಂಗು, ದೊಣ್ಣೆ ರಾಡುಗಳನ್ನು ಹಿಡಿದು ಮಾಜಿ ಕೌನ್ಸಿಲರ್ ನಾಗರಾಜ್ ಮನೆಗೇ ನುಗ್ಗಿ ಆತನ ಪತ್ನಿ, ತಮ್ಮ, ಬೆಂಬಲಿಗರು, ಮನೆಗೆಲಸದವರೆನ್ನದೆ ಅಟ್ಟಾಡಿಸಿ ಕತ್ತರಿಸಿದ ದುಷ್ಕರ್ಮಿಗಳು ಬಂದಿದ್ದು ನಾಗನನ್ನು ಮುಗಿಸಲೆಂದೇ? ಆತ ಸಿಗಲಿಲ್ಲ ಎಂದು ಆತನ ಪತ್ನಿಯನ್ನು ಕತ್ತರಿಸಲಾಯ್ತೆ? ಅಷ್ಟಕ್ಕೂ ಕಳೆದೆರಡು ವರ್ಷಗಳಿಂದ ದಿನೇಶ್ ಗುಂಡೂರಾವ್ ಮತ್ತು ಮಾಜಿ ಕೌನ್ಸಿಲರ್ ನಾಗರಾಜ್ ಮಧ್ಯೆ ಪದೇ ಪದೇ ಸಂಭವಿಸಿದ ಘರ್ಷಣೆಗಳ ಹಕೀಕತ್ತಾದರೂ ಏನು?

ಪತ್ನಿಯ ಕೈಕಟ್

ಸದ್ಯ ಮಲ್ಲಿಗೆ ನರ್ಸಿಂಗ್ ಹೋಮಿನಲ್ಲಿ ಆಘಾತ ತಾಳದೆ ಎದೆ ಹಿಡಿದುಕೊಂಡು ಮಲಗಿರುವ ವಿ. ನಾಗರಾಜ್ ಅಲಿಯಾಸ್ ಹಾಲುನಾಗನ ಜೊತೆಗೇ ಆತನ ಪತ್ನಿ ಲಕ್ಷ್ಮಿ ಕೈಗಳೆರಡಕ್ಕೂ ಬ್ಯಾಂಡೇಜ್ ಸುತ್ತಿಕೊಂಡು ಬಿದ್ದಿದ್ದಾಳೆ. ಮತ್ತೊಂದು ವಾರ್ಡಿನಲ್ಲಿ ಇನ್ನೂ ಪ್ರಜ್ಞೆ ಬಾರದೆ ನರಳುತ್ತಿರುವ ಆತನ ತಮ್ಮ ಧರ್ಮನ ಬೆನ್ನು ಲಾಂಗ್ ಏಟಿಗೆ ಸಿಲುಕಿ ಸೀಳಿಹೋಗಿದೆ. ನಾಗನ ಮನೆಗೆಲಸದ ಹೆಂಗಸು ಗಾಯಗೊಂಡು ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಾದರೆ ಆಕೆಯ 13 ವರ್ಷದ ಮಗ ಡೇವಿಡ್ ತಲೆ ಸೀಳಿಸಿಕೊಂಡು ನಿಮ್ಹಾನ್ಸ್ ಪಾಲಾಗಿದ್ದಾನೆ.

ಯಾಕೋ ನಾಗನ ಟೈಮೇ ಖರಾಬಾಗಿರುವಂತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ದಿನೇಶ್ ಗುಂಡೂರಾವ್ ವಿರುದ್ಧ ಗಾಂಧಿನಗರಕ್ಕೆ ನಿಂತು ಸರಿಸುಮಾರು 13 ಸಾವಿರದಷ್ಟು ಓಟುಗಿಟ್ಟಿಸಿದ್ದ ನಾಗರಾಜ್ ಮೂರನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯ್ತು. ಬಿಜೆಪಿಯ ಪಿ.ಸಿ. ಮೋಹನ್ ನಾಗನಿಂದಾಗಿಯೇ ಸೋತುಹೋದರು. ಅಂತಾ ಸುಭಾಷ್ ಭರಣಿಯೇ ನಾಗನಿಗಿಂತ ಐದು ಸಾವಿರ ಓಟು ಕಮ್ಮಿ ಪಡೆಯಬೇಕಾಯ್ತು.


ಆದರೆ ವಿ. ನಾಗರಾಜ್ ತಾಕತ್ತೇ ಬೇರೆ. ಯಾವುದೇ ಪಕ್ಷವಿಲ್ಲದೆ ಶ್ರೀಮಂತಿಕೆ ಉದ್ದಿಮೆ, ಪಾರ್ಟಿ ಫಂಡು ಏನೊಂದೂ ಇಲ್ಲದೆ ಕೇವಲ ತನ್ನ ನಾಮಬಲದ ಮೇಲಷ್ಟೇ ತನ್ನ ಜೊತೆ ತನ್ನ ಪತ್ನಿ ಲಕ್ಷ್ಮಿಯನ್ನೂ ಪಕ್ಷೇತರವಾಗಿ ಗೆಲ್ಲಿಸಿಕೊಂಡವನು ನಾಗರಾಜ್. ಅದಕ್ಕೂ ಮುನ್ನ ಗಾಂಧಿನಗರದ ವಿಧಾನಸಭೆಗೆ ದಿನೇಶ್ ವಿರುದ್ಧ ನಾಗ ಕೇವಲ ಐನೂರು ಮತಗಳಿಂದ ಸೋತಿದ್ದ. ಅಂದರೆ ಇನ್ನೂ ಐನೂರು ಮತ ಗಿಟ್ಟಿಸಿದರೆ ತಾನೇ ಗಾಂಧಿನಗರದ ಶಾಸಕನಾಗುತ್ತಿದ್ದ. ಬತ್ತಿ ಉಜ್ಜುವ ನಿರ್ಗತಿಕ ಮಹಿಳೆಯರು, ಕೂಲಿಗಳು, ಕಡು ಬಡವರನ್ನು ಕಟ್ಟಿಕೊಂಡು ಶಾಲಾ ಮಕ್ಕಳಿಗೆ ನೋಟ್‌ಬುಕ್, ಬಟ್ಟೆಬರೆ ಕೊಡಿಸಿಯೇ ರಾಷ್ಟ್ರೀಯ ಪಕ್ಷಗಳ ಘಟಾನುಘಟಿಗಳಿಗೆ ನೀರು ಕುಡಿಸಿದ ನಾಗನ ಕೇಡುಗಾಲ ಶುರುವಾಗಿದ್ದು ಕಳೆದ ಪಾಲಿಕೆ ಚುನಾವಣೆಯಲ್ಲಿ.

ಆತ ಪ್ರತಿನಿಧಿಸುತ್ತಿದ್ದ ಸುಭಾಷ್‌ನಗರ ಮತ್ತು ಆತನ ಪತ್ನಿ ಗೆದ್ದಿದ್ದ ರಾಮಚಂದ್ರಪುರ ವಾರ್ಡುಗಳನ್ನು ಶಾಸಕ ದಿನೇಶ್ ನಿಂತು ಪರಿಶಿಷ್ಟ ಮೀಸಲಿಗೊಳಪಡಿಸದೇ ಹೋಗಿದ್ದರೆ ಇವತ್ತಿಗೂ ಪತ್ನಿ ಸಮೇತ ನಾಗ ಒಂದಲ್ಲ ಎರಡು ಕೌನ್ಸಿಲರ್ ಹುದ್ದೆಗಳನ್ನು ಆಳುತ್ತಿದ್ದ!


ಚಕ್ರೆ ವಿರುದ್ಧ...

ಹಾಗಂತ ನಾಗ ಸುಮ್ಮನಾಗಲಿಲ್ಲ. ತನಗೆ ಅಷ್ಟೊಂದು ಪರಿಚಯವಿಲ್ಲದ ಪ್ರಕಾಶ್‌ನಗರ ವಾರ್ಡಿಗೆ ನಿಂತು ಹೆಣಗಾಡಿದನಾದರೂ ಗೆಲ್ಲಲಿಲ್ಲ. ತಾನು ಆತನಕ ಪ್ರತಿನಿಧಿಸುತ್ತಿದ್ದ ಸುಭಾಷ್‌ನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಮಲ್ಲೇಶ್‌ರನ್ನು ಒಳಗೊಳಗೆ ಬೆಂಬಲಿಸಿ ಶಾಸಕ ದಿನೇಶ್ ಪರಮಾಪ್ತ ಗೋವಿಂದರಾಜು ಸೋಲಿಗೆ ಕಾರಣನಾದ. ಹಿಂದೊಮ್ಮೆ ಕೌನ್ಸಿಲರ್ ಆಗಿದ್ದ ದಿನೇಶ್ ಆಪ್ತ ಎಲ್. ಗೋವಿಂದರಾಜು ವಿರುದ್ಧ ನಾಗನ ಸಿಟ್ಟಿಗೆ ಇನ್ನೂ ಒಂದು ಕಾರಣವಿತ್ತು. ಅದು ನಾಗನ ಪತ್ನಿ ಲಕ್ಷ್ಮಿ ಪ್ರತಿನಿಧಿಸುತ್ತಿದ್ದ ರಾಮಚಂದ್ರಪುರ ವಾರ್ಡಿಗೆ ಕೌನ್ಸಿಲರ್ ಆಗಿ ಗೆದ್ದ ಚಕ್ರೆ ಅಲಿಯಾಸ್ ಚಕ್ರವರ್ತಿಯ ಪತ್ನಿ ಕ್ವೀನ್ ಎಲಿಜಬೇತ್‌ರ ಖೊಟ್ಟಿ ಜಾತಿ ಪತ್ರ.

ಚಕ್ರೆ ಪತ್ನಿ ಜಾತಿಯಲ್ಲಿ ಕ್ರಿಶ್ಚಿಯನ್ ಆಗಿದ್ದರೂ ಆಕೆ ಪರಿಶಿಷ್ಟ ಜಾತಿಗೆ ಸೇರಿದವರೆಂಬ ಪ್ರಮಾಣಪತ್ರವೊಂದನ್ನು ಗೋವಿಂದರಾಜು ಸೃಷ್ಟಿಸಿಕೊಟ್ಟರೆಂದೂ ಹಾಗೆ ಪರಿಶಿಷ್ಟ ಜಾತಿ ಪತ್ರ ಚಕ್ರೆ ಪತ್ನಿಗೆ ಸಿಗದಿದ್ದರೆ ಯಾರಾದರೂ ತನ್ನ ಶಿಷ್ಯನ ಪತ್ನಿ ನಿಲ್ಲಿಸಿ ಹಿಂಬಾಗಿಲಿಂದ ಕೌನ್ಸಿಲರ್ ಗಿರಿ ಹಿಡಿಯಬಹುದಿತ್ತೆಂದೂ ನಾಗ ಲೆಕ್ಕ ಹಾಕಿದ್ದ. ಗೋವಿಂದರಾಜು ತನ್ನ ಚೇಲಾ ಪುಟ್ಟ ಎಂಬಾತನನ್ನು ಬಿಟ್ಟು ಚಕ್ರೆ ಪತ್ನಿಗೆ ನಕಲಿ ಜಾತಿಪತ್ರ ಕೊಡಿಸಿದ್ದೇ ತನಗೆ ಮುಳುವಾಯಿತೆಂದು ಕುದಿಯುತ್ತಿದ್ದ ನಾಗ ಚಕ್ರೆ ಪತ್ನಿಯ ಜಾತಿ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ. ಮತ್ತೊಂದೆಡೆ ಗೋವಿಂದರಾಜು ಮೇಲೆ ದಾಳಿಯೂ ನಡೆದುಹೋಯಿತು. ಒಂದೆಡೆ ಮಾಜಿ ಕೌನ್ಸಿಲರ್ ಗೋವಿಂದರಾಜು ಮತ್ತೊಂದೆಡೆ ರಾಮಚಂದ್ರಪುರದ ಚಕ್ರೆಯ ವಿರುದ್ಧ ತಿರುಗಿ ಬಿದ್ದ ನಾಗ ಅಷ್ಟಕ್ಕೇ



ದಿನೇಶ್ ಗುಂಡೂರಾವ್



ಕಮೀಷನರ್ ಔರಾದ್‌ಕರ್

ಸುಮ್ಮನಾಗಿದ್ದರೆ ಆ ಮಾತು ಬೇರೆ.

ತನ್ನೆರಡೂ ವಾರ್ಡುಗಳನ್ನು ಮೀಸಲು ಕ್ಯಾಟ... ಮಾಡುವ ಮೂಲಕ ತನ್ನ ಮತ್ತು ಪತ್ನಿ ಇ... ಕೌನ್ಸಿಲರ್‌ಗಿರಿಯನ್ನೂ ಕಳೆದ ಶಾಸಕ ದಿನೇಶ್ ವಿ... ಯುದ್ಧಕ್ಕೆ ನಿಂತ ನಾಗ ಇಡೀ ಗಾಂಧಿನಗರ ಕ್ಷೇತ್ರ... ನಡೆದ ಬೋಗಸ್ ಕಾಮಗಾರಿಗಳ ವಿರುದ್ಧ ಲೋಕಾಯ... ದೂರು ಕೊಟ್ಟ. ಅದು ಕಮ್ಮಿಯೆಂದರೂ 800 ಕೋ... ರೂಪಾಯಿಗಳ ಹಗರಣ. ನಾಗನ ದೂರಿನಿಂದಾಗಿ ದಿನೇ... ಪರಮಾಪ್ತ ಬಿಬಿಎಂಪಿ ಇಂಜಿನಿಯರ್ ವೆಂಡನ್ ಜೈ... ಪಾಲಾಗುವಂತಾಯ್ತು. ಸಾಲದ್ದಕ್ಕೆ ಮೊನ್ನೆ ನಡೆದ ವಿಧಾನ... ಚುನಾವಣೆಯಲ್ಲಿ ದಿನೇಶ್ ಗುಂಡೂರಾವ್ ಅಕ್ರಮ... ದ್ದಾರೆಂದು ಹೈಕೋರ್ಟ್ ಮೆಟ್ಟಿಲೇರಿಬಿಟ್ಟ. ಅ... ಗಾಂಧಿನಗರದ ಇಡೀ ದಿನೇಶ್ ಬಳಗವನ್ನೇ ... ಮೇಲೆಳೆದುಕೊಂಡು ಬಿಟ್ಟ.

ಹಳೇ ರೌಡಿ ಮೈಲಾರಿ

ಯಾವತ್ತು ಕಾಂಗ್ರೆಸ್ ಅಧಿಕಾರಕ್ಕೆ ಬಂತೋ ನಾ... ಕೇಡುಗಾಲವೂ ಶುರುವಾಗಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾ... ನಾಗನನ್ನು ಗೂಂಡಾ ಕಾಯ್ದೆಯಡಿ ಜೈಲಿಗೆ ದಬ್ಬ... ತ್ತಾದರೂ 20 ದಿನಗಳ ಕಾಲ ಜೈಲಿನಲ್ಲಿದ್ದ ... ಹೈಕೋರ್ಟ್ ಮೊರೆ ಹೊಕ್ಕು ಗೂಂಡಾ ಕಾಯ್ದೆ ಬಳ... ಅನ್ಯಾಯವೆಂದು ಪೊಲೀಸ್ ಅಧಿಕಾರಿಗಳಿಗೆ ಛೀವ... ಹಾಕಿಸಿದ್ದ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ದಿನ... ಮಂತ್ರಿಯಾಗಿದ್ದೇ ನಾಗನ ದುರ್ದೆಸೆ ಉಲ್ಬಣವಾಯಿ... ಚಕ್ರೆ, ಗೋವಿಂದರಾಜು, ಮಂತ್ರಿ ದಿನೇಶ್ ಥರದವ... ಎದುರು ಹಾಕಿಕೊಂಡಿದ್ದ ನಾಗನಿಗೆ ಹೊಸ ತಲೆನೋವೊ... ಸೃಷ್ಟಿಯಾಗಿತ್ತು.

ಅವನು ಶ್ರೀರಾಂಪುರದ ಹಳೇ ಘಾತಕಿ ಮೈಲಾರಿ!

ಇಲ್ಲಿಗೆ 22 ವರ್ಷಗಳ ಹಿಂದೆ ಅಂದರೆ 19... ಜೂನ್ 15ರಂದು ನಡುರಸ್ತೆಯಲ್ಲಿ ನಾಗನನ್ನು ಲಾಂಗ್... ಕೊಲ್ಲಲೆತ್ನಿಸಿದವನು ಮೈಲಾರಿ. ಸ್ವತಂತ್ರಪಾಳ್ಯದಲ್ಲಿ ಮೈ... 3ನೇ ಮುಖ್ಯರಸ್ತೆಯಲ್ಲಿದ್ದರೆ ನಾಗನ ಮನೆಯಿರುವ... ನಾಲ್ಕನೇ ಮೇನ್‌ನಲ್ಲಿ. ಅಂದರೆ ಇಬ್ಬರ ಮನೆಗಳ ... ಮೂರು ರಸ್ತೆಗಳ ಅಂತರವಿದೆ. ಮೈಲಾರಿಗೆ ... ಮುತ್ತುವನ್ನೂ ಮೀರಿಸುವಂತ ಐವರು ಅಕ್ಕಂದಿರು ... ಗೋಪಿ, ಶಂಕರ್, ಮಣಿವರ್ಮಾ ಎಂಬ ನಾಲ್ವರು ತಮ್ಮಂದಿರಿದ್ದಾರೆ. ತಮ್ಮಂದಿರ ಘಟವಾಣಿ ಪತ್ನಿಯ... ಅಕ್ಕಂದಿರ ಕುಡುಕ ಗಂಡಂದಿರು, ಅವರ ಕಿಡಿಗೇಡಿ ಮ... ಸಂಬಂಧಿಕರೆಲ್ಲ ಸೇರಿದರೆಂದರೆ ಸ್ವತಂತ್ರಪಾಳ್ಯದಲ್ಲಿ ಅವ... ಹದಿನೈದಿಪ್ಪತ್ತು ಮನೆಗಳಾಗುತ್ತವೆ.

ಆ ಕಾಲದಿಂದಲೂ ವಸೂಲಿ, ಪುಂಡಾ... ಮಾಡಿಕೊಂಡೇ ಹಾವಳಿಯಿಡುತ್ತಿದ್ದ ಮೈಲಾರಿ ರೋಲ್... ಹುಟ್ಟಲಿಲ್ಲ ಎಂಬ ಒಂದೇ ಕಾರಣಕ್ಕೆ ನಾಗನ ... ಯತ್ನಿಸಿದ್ದ. ಹಾಗೆ ನಾಗನ ಮೇಲೆ ಲಾಂಗ್ ... ಪರಾರಿಯಾದ ಮೈಲಾರಿ ವಿರುದ್ಧ ಶ್ರೀರಾಂಪುರ ಪೊ... ಠಾಣೆಯಲ್ಲಿ ದೂರು ದಾಖಲಾಯಿತಾದರೂ ಇವ... ಪೊಲೀಸರು ಆತನನ್ನು ಹಿಡಿಯುತ್ತಿಲ್ಲ. ಏಕೆಂದರೆ ಮೈ... ದಿನೇಶ್ ಪರಮಾಪ್ತ ಮಾಜಿ ಕೌನ್ಸಿಲರ್ ಗೋವಿಂದ... ಕುಮ್ಮಕ್ಕು. ಇವತ್ತಲ್ಲ ನಾಳೆ ಶ್ರೀರಾಂಪುರದಿಂದ ಮತ್ತೆ ಕೌನ್ಸಿಲರ್ ಆಗಲೇಬೇಕೆಂಬ ಹಠಕ್ಕೆ ಗೋವಿಂದರಾಜು ನಾಗನ ವಿರುದ್ಧದ ಮೈಲಾರಿ ಪಡೆ...

ಆಸ್ಪತ್ರೆಗೇ ನುಗ್ಗಿ ನಾಗನನ್ನು ಎಳೆದೊಯ್ದ ಪೊಲೀಸರು





ಸಿಸಿ ಟಿವಿ ಸೆರೆ ಹಿಡಿದ ದಾಳಿಯ ದೃಶ್ಯ. ಅಟ್ಟಾಡಿಸುತ್ತಿರುವ ರೌಡಿ ಗ್ಯಾಂಗ್ ಅಟ್ಟಹಾಸ.


ಏಕಾಏಕಿ ನುಗ್ಗಿದ ನಲವತ್ತು ಮಂದಿ ದುಷ್ಕರ್ಮಿಗಳ ಕೈಯಲ್ಲಿ ದೊಣ್ಣೆ, ರಾಡು, ಲಾಂಗ್‌ಗಳಿರುವ ದೃಶ್ಯವನ್ನು ನಾಗರಾಜ್ ಮನೆಗೆ ಅಳವಡಿಸಿದ್ದ ಸಿಸಿ ಟೀವಿ ಕ್ಯಾಮೆರಾಗಳು ಸ್ಪಷ್ಟವಾಗೇ ಚಿತ್ರಿಸಿಕೊಂಡಿವೆ. ನಾಗರಾಜ್ ಪತ್ನಿ ಲಕ್ಷ್ಮಿ, ತಮ್ಮ ಧರ್ಮ, ಕೆಲಸದ ಹೆಂಗಸು ಅಲಮೇಲು, ಆಕೆಯ ಮಗ ಡೇವಿಡ್‌ರನ್ನು ಹಿಡಿದು ಕತ್ತರಿಸುತ್ತಿರುವ ದೃಶ್ಯವಂತೂ ಭಯಾನಕವಾಗಿದೆ. ಗಲಾಟೆ ನಡೆಯುತ್ತಿರುವಾಗಲೇ ಶ್ರೀರಾಂಪುರ ಪೊಲೀಸರು ಸ್ಥಳಕ್ಕಾಗಮಿಸಿ ಅನಾಹುತ ತಪ್ಪಿಸಿದ್ದಾರೆ. ಆ ಪ್ರಕಾರವೇ ಲಾಂಗು, ರಾಡಿನಿಂದ ಹೊಡೆಯುತ್ತಿದ್ದವರನ್ನು ಪೊಲೀಸರು ಬಂಧಿಸಬೇಕಿತ್ತಲ್ಲವೇ?

ವಿಕಟವೆಂದರೆ ಸ್ಥಳಕ್ಕಾಗಮಿಸಿದ ಪೊಲೀಸರು ಲಾಂಗು, ದೊಣ್ಣೆಗಳನ್ನು ಹಿಡಿದು ಬಡಿಯುತ್ತಿದ್ದ ದೃಶ್ಯ ಕಂಡೂ ಯಾರೊಬ್ಬರನ್ನೂ ಬಂಧಿಸುವುದಿಲ್ಲ. ಕನಿಷ್ಠ ಮಾಜಿ ಪಾಲಿಕೆ ಸದಸ್ಯ ಲಕ್ಷ್ಮಿಯನ್ನು ಆಸ್ಪತ್ರೆಗೆ ಸಾಗಿಸುವುದಿರಲಿ, ದುಷ್ಕರ್ಮಿಗಳಿಂದ ನಾಗರಾಜ್ ಮನೆಯವರನ್ನು ರಕ್ಷಿಸಲು ಪೊಲೀಸರನ್ನೂ ಹಾಕುವುದಿಲ್ಲ. ಇನ್ನೂ ವಿಪರ್ಯಾಸವೆಂದರೆ ಗ್ಯಾಂಗ್ ಕಟ್ಟಿಕೊಂಡು ರಕ್ತ ಹರಿಸಿದವರಿಂದಲೇ ನಾಗರಾಜ್ ವಿರುದ್ಧ ಕೊಲೆ ಬೆದರಿಕೆ ಹಾಕಿದ ದೂರನ್ನು ದಾಖಲಿಸಿದ್ದಾರೆ. ರಕ್ತ ಸುರಿಸುತ್ತಲೇ ಠಾಣೆಗೆ ಬಂದು ದೂರು ಕೊಟ್ಟ ನಾಗರಾಜ್ ಪತ್ನಿ, ತಮ್ಮನ ದೂರನ್ನು ಪಡೆದೂ ದುಷ್ಕರ್ಮಿಗಳನ್ನು ಬಂಧಿಸುವ ಬಗ್ಗೆ ಯಾವುದೇ ಆಸಕ್ತಿ ವಹಿಸದ ಪೊಲೀಸರು, ಸ್ಥಳಕ್ಕೆ ಬಾರದೆ ಆಘಾತಕ್ಕೀಡಾಗಿ ಮಲ್ಲಿಗೆ ನರ್ಸಿಂಗ್ ಹೋಮಿನಲ್ಲಿ ಮಲಗಿದ್ದ ನಾಗರಾಜ್‌ನನ್ನು ಬಂಧಿಸುವ ಕಾರ್ಯಾಚರಣೆಗಿಳಿಯುತ್ತಾರೆ.

ಆಸ್ಪತ್ರೆಯ ವೈದ್ಯರ ಒತ್ತಾಯಕ್ಕೂ ಜಗ್ಗದೆ ಶ್ರೀರಾಂಪುರ ಇನ್ಸ್‌ಪೆಕ್ಟರ್ ಜನಾರ್ದನ್ ಮಲ್ಲಿಗೆ ನರ್ಸಿಂಗ್ ಹೋಮಿಗೇ ನುಗ್ಗಿ ನಾಗರಾಜ್‌ನನ್ನು ಎಳೆದೊಯ್ಯುತ್ತಾರೆ. ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ದಿನಪೂರ್ತಿ ಕೂರಿಸಿ ಕೊಲೆ ಬೆದರಿಕೆ ಕೇಸು ಹಾಕಿ ನಾಗರಾಜ್‌ನನ್ನು ಕೋರ್ಟಿಗೆ ಸಾಗಿಸುತ್ತಾರೆ. ಕೋರ್ಟು ಜಾಮೀನೇನೋ ಕೊಟ್ಟಿದೆ ನಿಜ. ಪ್ರಶ್ನೆಯೆಂದರೆ ತಮ್ಮ ಕಣ್ಣಾರೆ ಲಾಂಗು, ಮಚ್ಚು ಹಿಡಿದು ನಾಗರಾಜ್ ಮನೆಯವರನ್ನು ಕಿಡಿಗೇಡಿಗಳು ಅಟ್ಟಾಡಿಸುತ್ತಿದ್ದ ದೃಶ್ಯವನ್ನು ಕಂಡೂ ಅಪರಾಧಿಗಳ ಬೇಟೆಗಿಳಿಯಬೇಕಿದ್ದ ಪೊಲೀಸರು ಆಸ್ಪತ್ರೆಯಲ್ಲಿ ಮಲಗಿದ್ದ ನಾಗನನ್ನು ಎಳೆದೊಯ್ದು ಕೇಸು ಹಾಕುವಲ್ಲಿ ಅಷ್ಟೊಂದು ಆಸಕ್ತಿ ವಹಿಸಿದ್ದೇಕೆ?

ಸ್ಥಳಕ್ಕೇ ಬಾರದೆ, ಪತ್ನಿ, ತಮ್ಮನ ಮೇಲಾದ ದಾಳಿ ಸಹಿಸಿಯೂ ಕೆರಳದೆ ಆಸ್ಪತ್ರೆ ಸೇರಿದ್ದ ನಾಗರಾಜ್ ನಡುರಸ್ತೆಯಲ್ಲಿ ಲಾಂಗು, ರಾಡು ಹಿಡಿದು ರಕ್ತ ಹರಿಸಿದವರಿಗಿಂತಲೂ ದೊಡ್ಡ ಅಪರಾಧಿಯೆ? ಹೊಡೆದವರಿಗಿಂತ ಹೊಡೆಸಿಕೊಂಡವನೇ ಕಾನೂನಿನ ಕಣ್ಣಿಗೆ ತಪ್ಪಿತಸ್ಥನೇ? ಪಾಪ, ಶ್ರೀರಾಂಪುರ ಪೊಲೀಸರ ಘಜೀತಿಯೇ ಅಂಥಾದ್ದು! ಆದರೆ ಈ ಪಕ್ಷಪಾತ ಹಾಗೂ ನಾಗನ ವಿರುದ್ಧದ ಪೂರ್ವಾಗ್ರಹಗಳನ್ನು ನೋಡಿದರೆ ಪೊಲೀಸರಿಗೂ 'ನ್ಯಾಯ' ಬೇಕಿಲ್ಲ ಅನಿಸುವಂತಿದೆ!

ವಸಂತ ಹೊರಟ್ಟಿಯ ರಾಜಕೀಯ ರಂಗ ತಾಲೀಮು!



ವಸಂತ ಹೊರಟ್ಟಿ


ಕಾರವಾರದಲ್ಲಿ ಕಳೆದ ವಾರ 'ಕರಾವಳಿ ಉತ್ಸವ' ಅದ್ದೂರಿಯಾಗಿ ನಡೆಯಿತು. ನಾಲ್ಕು ವರ್ಷದ ನಂತರ ನಡೆದ ಒಣ ಆಡಂಬರದ ಅಪ್ಪಟ ಸರ್ಕಾರಿ ಹಬ್ಬವಿದು. ಜನರಂತೂ ಅರಬ್ಬೀ ಸಮುದ್ರದ ಅಲೆಯಂತೆ ಉಕ್ಕುಕ್ಕಿ ಹರಿದುಬಂದಿದ್ದರು. ಬಿಜೆಪಿಯ ಹೇತ್ಲಾಂಡಿ ಕಾಗೇರಿ ಯೋಜನೆಯಿಂದ ಆಗದ್ದು ಕಾಂಗ್ರೆಸ್‌ನ ಆರ್ಭಟಗಾರ ದೇಶಪಾಂಡೆ ಮಾಮಾನಿಂದ ಆಗಿದೆಯೆಂಬ ಅದ್ಧ ಇಮೇಜು ಈ ಬಾರಿ ಉತ್ಸವಕ್ಕೆ ಅಂಟಿಕೊಂಡಿತ್ತು. ಬಹುದಿನದ ಬಳಿಕ ನಡೆದ ಈ ಹಬ್ಬದಲ್ಲಿ ಜನರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಕಂತ್ರಿ ರಾಜಕಾರಣಿಗಳಿಗೆ ಇತ್ತು. ಹೀಗಾಗಿ ಈ ಕರಾವಳಿ ಉತ್ಸವದಲ್ಲಿ ಠಳಾಯಿಸಿ ಜನರ ಗಮನ ಸೆಳೆಯಲು ತರಹೇವಾರಿ ಪುಢಾರಿಗಳು ಸ್ಕೆಚ್ ಹಾಕಿಕೊಂಡು ನಾಚ್ ಮಾಡಿದರು...


ಈ ಜಾತ್ರೆಯ ಗಡಿಬಿಡಿಯಲ್ಲಿ ಜನರ ಮರುಳು ಮಾಡುವ ಅಡ್ಡ ಕಸುಬು ಹುಬ್ಬಳ್ಳಿ ಮೂಲದ ವಸಂತ ಹೊರಟ್ಟಿ ಎಂಬ ಮೀಸೆಯಿಲ್ಲದ ಹುಡುಗ ಮಾಡಿದ್ದು ಜಿಲ್ಲೆಯ ರಾಜಕಾರಣದ ಜಗಲಿಯಲ್ಲಿ ನಾನಾ ನಮೂನೆಯ ಚರ್ಚೆಗಳನ್ನೆಬ್ಬಿಸಿ ಬಿಟ್ಟಿದೆ. ಈತ ಸ್ಥಳೀಯ ಪತ್ರಿಕೆಯಲ್ಲಿ ಸಮಗ್ರ ಉತ್ತರ ಕನ್ನಡ ಜನತೆಗೆ ಕರಾವಳಿ ಉತ್ಸವದ ಹಾರ್ದಿಕ ಶುಭಾಷಯಗಳು' ಎಂಬ ಜಾಹೀರಾತು ಹಾಕಿಸಿಕೊಂಡಿದ್ದ; ತನ್ನ ಫೋಟೋದ ಪಕ್ಕ ಹುಬ್ಬಳ್ಳಿ ಆಕ್ಸ್‌ಫರ್ಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಚೇರ್‌ಮನ್, ಬೆಳಗಾವಿಯ ರಾಣಿ ಚೆನ್ನಮ್ಮ ವಿವಿಯ ಸಿಂಡಿಕೇಟ್ ಸದಸ್ಯನೆಂದು ಬರೆದು ಸ್ವಯಂ ಪರಿಚಯಿಸಿಕೊಂಡಿದ್ದ. ಈ ಜಾಹೀರಾತು ಶುದ್ಧ ಸ್ವಾರ್ಥದ್ದಾಗಿದ್ದೇ ವಿನಃ ವಸಂತ ಹೊರಟ್ಟಿಗೆ ಉತ್ತರ ಕನ್ನಡಿಗರ ಮೇಲೆ ಪ್ರೀತಿ-ಕಾಳಜಿ-ಅಭಿಮಾನ ಯಾವುದೂ ಇರಲಿಲ್ಲ...

ಸದ್ಯ, ಅಗಂತುಕ ಆದ್ಯಾಕೆ ಉತ್ತರ ಕನ್ನಡದಲ್ಲಿ ಮಿಂಚಿಕೊಳ್ಳಲು ಕಾತರಿಸುತ್ತಿದ್ದಾನೆ? ಈತನ ಹೆತ್ತವರ್‍ಯಾರು? ಉತ್ತರ ಕನ್ನಡದ ಕೋಟಾದಲ್ಲಿ ಈತ ಯಾವುದಾದರೂ ಪಾಲಿಟಿಕಲ್ ಫೋರ್ಸ್‌ಗಾಗಿ ತವಕಿಸುತ್ತಿದ್ದಾನಾ? ಈಗ ಇಂಥ ಪ್ರಶ್ನಾವಳಿಗಳು ಜಿಲ್ಲೆಯ ಜನರ ತಲೆ ತಿನ್ನುತ್ತಿವೆ.


ನೂರಕ್ಕೆ ನೂರು ದಿಟ. ವಸಂತ ಹೊರಟ್ಟಿ ರಾಜಕೀಯ ಸ್ಥಾನಕ್ಕಾಗಿಯೇ ಈ ಮಸಲತ್ತು ಮಾಡುತ್ತಿದ್ದಾನೆ. ಉತ್ತರ ಕನ್ನಡದ ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ-ಭೌಗೋಳಿಕ ಉದ್ದಗಲದ ಅಂತಪಾರೇ ಗೊತ್ತಿಲ್ಲದ ವಸಂತ ವಂಶಪಾರಂಪರ್ಯ ರಾಜಕೀಯ ವಾರಸುದಾರಿಕೆ ಕನಸು ಕಾಣುತ್ತಿದ್ದಾನೆ. ಈತ ಚಿರಪರಿಚಿತ ಎಮ್ಮೆಲ್ಸಿ ಬಸವರಾಜ್ ಹೊರಟ್ಟಿಯ ಪುತ್ರ ರತ್ನ! ಕಾಲುಶತಮಾನದಿಂದ ಶಿಕ್ಷಕರ ಪ್ರತಿನಿಧಿಯಾಗಿ ಹೊರಟ್ಟಿ ವಿಧಾನ ಪರಿಷತ್‌ನಲ್ಲಿದ್ದರು. ಹೊರಟ್ಟಿಗೆ ಮಗನನ್ನೂ ತನ್ನಂತೆಯೇ ಎಮ್ಮೆಲ್ಸಿ ಮಾಡುವ ಚಟ ಕಾಡತೊಡಗಿದೆ. ಹಾಗಂತ ತನ್ನ ಶಿಕ್ಷಕರ ಕ್ಷೇತ್ರ ಬಿಟ್ಟುಕೊಡುವ ಮನಸ್ಸು ಬಸುಗಿಲ್ಲ. ಮಗನನ್ನು ಉತ್ತರ ಕನ್ನಡ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಒಳಗೊಂಡ ಪಶ್ಚಿಮ ಪದವೀಧರ ಕ್ಷೇತ್ರದಿಂದ ಕೌನ್ಸಿಲ್‌ಗೆ ಕಳಿಸುವ ಕಟಪಟೆಯಲ್ಲಿ ಬಸು ಬಿಜಿಯಾಗಿದ್ದಾರೆ!

ಅವಿಭಜಿತ ಧಾರವಾಡ ಜಿಲ್ಲೆಯ ರಾಜಕಾರಣದಲ್ಲಿ ರಾರಾಜಿಸುತ್ತಿರುವ ಕಾಂಗ್ರೆಸ್‌ನ ಎಚ್.ಕೆ. ಪಾಟೀಲ್ ಮತ್ತು





ಎಚ್.ಕೆ. ಪಾಟೀಲ್



ಮೋಹನ್ ಲಿಂಬಿಕಾಯಿ

ಜೆಡಿಎಸ್‌ನ ಬಸವರಾಜ್ ಹೊರಟ್ಟಿ ಪ್ರಬಲರು. ಇವರಿಬ್ಬರದೂ ಪಕ್ಷ ಮಾತ್ರ ಬೇರೆ-ಬೇರೆ. ಕಾಲು ಶತಮಾನದಿಂದ ಈ ಇಬ್ಬರೂ ಗೆಳೆಯರು ಪಶ್ಚಿಮ ಪದವೀಧರ ಮತ್ತು ಪಶ್ಚಿಮ ಶಿಕ್ಷಕ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾ ಬಂದಿದ್ದಾರೆ. ಆದರೆ ಕಳೆದ ಎಲೆಕ್ಷನ್‌ನಲ್ಲಿ ಎಚ್.ಕೆ. ಪಾಟೀಲ್ ಬಿಜೆಪಿಯ ಮೋಹನ್ ಲಿಂಬಿಕಾಯಿ ಎಂಬ ಅನಾಮಧೇಯನ ಎದುರು ಸೋತುಹೋದರು. ಪಾಟೀಲರ ಬೆಂಬಲದಿಂದ ಹೊರಟ್ಟಿ ಎದುಸಿರು ಬಿಡುತ್ತಲೇ ಗೆದ್ದರು. ಬಿಜೆಪಿಯ ಮೋಹನ ಲಿಂಬಿಕಾಯಿ ತನ್ನ ಎಮ್ಮೆಲ್ಸಿಗಿರಿಯ ಮುಕ್ಕಾಲು ಅವಧಿಯಲ್ಲಿ ನಾಮ್‌ಕಾವಾಸ್ತೆ ಎಮ್ಮೆಲ್ಸಿಯಾಗಿ ಕಾಲ ಹಾಕಿದರು.

ಯಡ್ಡಿ ಕೆಜೆಪಿ ಕಟ್ಟಿದಾಗ ಅದ್ಯಾವುದೋ ಭಯ-ಋಣಭಾರದಲ್ಲಿ ಕಂಗೆಟ್ಟ ಲಿಂಬಿಕಾಯಿ ಬಿಜೆಪಿ ಬಿಟ್ಟು ಬರಬೇಕಾಯ್ತು. ಕೆಜೆಪಿಯಿಂದ ಅಸೆಂಬ್ಲಿಗೂ ಸ್ಪರ್ಧಿಸಿದ ಲಿಂಬಿಕಾಯಿ ಮಕಾಡೆ ಮಲಗಿದರು. ದಿನಗಳೆದಂತೆ ಲಿಂಬಿಕಾಯಿಗೆ ಕೆಜೆಪಿಯಲ್ಲಿ ಕಿಮ್ಮತ್ತೇ ಇಲ್ಲವಾಯ್ತು. ಒಳಗೊಳಗೆ ಮಾಜಿ ಸಿಎಂ ಶೆಟ್ಟರ್ ಸಹವಾಸ ಶುರು ಹಚ್ಚಿಕೊಂಡರು; ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ್ ಜೋಷಿ ಪಾದಕ್ಕೆ ಡೈ ಹೊಡೆಯತೊಡಗಿದರು. ಇದನ್ನು ಕೇಳಿದ ಯಡ್ಡಿ 'ಹಚಾ' ಎಂದು ಕೆಜೆಪಿಯಿಂದ ಲಿಂಬಿಕಾಯಿಯನ್ನು ಓಡಿಸಿದರು. ಬಿಜೆಪಿಗೆ ನೆಗೆದ ಲಿಂಬಿಕಾಯಿ ಕಣ್ಣು ಪಶ್ಚಿಮ ಪದವೀಧರ ಕ್ಷೇತ್ರದ ಮೇಲಿತ್ತು. ಈ ಬಾರಿ ಬಿಜೆಪಿ ಟಿಕೆಟ್ ಏನಿದ್ದರೂ ಎಸ್.ವಿ. ಸಂಕನೂರ್‌ಗೆಂದು ಶೆಟ್ಟರ್ ಎಷ್ಟೇ ಹೇಳಿದರೂ ಲಿಂಬಿಕಾಯಿ ಮಾತ್ರ ಹಠ ಬಿಡುತ್ತಿಲ್ಲ. ತಾನೇ ಬಿಜೆಪಿ ಹುರಿಯಾಳೆಂದು ಕಂಡ-ಕಂಡಲ್ಲಿ ಹೇಳಿಕೊಂಡು ತಿರುಗಾಡುತ್ತಿದ್ದಾರೆ ಮಾಜಿ ಎಮ್ಮೆಲ್ಸಿ ಸಾಹೇಬರು. ಆದರದು ಅಷ್ಟು ಸುಲಭವೇನಲ್ಲ.

ಕಳೆದ ಬಾರಿ ಪಶ್ಚಿಮ ಪದವೀಧರ ಕ್ಷೇತ್ರದ ಬಿಜೆಪಿ ಟಿಕೆಟ್‌ಗೆ ಎಸ್.ವಿ. ಸಂಕನೂರು ಪ್ರಬಲ ದಾವೆದಾರನಾಗಿದ್ದರು. ಈತ ಹೊರಟ್ಟಿಯ ಮಾಜಿ ಆತ್ಮೀಯ ಮಿತ್ರ. ಹೊರಟ್ಟಿಗೆ ಸೆಡ್ಡು ಹೊಡೆದು ಆತನ ಎದುರು ಒಮ್ಮೆ ಸ್ಪರ್ಧಿಸಿ ಸೋತ. ಇಂಥ ಸಂಕನೂರ್‌ಗೆ ಕಳೆದ ಬಾರಿ ಶೆಟ್ಟರ್ ಲಾಬಿ ಮಾಡಿ ಟಿಕೆಟ್ ತಪ್ಪಿಸಿ ರಾಣೆಬೆನ್ನೂರು ಕಾಲೇಜಿನ ಪ್ರಿನ್ಸಿ ಆರ್.ಎನ್.ಕುಬೇರಪ್ಪ ಎಂಬಾತನಿಗೆ ಛಾನ್ಸ್ ಕೊಟ್ಟಿದ್ದರು. ಸಂಕನೂರು ಪದವೀಧರ ಕ್ಷೇತ್ರಕ್ಕೆ ಟಿಕೆಟ್ ಕೇಳಿದರೂ ಕಳೆದ ಬಾರಿ ಸಿಕ್ಕಿರಲಿಲ್ಲ. ಈ ಸಿಂಪಥಿ ಈ ಬಾರಿ ವರ್ಕ್‌ಔಟ್ ಆಗುವ ಲಕ್ಷಣ ಕಾಣಿಸುತ್ತಿದೆ. ಸಂಕನೂರ್‌ಗೆ ಬರುವ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಲು ಪಾರ್ಟಿಯಲ್ಲಿ ಒಂದು ತೀರ್ಮಾನಕ್ಕೆ ಈಗಾಗಲೇ ಬರಲಾಗಿದೆ. ಸಂಕನೂರು ಯುದ್ಧಕ್ಕೆ ಶಸ್ತ್ರ ಸನ್ನದ್ಧರೂ ಆಗಿ ಬಿಟ್ಟಿದ್ದಾರೆ. ಪದವೀಧರ ಕ್ಷೇತ್ರದ ಟಿಕೆಟ್ ಕೇಳಿದ್ದ ಕುಬೇರಪ್ಪಗೆ ಮತ್ತದೇ ಶಿಕ್ಷಕರ ಕ್ಷೇತ್ರದ ಗ್ಯಾರಂಟಿ ಕೊಟ್ಟು ಕಳಿಸಿದ್ದಾರೆ ಶೆಟ್ಟರ್! ಈ ರಾಜಿ ಸಂಧಾನ ಲಿಂಬಿಕಾಯಿ ಬಿಜೆಪಿ ಪ್ರವೇಶದಿಂದ ಮುರಿದು ಬಿದ್ದು ಟಿಕೆಟ್ ಕಾಳಗ ನಡೆಯುವ ಪರಿಸ್ಥಿತಿ ನಿರ್ಮಾಣ ಆಗಿದೆ.

ಚುನಾವಣೆ ನಡೆಯುವುದು ಮುಂದಿನ ವರ್ಷದ ಜೂನ್ ಅಥವಾ ಜುಲೈನಲ್ಲಿ. ಆದರೆ ಟಿಕೆಟ್ ಪ್ರ್ಯಾಕ್ಟೀಸ್ ಮಾತ್ರ ಎಲ್ಲ ಪಕ್ಷದಲ್ಲೂ ಈಗಲೇ ಬಿರುಸಾಗಿ ನಡೆಯುತ್ತಿದೆ. ಹಾಲಿ ಈ ಕ್ಷೇತ್ರ ಖಾಲಿ ಇರುವುದೇ ಈ ತುರುಸು ಅಕಾಲಿಕವಾಗಿ ಭುಗಿಲೇಳಲು ಕಾರಣ. ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಟಿಕೆಟ್‌ಗೆ ದೊಡ್ಡ ಪೈಪೋಟಿಯೇ ಇದೆ. ಆದರೆ ಈ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಸತತ ನಾಲ್ಕು ಬಾರಿ ಗೆದ್ದಿದ್ದ ಎಚ್.ಕೆ. ಪಾಟೀಲ ತನ್ನ ವಂಶಸ್ಥರ ಸುಪರ್ದಿಯಲ್ಲೇ ಕ್ಷೇತ್ರವಿರಲೆಂದು ಬಯಸಿದ್ದಾರೆ. ದಾಯಾದಿ ಸೋದರನೂ-ಗದಗ ಕ್ಷೇತ್ರ ತನಗಾಗಿ ಎರಡೆರಡು ಬಾರಿ ತ್ಯಾಗ ಮಾಡಿದ ಮಾಜಿ ಶಾಸಕನೂ ಆದ ಡಿ.ಆರ್. ಪಾಟೀಲ್‌ಗೆ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಲು ಎಚ್ಕೆಪಿ ಪ್ರಯತ್ನಿಸುತ್ತಿದ್ದಾರೆ.



ಡಿ.ಆರ್. ಪಾಟೀಲ್ ಗದಗದಿಂದ ನಾಲ್ಕು ಬಾರಿ ಗೆದ್ದಿದ್ದ ಕಲಿ. ಹೀಗಾಗಿ ಆತನ ಪರವೇ ಪಾರ್ಟಿಯಲ್ಲಿ ಒಲವು ಹೆಚ್ಚಿದೆ.

ಕುತೂಹಲ ಕೆರಳಿಸಿರುವುದು ಜೆಡಿಎಸ್‌ನ ಟಿಕೆಟ್ ತಂತ್ರಗಾರಿಕೆ. ಈ ಕ್ಷೇತ್ರದಲ್ಲಿ ಜೆಡಿಎಸ್‌ಗೆ ನೆಲೆ-ಬೆಲೆಯಿಲ್ಲ. ಆದರೆ ಜೆಡಿಎಸ್‌ನ ಹಿರಿಯ ಲಿಂಗಾಯತ ಮುಖಂಡ ಎನಿಸಿಕೊಂಡಿರುವ ಬಸವರಾಜು ಹೊರಟ್ಟಿಯ ಕೈಚಳಕ ಸದ್ರಿ ಕ್ಷೇತ್ರದಲ್ಲಿ ಸ್ವಲ್ಪ ನಡೆಯುತ್ತದೆ. ಪಶ್ಚಿಮ ಶಿಕ್ಷಕ ಕ್ಷೇತ್ರದ ಮತದಾರರಲ್ಲಿನ ಸಾಕಷ್ಟು ಮಂದಿ ಪಶ್ಚಿಮ ಪದವೀಧರ ಕ್ಷೇತ್ರದ ಓಟುದಾರರೂ ಹೌದು. ಇವರೆಲ್ಲ ಹೊರಟ್ಟಿಗೆ ಪರಿಚಿತರು. ಒಂದಲ್ಲ ಒಂದು ಆತನ ಹಂಗಲ್ಲಿ ಇರುವವರು. ಇದನ್ನು ಬಳಸಿಕೊಂಡು ಮಗ ವಸಂತ ಹೊರಟ್ಟಿಯನ್ನು ಎಮ್ಮೆಲ್ಸಿ ಮಾಡಲು ಬಸು ಗೇಮ್ ಪ್ಲಾನ್ ಹಾಕಿಕೊಂಡಿದ್ದಾರೆ. ತನ್ನ ಶಿಕ್ಷಣ ಅಂಗಡಿಗಳ ಮ್ಯಾನೇಜರ್ ಆಗಿ ಪಳಗಿರುವ ಮಗ ವಸಂತ್‌ನನ್ನು ಜೆಡಿಎಸ್ ಕ್ಯಾಂಡಿಡೇಟಾಗಿ ಅಖಾಡಕ್ಕೆ ಬಿಟ್ಟರೆ ಏನಾದೀತೆಂಬ ಪರಿಸ್ಥಿತಿ ಅಧ್ಯಯನ ಮಾಡುತ್ತಿದ್ದಾರೆ ಬಸು.

ಈಗ ಪಶ್ಚಿಮ ಪದವೀಧರ ಕ್ಷೇತ್ರ ವ್ಯಾಪ್ತಿಯ ನಾಲ್ಕೂ ಜಿಲ್ಲೆಗಳಲ್ಲಿ ಜಾಹೀರಾತು, ಸಭೆ, ಸಮಾರಂಭ, ಮದುವೆ, ಶೋಬಾನದಲ್ಲಿ ಮಗನನ್ನು ಮಿಂಚಿಸಿ ಎಮ್ಮೆಲ್ಸಿ ಕ್ಯಾಂಡಿಡೇಟೆಂದು ಬಸವರಾಜ್ ಹೊರಟ್ಟಿ ಪ್ರಾಜೆಕ್ಟ್ ಮಾಡುತ್ತಿದ್ದಾರೆ. ಪೆದ್ದು ಪುತ್ರ ಅಪ್ಪ ಹೇಳಿದಂತೆ ಪೋಸು ಕೊಡುತ್ತಿದ್ದಾನೆ. ಕೃಷ್ಣಪ್ಪ ರಾಜ್ಯ ಜೆಡಿಎಸ್ ಅಧ್ಯಕ್ಷರಾಗಿ ನೇಮಕವಾದ ನಂತರ ದೊಡ್ಡ ಗೌಡರು-ಸಣ್ಣಗೌಡರ ಮೇಲೆ ಸಿಟ್ಟಾಗಿರುವ ಹೊರಟ್ಟಿ ಮುಂದಿನ ಎಮ್ಮೆಲ್ಸಿ ಎಲೆಕ್ಷನ್ ತನಕ ಜೆಡಿಎಸ್‌ನಲ್ಲಿ ಇರುವುದೇ ಅನುಮಾನ. ಹಾಗಂತ ಆತ ಯಾವ ಪಕ್ಷಕ್ಕೇ ಸೇರಲಿ ಅಲ್ಲಿ ಮಗನಿಗೆ ಚಾನ್ಸ್ ಕೊಡಿಸಲು ಕರಾಮತ್ತು ಮಾಡದೇ ಬಿಡಲಾರರು. ಕಟ್ಟ ಕಡೆಗೆ ಪಕ್ಷೇತರನಾಗಿಯಾದರೂ ಮಗನನ್ನು ಎಮ್ಮೆಲ್ಸಿ ಎಲೆಕ್ಷನ್‌ಗೆ ನಿಲ್ಲಿಸುವ ಹಠಕ್ಕೆ ಬಿದ್ದಿರುವ ಹೊರಟ್ಟಿ ಈಗಲೇ ಪ್ರಚಾರದ ಒಂದು ಮಜಲು ಶುರು ಮಾಡಿದಂತಿದೆ.

ಹೊರಟ್ಟಿ ಕುವರ ಕಂಠೀರವನ ನಸೀಬು ಹೇಗಿದೆಯೋ?!

■ ಶುದ್ಧೋಧನ



ನಾಗನ ಪತ್ನಿ ಲಕ್ಷ್ಮಿ ಆಸ್ಪತ್ರೆಯಲ್ಲಿ

...ಬಲಿಸಿಕೊಂಡೇ ಬಂದರು.

ಸಿಸಿ ಟೀವಿಯಲ್ಲಿ

ದೇವರ ಮಂತ್ರಿಯಾಗಿದ್ದೇ ತಡ ಮೈಲಾರಿ ಗ್ಯಾಂಗ್ ನಾಗನ ವಿರುದ್ಧ ನೇರವಾಗೇ ತೊಡೆತಟ್ಟಲಾರಂಭಿಸಿತು. ...ಕಡೇ ನಾಗನ ವಿರುದ್ಧ ಶ್ರೀರಾಂಪುರ ಪೊಲೀಸ್ ...ಯಲ್ಲಿ ಜಾತಿನಿಂದನೆಯ ದೂರು ದಾಖಲಾದವು. ...ಯೆಂದರೆ ನಾಗ ಕೂಡ ಜಾತಿಯಿಂದ ದಲಿತನೆ!

ತನ್ನ ವಿರುದ್ಧ ಈ ರೀತಿ ಖೊಟ್ಟಿ ದೂರು ದಾಖಲಾಗುತ್ತಿರುವುದನ್ನು ಲೆಕ್ಕ ಹಾಕಿಯೇ ಆತ ಹೊಸ ಐಡಿಯಾ ಒಂದಕ್ಕೆ ಕೈಯಿಟ್ಟ. ಅದು ತನ್ನ ಮನೆಯ ನಾಲ್ಕು ದಿಕ್ಕಿಗೆ ಸಿಸಿ ಟೀವಿಯ ಕ್ಯಾಮೆರಾಗಳನ್ನಿಟ್ಟಿದ್ದು. ಸಣ್ಣಪುಟ್ಟದ್ದಕ್ಕೆಲ್ಲಾ ಕ್ಯಾತೆ ತೆಗೆದು ನಾಗನ ವಿರುದ್ಧ ಹಾವಳಿಯಿಡುತ್ತಿದ್ದ ಮೈಲಾರಿ ಬ್ರದರ್ಸ್ ಆತನ ಮನೆಗೆ ಸಿಸಿ ಟಿವಿ ಬಂದಿದ್ದು ನೋಡಿದ್ದೇ ರೊಚ್ಚಿಗೆದ್ದಿದ್ದಾರೆ. ನಾವೇನು ಮಾಡ್ತೀವಿ ಅಂತ ವೀಡಿಯೋ ಮಾಡ್ತಿಯೇನೋ ಎಂದು ಇಲ್ಲಿಗೆ ತಿಂಗಳ ಹಿಂದೆಯೇ ನಾಗನ ಮನೆಗೆ ನುಗ್ಗಿ ದಾಂಧಲೆಗೆತ್ತಿಸಿದ್ದರ ವಿರುದ್ಧ ನಾಗ ಅವತ್ತೇ ಶ್ರೀರಾಂಪುರ ಪೊಲೀಸ್ ಠಾಣೆಗೆ ದೂರು ಕೊಟ್ಟನಾದರೂ ಅದರಿಂದ ನಯಾ ಪೈಸೆಯ ಪ್ರಯೋಜನವಾಗಿಲ್ಲ. ಏಕೆಂದರೆ ನಾಗ ಮತ್ತು ಆತನ ತಮ್ಮ ಧರ್ಮ ಸೇರಿಕೊಂಡು ತಮ್ಮ ಮನೆಗೆ ನುಗ್ಗಿ ಟಿವಿ ಒಡೆದರೆಂದು ಮೈಲಾರಿ ಗ್ಯಾಂಗಿನ ಹೆಂಗಸಿನ ಮೂಲಕ ಪ್ರತಿ ದೂರು ದಾಖಲಿಸಲಾಗಿತ್ತು,

ಹನಗಿನ್ನು ಶ್ರೀರಾಂಪುರದಲ್ಲಿ ಉಳಿಗಾಲವಿಲ್ಲ ಎಂದೇ ಭೀತಿಗೆ ಬಿದ್ದ ನಾಗ ಇಲ್ಲಿಗೆ ತಿಂಗಳ ಹಿಂದೆಯೇ ತನ್ನಿಬ್ಬರು ಮಕ್ಕಳ ಸಮೇತ ಏರಿಯಾ ಬಿಟ್ಟು ಇನ್ನೆಲ್ಲಿಗೋ ಗುಳೆ ಎದ್ದಾಗಿತ್ತು. ಆತನ ಇಬ್ಬರು ಮಕ್ಕಳ ಪೈಕಿ ಒಬ್ಬನ ಹೆಸರು ಮಹಾತ್ಮಗಾಂಧಿ! ಮತ್ತೊಬ್ಬನಿಗೆ ಲಾಲ್ ಬಹದ್ದೂರ್ ಶಾಸ್ತ್ರಿ ಎಂದು ಹೆಸರಿಟ್ಟಿದ್ದಾನೆ!

ರಕ್ತದೋಕುಳಿ

ಹಾಗಂತ ಹೆದರಿ ಓಡಿಹೋದ ಎನ್ನಿಸಬಾರದಲ್ಲ; ಅದಕ್ಕೆಂದು ತನ್ನ ಪತ್ನಿ ಲಕ್ಷ್ಮಿ ಮತ್ತು ತಮ್ಮ ಧರ್ಮವನ್ನು ಇದ್ದ ಮನೆಯಲ್ಲೇ ಇರಿಸಿದ್ದ. ಶತಗತಾಯ ನಾಗನನ್ನು ಮುಗಿಸಲೇಬೇಕೆಂದು ಹೊಂಚು ಹಾಕುತ್ತಿದ್ದ ವಿರೋಧಿ



ಗಾಯಗೊಂಡ ಡೇವಿಡ್ ನಿಮ್ಹಾನ್ಸ್‌ನಲ್ಲಿ

ಗ್ಯಾಂಗಿಗೆ ಮೊನ್ನೆ ನವೆಂಬರ್ 21ರ ರಾತ್ರಿ ನಾಗನ ಕಾರು ಮನೆ ಬಳಿ ಬಂದ ಮಾಹಿತಿ ಸಿಕ್ಕಿದೆ. ಪರಾರಿಯಾಗಿದ್ದ ನಾಗ ಮತ್ತೆ ಬಂದಿದ್ದಾನೆಂದು ಲೆಕ್ಕ ಹಾಕಿದ್ದೇ ಮೈಲಾರಿ ಗ್ಯಾಂಗಿನ ಅಮ್ಮು, ಶಂಕರ್, ಭವಾನಿ, ರಾಮುಮೂರ್ತಿ, ಪುಷ್ಪಮಾಲಳ ಮಗ ಸೂರ್ಯ, ಕುಮರೇಶನ್, ವರ್ಮಾ, ಮಂಜು, ತಂಗಮಣಿ, ಗೋಪಿ, ಮಣಿ, ತಾಮರೈ ಸೆಲ್ವಿ, ಡಿ.ರಾಜ, ಶರವಣ, ಪವಿತ್ರ, ಹೇಮಾವತಿ, ಜಗದಾ, ಅಪ್ಪು ತಿಲಕಾವತಿ, ಕೇಶವನ್, ದಿವ್ಯ ಲಕ್ಷ್ಮಿಕಾಂತನ್, ವಿಷ್ಣುಕಾಂತ್ ಇತ್ಯಾದಿ ಸರಿಸುಮಾರು 40 ಮಂದಿ ಮಚ್ಚು, ಲಾಂಗು, ರಾಡುಗಳನ್ನು ಹಿಡಿದದ್ದೇ ನಾಗ ಹೊಸದಾಗಿ ಕಟ್ಟಿಸುತ್ತಿದ್ದ ಮನೆಗೆ ನುಗ್ಗಿದ್ದಾರೆ.


ಅವತ್ತು ನಾಗನ ಕಾರಿನಲ್ಲಿ ಬಂದದ್ದು ಆತನ ಪತ್ನಿ ಲಕ್ಷ್ಮಿ ಮತ್ತು ತಮ್ಮ ಧರ್ಮ. ನಾಗ ಸಿಕ್ಕಿಲ್ಲವೆಂದು ರೊಚ್ಚಿಗೆದ್ದ ವಿರೋಧಿ ಗ್ಯಾಂಗ್ ನಾಗನ ಪತ್ನಿ ಲಕ್ಷ್ಮಿಯನ್ನು ಅಟ್ಟಾಡಿಸಿ ಕತ್ತರಿಸಿದೆ. ಅತ್ತಿಗೆಯನ್ನು ಬಿಡಿಸಲು ಬಂದ ತಮ್ಮ ಧರ್ಮನ ಬೆನ್ನೇ ಸೀಳಿಹೋಗಿದೆ. ರಕ್ಷಣೆಗೆ ಬಂದಳೆಂಬ ಒಂದೇ ಕಾರಣಕ್ಕೆ ನಾಗನ ಮನೆಕೆಲಸದ ಹೆಂಗಸು ಅಲಮೇಲು ಎಂಬಾಕೆಯನ್ನು ನಡುರಸ್ತೆಯಲ್ಲೇ ಪೈಶಾಚಿಕವಾಗಿ ಹಿಂಸಿಸಿದ್ದಾರೆ. ತಾಯಿಯನ್ನು ಬಿಡಿಸಲು ಬಂದ ಆಕೆಯ 13 ವರ್ಷದ ಮಗ ಡೇವಿಡ್‌ನ ತಲೆಯನ್ನೇ ಸೀಳಿದ್ದಾರೆ. ನಾಗನ ಮನೆಯ ಗಲ್ಲಿ ಯುದ್ಧಕ್ಕೂ ರಕ್ತ ಧಾರಾಕಾರ. ಬಹುಶಃ ಪೊಲೀಸರು ಬರದಿದ್ದರೆ ಅದೆಷ್ಟು ಹೆಣ ಬೀಳುತ್ತಿತ್ತೊ...!


ನಾಗನ ಗ್ರಹಚಾರವೋ ಆತನ ವಿರೋಧಿಗಳ ಅದೃಷ್ಟವೋ ಗೊತ್ತಿಲ್ಲ, ಕಾಟಾಚಾರಕ್ಕೆ ಒಂದಿಬ್ಬರು ಬೇಕಾರ್‌ಗಳನ್ನಷ್ಟೇ ಬಂಧಿಸಿದ ಪೊಲೀಸರು ರಕ್ತ ಹರಿಸಿದವರೆಲ್ಲ ರಾಜಾರೋಷವಾಗಿ ಓಡಾಡಿಕೊಂಡಿರುವಂತೆ ಆಶೀರ್ವಾದವನ್ನೂ ಮಾಡಿದ್ದಾರೆ. ನಾಗನ ದುರ್ಗತಿಗೆ ಯಾರು ತಾನೇ ಮರುಗಿಯಾರು?


■ ರಾ. ಸೋಮನಾಥ್

ರೈತರನ್ನು ಅರೆಯುತ್ತಿರುವ ಸಕ್ಕರೆ ಧಣಿಗಳು


ಇಡೀ ದೇಶಕ್ಕೇ ಸಿಹಿ ಉಣಿಸುತ್ತಿರುವ ಕಬ್ಬು ಬೆಳೆಗಾರರಿಗೆ ನಾವು ನಿತ್ಯ ಕಹಿ ಉಣಿಸುತ್ತಿದ್ದೇವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ನಾಗರಿಕ ಸಮಾಜದ ನಿಷ್ಕ್ರಿಯತೆಯಿಂದಾಗಿ ಹಳ್ಳ ಹಿಡಿದಿರುವ ರಾಜಕೀಯ-ಆರ್ಥಿಕ ಪರಿಸ್ಥಿತಿಗಳು ನಮ್ಮ ರೈತರ ಕೊರಳಿಗೆ ಉರುಳಾಗಿ ಪರಿಣಮಿಸುತ್ತಿವೆ. ಬೆಳಗಾವಿಯ















ಸುವರ್ಣಸೌಧದ ಒಳಗೆ ಭಾರೀ ರಾಜಕೀಯ ರಂಗ ತಾಲೀಮು ನಡೆಯುತ್ತಿದ್ದರೆ, ಸೌಧದ ಮುಂದೆ ಬೀದಿಯಲ್ಲಿ ಕಬ್ಬು ಬೆಳೆಗಾರರು ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಹೀಗೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿಠಲ ಅರಭಾವಿ ಎಂಬ ರೈತ ಇದೇ ನವೆಂಬರ್ 27ರಂದು ವಿಷ ಕುಡಿದು ಸಾವನ್ನಪ್ಪಿದ್ದಾರೆ.

ರಾಜ್ಯಾದ್ಯಂತ ಭಾರೀ ಬಿಕ್ಕಟ್ಟನ್ನು ಎದುರಿಸುತ್ತಿರುವ ಕಬ್ಬು ಬೆಳೆಗಾರರು ಕನಿಷ್ಠ ಬೆಲೆಗೆ ಒತ್ತಾಯಿಸಿ ಬೀದಿಗಿಳಿದು ಹೋರಾಟ ಮಾಡುವುದು, ಹೆದ್ದಾರಿ ತಡೆ ಮಾಡುವುದು, ಪೊಲೀಸರಿಂದ ಲಾಠಿ ಏಟು, ಗುಂಡೇಟು ತಿನ್ನುವುದು ಇತ್ತೀಚಿನ ವರ್ಷಗಳಲ್ಲಿ ಸಂಪ್ರದಾಯವೆಂಬಂತೆ ನಡೆದುಕೊಂಡು ಬಂದಿದೆ. ಕಬ್ಬಿನ ಬೆಲೆ ತೀವ್ರ ಕುಸಿದ ಕಾರಣಕ್ಕೆ ಅಥವ ಸಕ್ಕರೆ ಕಾರ್ಖಾನೆಗಳು ಕಬ್ಬು ಕೊಳ್ಳಲು ನಿರಾಕರಿಸಿದ ಕಾರಣಕ್ಕೆ ಹತಾಶಗೊಂಡ ರೈತರು ತಾವೇ ಬೆಳೆದ ಕಬ್ಬಿನ ಗದ್ದೆಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿದ ದಾರುಣ ಘಟನೆಗಳೂ ನಡೆದುಹೋಗಿವೆ. ಮತ್ತೊಂದೆಡೆ ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆ ದಿನೇದಿನೇ ಗಗನಕ್ಕೇರುತ್ತಾ ಬಡಪಾಯಿ ಗ್ರಾಹಕರಿಗೆ ಹೊರೆಯಾಗಿರುವುದು ಕೂಡ ಇಂದಿನ ಕಟು ವಾಸ್ತವ.

ಕಬ್ಬು ಬೆಳೆಗಾರರ ಸಮಸ್ಯೆ ಒಂದಲ್ಲ ಎರಡಲ್ಲ. ಮೊದಲನೆಯದಾಗಿ ಕಬ್ಬು ಬೆಳೆ ಇತರೆ ಕೃಷಿ ಉತ್ಪನ್ನಗಳ ಹಾಗೆ ಕೃಷಿ ಮಾರುಕಟ್ಟೆಗಳಲ್ಲಿ ಮಾರಬಹುದಾದ ವಸ್ತುವಲ್ಲ. ಪ್ರತಿಯೊಂದು ಪ್ರದೇಶದಲ್ಲಿರುವ ರೈತರು ತಮ್ಮ ಫಾಸಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಷ್ಟೆ ಅನಿವಾರ್ಯವಾಗಿ ಕಬ್ಬು ಸರಬರಾಜು ಮಾಡಬೇಕು. ದೂರದ ಕಾರ್ಖಾನೆಗಳಿಗೆ ಸರಬರಾಜು ಮಾಡಲು ಸಾಗಾಣಿಕಾ ವೆಚ್ಚ ಅಧಿಕವಾಗುವುದರ ಜೊತೆಗೆ ಸ್ಥಳೀಯ ಬೆಳೆಗಾರರ ಜೊತೆ ಅನಗತ್ಯ ಪೈಪೋಟಿ ಉಂಟಾಗಿ ಅಂತಿಮವಾಗಿ ನಷ್ಟ ಅನುಭವಿಸಬೇಕಾದವರು ರೈತರೇ.

ಎರಡನೆಯದಾಗಿ, ತರಕಾರಿ ಮತ್ತು ಹಣ್ಣುಗಳನ್ನು ಹೆಚ್ಚು ದಿನ ಶೇಖರಿಸಿಡಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಕಬ್ಬಿಗೂ ವಿಶಿಷ್ಟವಾದ ಸಮಸ್ಯೆಯಿದೆ. ನಿರ್ದಿಷ್ಟ ಅವಧಿಯಲ್ಲಿ ಕಟಾವು ಮಾಡಿದ ಕಬ್ಬು ಅಷ್ಟೇ ಶೀಘ್ರವಾಗಿ ಕಾರ್ಖಾನೆಗೆ ಸರಬರಾಜಾಗಿ, ಕಬ್ಬು ಅರೆದು ಸಕ್ಕರೆ ಉತ್ಪಾದನೆಯ ಪ್ರಕ್ರಿಯೆ ಪ್ರಾರಂಭವಾಗಬೇಕು. ಯಾವುದೇ ಕಾರಣಕ್ಕೆ ವಿಳಂಬವಾದರೂ ಈ ಅಮೂಲ್ಯ ಕಚ್ಚಾವಸ್ತು ತೂಕ ಕಳೆದುಕೊಂಡು, ಬೆಂಡಾಗಿ ನಿಷ್ಪ್ರಯೋಜಕವಾಗುವ ಅಪಾಯವಿರುತ್ತದೆ. ಇಂಥಾ ಇಕ್ಕಟ್ಟಿನಲ್ಲಿ ಸಿಲುಕಿರುವ ರೈತರು ಸಕ್ಕರೆ ಕಾರ್ಖಾನೆಗಳ ಮೇಲೆ ಅತಿಯಾಗಿ ಅವಲಂಬಿಸಿರುತ್ತಾರೆ.

ರೈತರ ಇಂಥಾ ಸಂದಿಗ್ಧತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಕಾರ್ಖಾನೆಗಳ ಆಡಳಿತ ಮಂಡಳಿಗಳು ಕಬ್ಬಿನ ಜೊತೆಗೆ ರೈತರ ಜೀವನವನ್ನೇ ಅರೆದು ಹಾಕುತ್ತಿದ್ದಾರೆ. ತೂಕ ಮಾಡುವಲ್ಲಿ ಮೋಸ, ಸಕ್ಕರೆ ಇಳುವರಿಯ ತಪ್ಪು ಲೆಕ್ಕಾಚಾರ, ಬಿಲ್ ತಯಾರಿಸುವ ಹಂತದಲ್ಲಿ ಮೊತ್ತವನ್ನು ಕಡಿಮೆ ತೋರಿಸುವುದು - ಹೀಗೆ ನಾನಾರೀತಿಗಳಲ್ಲಿ ರೈತರ ಮಂಡೆ ಬೋಳಿಸಲಾಗುತ್ತಿದೆ. ಕಬ್ಬು ಅರೆದು ತಯಾರಾದ ಸಕ್ಕರೆಯೂ ಮಾರಾಟವಾಗಿ ವರ್ಷ ಕಳೆದರೂ ರೈತರ ಹಣ ಪಾವತಿಸದೆ ಸತಾಯಿಸಿರುವ ನೂರಾರು ಉದಾಹರಣೆಗಳು ಎಲ್ಲೆಡೆ ಸಿಗುತ್ತವೆ. ಇವೆಲ್ಲಾ ಹಾಳಾಗಲಿ; ಕಬ್ಬು ಬೆಳೆಗೆ ಕನಿಷ್ಠ ಬೆಲೆಯಾದರೂ ಸಿಗುತ್ತಿದೆಯೆ? ಸಿಗುತ್ತಿಲ್ಲವಾದರೆ ಕಾರ್ಖಾನೆ ಮಾಲಿಕರಿಗೂ ರೈತರಿಗೂ ನಡುವೆ ಸಮನ್ವಯ ತಂದು ಸೂಕ್ತ ಬೆಲೆ ನಿಗದಿಗೊಳಿಸಬೇಕಾದದ್ದು ಸರ್ಕಾರದ ಜವಾಬ್ದಾರಿಯಲ್ಲವೆ?



ಆದರೆ ಕರ್ನಾಟಕದ ಕಬ್ಬು ಬೆಳೆಗಾರರ ದುರಂತ ನೋಡಿ. ಈ ಸಕ್ಕರೆ ಕಾರ್ಖಾನೆಗಳ ಮಾಲಿಕರೇ ಸ್ವತಃ ಶಾಸಕ-ಮಂತ್ರಿಗಳಾಗಿ ವಿಧಾನಸೌಧದಲ್ಲಿ ವಕ್ಕರಿಸಿದ್ದಾರೆ. ಕಬ್ಬು ಬೆಳೆಗಾರರಿಗೆ ಬಹುದೊಡ್ಡ ಸವಾಲು ಇರುವುದೇ ಇಲ್ಲಿ. ಹೀಗಾಗಿ ಕಬ್ಬಿನ ಬೆಲೆ ನಿಗದಿ ಮಾಡಲು ಇದುವರೆಗೆ ರಾಜ್ಯ ಸರ್ಕಾರ ಯಾವುದೇ ನಿರ್ದಿಷ್ಟ ವ್ಯವಸ್ಥೆಯನ್ನಾಗಲಿ, ನಿಯಮಾವಳಿಯನ್ನಾಗಲಿ ರೂಪಿಸುವ ಗೋಜಿಗೆ ಹೋಗಿರಲಿಲ್ಲ. ತಮ್ಮ ವಿರುದ್ಧವೇ ತಾವು ಕಾನೂನು ಮಾಡಿಕೊಳ್ಳಲು ಅವರೇನು ಮೂರ್ಖರೆ? (ವಿವರಗಳಿಗಾಗಿ ಬಾಕ್ಸ್ ನೋಡಿ)

ಕಬ್ಬು ಬೆಳೆಗಾರರ ಶೋಷಣೆಯ ವಿರುದ್ಧ ರೈತಸಂಘ ಹಲವಾರು ದಶಕಗಳಿಂದಲೂ ದನಿಯೆತ್ತು[ತ್ತಾ] ಬಂದಿದೆ. ಕಬ್ಬು ಬೆಳೆಗಾರರ ಹಿತರಕ್ಷಣೆಗಾಗಿಯೇ 2006ರಲ್ಲಿ ಹುಟ್ಟಿಕೊಂಡ 'ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ'ದ ಹೋರಾಟವನ್ನು ವಿಶೇಷವಾಗಿ ಗುರುತಿಸಲೇಬೇಕು. ಹೀಗೆ ದಶಕಗಳ ಕಾಲ ರೈತರು ಸಂಘಟಿತ ಹೋರಾಟ ನಡೆಸಿದ್ದರ ಪರಿಣಾಮವಾಗಿ ಹಾಗೂ ಸೋಲಿನ ಭೀತಿಯಲ್ಲಿದ್ದ ಹಿಂದಿನ ಬಿಜೆಪಿ ಸರ್ಕಾರದ ಕೊನೆಯ ದಿನಗಳಲ್ಲಿ, ಅಂದರೆ ಚುನಾವಣ[ೆಗೆ] ಇನ್ನು ಕೇವಲ ಒಂದು ತಿಂಗಳಷ್ಟೇ ಬಾಕಿಯಿದ್ದಾಗ 2013ರ ಮಾರ್ಚ್‌ನಲ್ಲಿ 'ಕಬ್ಬು ಖರೀದಿ ಮತ್ತು ಸರಬರಾಜು ವಿಧೇಯಕ'ವೊಂದನ್ನು ಅಂಗೀಕರಿಸಿ, ಕಬ್ಬು ಬೆಳೆಗಾರರ ಮತಗಳನ್ನು ಸೆಳೆದುಕೊಳ್ಳುವ ಅ[ಗ್ಗದ] ತಂತ್ರ ಹೂಡಿದ್ದರು.

ಸದರಿ ಮಸೂದೆಯನ್ವಯ ಇಂದಿನ ರಾಜ್ಯ ಸರ್ಕಾರ ಕಬ್ಬು ಖರೀದಿ ನಿಯಂತ್ರಣಾ ಮಂಡಳಿಯೊಂದನ್ನು ರಚಿಸಿದೆ. ಕಬ್ಬಿನಿಂದ ಉತ್ಪನ್ನವಾಗುವ ಆದಾಯವನ್ನು ಕಾರ್ಖಾನೆಗಳು ಹಾಗೂ ಬೆಳೆಗಾರರ ನಡುವೆ ಹಂಚಿಕೆ ಮಾಡುವುದು ಈ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಸದರಿ ಮಂಡಳಿಯಲ್ಲಿ ನಿಯಮಾವಳಿ ಪ್ರಕಾರ ಒಟ್ಟು 15 ಮಂದಿ ಸದಸ್ಯರಿರಬೇಕು. ಅವರಲ್ಲಿ 5 ಮಂದಿ ರೈತ ಪ್ರತಿನಿಧಿಗಳು, 5 ಮಂದಿ ಸಕ್ಕರೆ ಕಾರ್ಖಾನೆ ಮಾಲಿ[ಕರ] ಪ್ರತಿನಿಧಿಗಳು ಹಾಗೂ 5 ಮಂದಿ ಸರ್ಕಾರಿ ಪ್ರತಿನಿಧಿಗಳು ಇರುತ್ತಾರೆ.

ಈ ಮಂಡಳಿಯ ರಚನೆಯಲ್ಲಿರುವ ರಾಜಕೀಯವನ್ನು ಅರ್ಥ ಮಾಡಿಕೊಂಡರೆ ಸಕ್ಕರೆ ಲಾಬಿಯ ರಾಜಕಾರಣದ ಒಳಸುಳಿಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭ. ಈಗ ಹಾಲಿ ನೇಮಕವಾಗಿರುವ ಈ ಮಂಡಳಿಯಲ್ಲಿ ಹಾಲಿ ಕಾಂಗ್ರೆಸ್ ಮಂತ್ರಿ ಎಸ್‌ಆರ್ ಪಾಟೀಲ್, ಬಿಜೆಪಿ ಬ್ಲೂಬಾಯ್ ಎಂಬ ಕುಖ್ಯಾತಿಯ ಮಾಜಿ ಮಂತ್ರಿ ಲಕ್ಷ್ಮಣ ಸವದಿಯ ತಮ್ಮ, ಬೀದರ್‌ನ ಸಕ್ಕರೆ

ಕಬ್ಬು ಬೆಳೆಯ ಭವಿಷ್ಯವೇನು?

ಕೆಲವು ದೇಶಗಳಲ್ಲಿ ಉತ್ಪಾದನಾ ವೆ[ಚ್ಚ] ಕಡಿಮೆಯಿರುವುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯ[ಲ್ಲಿ] ಸಕ್ಕರೆಯ ಬೆಲೆ ಒಂದಷ್ಟು ಇಳಿಮುಖವಾಗಿದೆ. ಇದ[ೇ] ಸಂದರ್ಭದಲ್ಲಿ ಕಳೆದ ನಾಲ್ಕು ವರ್ಷಗಳಿಂದ ದೇಶಿಯ ಸಕ್ಕರೆ ಉತ್ಪಾದನೆ ನಮ್ಮ ಆಂತರಿಕ ಬೇಡಿಕೆಗಿಂತಲ[ೂ] ಹೆಚ್ಚಾಗಿದೆ. ಹೀಗೆ 2012-13ನೇ ಸಾಲಿನಲ್ಲಿ ಸುಮಾರ[ು] 6 ಲಕ್ಷ ಟನ್‌ಗಳಷ್ಟು ಹೆಚ್ಚುವರಿ ಸಕ್ಕರೆ ದಾಸ್ತಾನು ನಮ್ಮಲ್ಲಿತ್ತು. ಹೀಗಿದ್ದಾಗ್ಯೂ ಈ ವರ್ಷ ಜೂನ್-ಜುಲೈ ಅವಧಿಯ[ಲ್ಲಿ] ಬ್ರೆಜಿಲ್ ದೇಶದಿಂದ 2,75,000 ಟನ್ ಸಕ್ಕರೆಯನ್[ನು] ಕೇಂದ್ರ ಸರ್ಕಾರ ಆಮದು ಮಾಡಿಕೊಂಡಿದೆಯೆಂದರೆ ಏನ[ು] ಹೇಳಬೇಕು? ದೇಶೀಯ ಉದ್ಯಮವನ್ನು ಸಂರಕ್ಷಿಸಲಿಕ್ಕಾ[ಗಿ] 15% ಇರುವ ಸಕ್ಕರೆಯ ಆಮದು ಸುಂಕವನ್ನು 40% ಏರಿಸಬೇಕೆಂದು ಭಾರತೀಯ ಸಕ್ಕರೆ ಕಾರ್ಖಾನೆಗ[ಳ] ಮಹಾಮಂಡಳ(ಐಎಸ್‌ಎಂಎ) ಬೇಡಿಕೆ ಇಟ್ಟಿದೆ.

ಈ ಅನಗತ್ಯ ಆಮದಿನ ಪರಿಣಾಮವಾಗಿ ಸಕ್ಕರೆಯ ಸಗಟು ಧಾರಣೆ ಕುಸಿದು ಉದ್ಯಮದಲ್ಲಿ ಒಂದಷ[್ಟು] ಆತಂಕವನ್ನು ಮೂಡಿಸಿದೆ. ಪರಿಣಾಮವಾಗಿ ಕೆಲ[ವು] ಕಾರ್ಖಾನೆಗಳು ಕಬ್ಬು ಅರೆಯುವ ಕೆಲಸವನ್ನು ಸಕಾಲದ[ಲ್ಲಿ] ಪ್ರಾರಂಭಿಸದೆ ಹಿಂದುಮುಂದು ನೋಡುತ್ತಿವೆ.

ಹೀಗೆ ಕಬ್ಬು ಬೆಳೆಗಾರರು ಹಾಗೂ ಉದ್ಯಮದ ಭವಿ[ಷ್ಯ] ಅಡಕತ್ತರಿಯಲ್ಲಿ ಸಿಕ್ಕಿರುವ ಸಂದರ್ಭದಲ್ಲಿ ಪರ್ಯಾಯಗಳ[ನ್ನು] ಕಂಡುಕೊಳ್ಳಬೇಕಾದ ತುರ್ತು ಆವಶ್ಯಕತೆಯಿದೆ. [ಈ] ವಿಷಯದಲ್ಲಿ ಬ್ರೆಜಿಲ್ ನಮಗೆ ಮಾದರಿಯಾಗಿ ನಿಲ್ಲಬಲ್ಲದ[ು]. ಬ್ರೆಜಿಲ್ ಮತ್ತು ಅಮೆರಿಕಾಗಳಲ್ಲಿ ಕಬ್ಬಿನಿಂದ ಎಥನಾ[ಲ್] ಇಂಧನವನ್ನು ತಯಾರಿಸಲಾಗುತ್ತಿದ್ದು ಅದು ಆ ದೇಶಗ[ಳ] ಪೆಟ್ರೋಲಿಯಂ ಉತ್ಪನ್ನಗಳ ಆಮದು ಪ್ರಮಾಣವ[ನ್ನು] ಗಣನೀಯವಾಗಿ ತಗ್ಗಿಸಿದೆ. ಈಗ ನಮ್ಮಲ್ಲಿ ಪೆಟ್ರೋಲಿಯ[ಂ] ತೈಲದೊಂದಿಗೆ ಶೇ.5ರಷ್ಟು ಎಥನಾಲ್ ಮಿಶ್ರ[ಣ] ಮಾಡಲಾಗುತ್ತಿದೆ. ಈ ಪ್ರಮಾಣವನ್ನು 25% ಹೆಚ್ಚಿಸಬೇಕೆಂಬ ಆಗ್ರಹ ಕೇಳಿಬರುತ್ತಿದೆ. ಇದರಲ್ಲಿ ನಾ[ವು] ಯಶಸ್ವಿಯಾದಲ್ಲಿ ಪ್ರತಿ ವರ್ಷ ಸುಮಾರು 2 ಲ[ಕ್ಷ] ಕೋಟಿಗಳಿಗೂ ಅಧಿಕ ಮೊತ್ತದ ತೈಲ ಆಮದು ವೆ[ಚ್ಚ] ಉಳಿತಾಯವಾಗುತ್ತದೆ. ಬಹುತೇಕ ಭಾರತದ ಸನ್ನಿವೇಶವ[ನ್ನು] ಹೋಲುವ ಬ್ರೆಜಿಲ್‌ಗೆ ಇದು ಸಾಧ್ಯವಾಗುವುದಾದರೆ ಅ[ದು] ನಮ್ಮಲ್ಲಿ ಯಾಕೆ ಸಾಧ್ಯವಿಲ್ಲ? ಸರ್ಕಾರಗಳಿಗೆ ಬದ್ಧತೆ ಹಾಗ[ೂ] ಇಚ್ಛಾಶಕ್ತಿಯೇ ಇಲ್ಲದಿರುವಾಗ ಇಂಥಾ ಆಲೋಚನೆಗ[ಳು] ಹಾಸ್ಯಾಸ್ಪದವಾಗಿಬಿಡುವ ಅಪಾಯವಿದೆ.

ಸಕ್ಕರೆ ಉದ್ಯಮದಲ್ಲಿ ರಾಜಕಾರಣಿಗಳು

ಕರ್ನಾಟಕದಲ್ಲಿರುವ ಒಟ್ಟು 65 ಸಕ್ಕರೆ ಕಾರ್ಖಾನೆಗಳಲ್ಲಿ 58 ಕಾರ್ಖಾನೆಗಳು ಹಾಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಪೈಕಿ 22 ಸಹಕಾರಿ ಕಾರ್ಖಾನೆಗಳಾಗಿದ್ದು, 2 ಕಾರ್ಖಾನೆಗಳು ರಾಜ್ಯ ಸರ್ಕಾರದ ಮಾಲೀಕತ್ವದಲ್ಲಿವೆ. ಉಳಿದ 34 ಖಾಸಗಿ ಕಾರ್ಖಾನೆಗಳು. ಒಟ್ಟಾರೆ ಹೇಳುವುದಾದರೆ ಬಹುಪಾಲು ಕಾರ್ಖಾನೆಗಳು ನೇರವಾಗಿ ವಿವಿಧ ಪಕ್ಷಗಳ ಮಂತ್ರಿಗಳು, ಶಾಸಕರು ಇನ್ನಿತರ ರಾಜಕಾರಣಿಗಳ ಒಡೆತನದಲ್ಲಿವೆ ಎಂಬುದನ್ನು ವಿಶೇಷವಾಗಿ ಗಮನಿಸಬಹುದು.

ಕ್ರ.ಸಂ	ಕಂಪನಿಯ ಮಾಲಿಕ ಅಥವ ನಿಯಂತ್ರಕರು	ಪಕ್ಷ / ಸ್ಥಾನಮಾನ	ಕಾರ್ಖಾನೆಯ ಹೆಸರು / ಸ್ಥಳ
1	ಎಸ್.ಆರ್.ಪಾಟೀಲ್	ಕಾಂಗ್ರೆಸ್/ಹಾಲಿ ಮಂತ್ರಿ	ಬೀಳಗಿ ಶುಗರ್ಸ್, ಬಿಜಾಪುರ ಜಿಲ್ಲೆ
2	ಉಮೇಶ್ ಕತ್ತಿ	ಬಿಜೆಪಿ/ ಮಾಜಿ ಮಂತ್ರಿ, ಹಾಲಿ ಶಾಸಕ	ವಿಶ್ವನಾಥ್ ಶುಗರ್ಸ್, ಬೆಳಗಾಂ
3	ಶಾಮನೂರು ಶಿವಶಂಕರಪ್ಪ	ಕಾಂಗ್ರೆಸ್/ ಹಾಲಿ ಮಂತ್ರಿ	ಶಾಮನೂರು ಶುಗರ್ಸ್, ದಾವಣಗೆರೆ
4	ಸತೀಶ್ ಜಾರಕಿಹೊಳಿ	ಕಾಂಗ್ರೆಸ್/ ಹಾಲಿ ಮಂತ್ರಿ	ಗೋಕಾಕ್ ಶುಗರ್ಸ್, ಸತೀಶ್ ಶುಗರ್ಸ್, ಬೆಳಗಾವಿ
5	ಮುರುಗೇಶ ನಿರಾಣಿ	ಬಿಜೆಪಿ/ಮಾಜಿ ಮಂತ್ರಿ	ನಿರಾಣಿ ಶುಗರ್ಸ್, ಮುಧೋಳ
6	ಪ್ರಭಾಕರ ಕೋರೆ	ಬಿಜೆಪಿ/ ಎಂಪಿ	ಧೂಧ್ ಗಂಗಾ ಶುಗರ್ಸ್, ಬೆಳಗಾವಿ
7	ಲಕ್ಷ್ಮಣ ಸವದಿ	ಬಿಜೆಪಿ/ ಮಾಜಿ ಮಂತ್ರಿ/ಹಾಲಿ ಎಂಎಲ್‌ಎ	ಕೃಷ್ಣಾ ಸಹಕಾರಿ ಕಾರ್ಖಾನೆ ಮತ್ತು ಇತರೆ ನಾಲ್ಕು ಕಾರ್ಖಾನೆಗಳು
8	ಭೀಮಣ್ಣ ಖಂಡ್ರೆ	ಕಾಂಗ್ರೆಸ್/ ಮಾಜಿ ಮಂತ್ರಿ	ಮಹಾತ್ಮ ಗಾಂಧಿ ಶುಗರ್ಸ್, ಬೀದರ್
9	ಜಿಬಿ ಇನಾಂದಾರ್	ಕಾಂಗ್ರೆಸ್/ ಎಂಎಲ್‌ಎ	ಮಲಪ್ರಭಾ ಸಹಕಾರಿ ಕಾರ್ಖಾನೆ, ಬೆಳಗಾಂ
10	ಸಿದ್ದು ನ್ಯಾಮಗೌಡ	ಕಾಂಗ್ರೆಸ್/ ಮಾಜಿ ಕೇಂದ್ರ ಮಂತ್ರಿ /ಎಂಎಲ್‌ಎ	ಜಮಖಂಡಿ ಶುಗರ್ಸ್, ಜಮಖಂಡಿ
11	ಗುರುಪಾದಪ್ಪ ನಾಗಮಾರಪಳ್ಳಿ	ಕೆಜೆಪಿ	ನಾರಂಜಾ ಸಕ್ಕರೆ ಕಾರ್ಖಾನೆ, ಬೀದರ್
12	ಅಪ್ಪು ಪಟ್ಟಣಶೆಟ್ಟಿ	ಬಿಜೆಪಿ/ ಮಾಜಿ ಮಂತ್ರಿ	ಬಿಜಾಪುರ
13	ಬಿಬಿ ಚಿಮ್ಮನಕಟ್ಟಿ	ಕಾಂಗ್ರೆಸ್/ ಎಂಎಲ್‌ಎ	ಬಾದಾಮಿ ಶುಗರ್ಸ್, ಬಾದಾಮಿ
14	ಪ್ರಕಾಶ್ ಹುಕ್ಕೇರಿ	ಕಾಂಗ್ರೆಸ್/ ಹಾಲಿ ಸಕ್ಕರೆ ಮಂತ್ರಿ	ಬ್ರಹ್ಮಾವರ ಶುಗರ್ಸ್, ಹಾವೇರಿ
15	ಬಸವರಾಜ ಪಾಟೀಲ್ ಯತ್ನಾಳ್	ಬಿಜೆಪಿ/ ಮಾಜಿ ಎಂಪಿ	ಜ್ಞಾನಯೋಗಿ ಶಿವಕುಮಾರ ಶುಗರ್ಸ್, ಬಿಜಾಪೂರ

ಈ ಪಟ್ಟಿ ಅಪೂರ್ಣ. ಸಕ್ಕರೆ ಉದ್ಯಮವನ್ನು ನಿಯಂತ್ರಿಸುತ್ತಿರುವ ಇನ್ನೂ ಹತ್ತಾರು ಪ್ರಭಾವಿ ರಾಜಕಾರಣಿಗಳಿದ್ದಾರೆ. ಹೀಗೆ ಕುರಿ-ಮೇಕೆಗಳಿಗೆ ನ್ಯಾಯ ಕೊಡಿಸುವ ಸ್ಥಾನದಲ್ಲೂ ಕೊಬ್ಬಿದ ತೋಳಗಳೇ ವಿಜೃಂಭಿಸುತ್ತಿರುವಾಗ ನ್ಯಾಯದ ನಿರೀಕ್ಷೆ ಸಾಧ್ಯವೆ? ಆದರೂ ಇದನ್ನು ಪ್ರಜಾಪ್ರಭುತ್ವ ಎಂದು ಕರೆಯಬೇಕಾದ ಅನಿವಾರ್ಯ ಕರ್ಮ ನಮ್ಮದು.


ಕಾರ್ಖಾನೆಯ ಮಾಲೀಕ, ಮಾಜಿ ಮಂತ್ರಿ ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪನವರ ಮಗ ಗಣೇಶ್ ಹಾಗೂ ಚಾಮರಾಜನಗರದ ಬನ್ನಾರಿಯಮ್ಮ ಕಾರ್ಖಾನೆಯ ಮಾಲೀಕ ಶರವಣನ್ ಇದ್ದಾರೆ.

ಸರ್ಕಾರದ ವತಿಯಿಂದ ಸಕ್ಕರೆ ಮಂತ್ರಿ ಮಂಡಳಿಯ ಅಧ್ಯಕ್ಷರಾಗಿಯೂ, ಕೃಷಿ ಮಂತ್ರಿ ಸಹ-ಅಧ್ಯಕ್ಷರಾಗಿಯೂ, ಕಬ್ಬು ಮತ್ತು ಸಕ್ಕರೆ ಆಯುಕ್ತರು ಕಾರ್ಯದರ್ಶಿಯಾಗಿಯೂ ಉಳಿದಂತೆ ಇನ್ನಿತರ ಕೆಲವು ಅಧಿಕಾರಿಗಳು ಸದಸ್ಯರಾಗಿರುವುದು ಸತ್ಯಾಯ.

ರೈತ ಪ್ರತಿನಿಧಿಗಳಾಗಿ ನೇಮಿಸಬೇಕಾಗಿದ್ದ 5 ಮಂದಿಯ ಆಯ್ಕೆಯಲ್ಲೂ ಸಕ್ಕರೆ ಕಂಪನಿಗಳ ಕೈವಾಡ ಎದ್ದು ಕಾಣಿಸುತ್ತಿದೆ. ಇದರಲ್ಲಿ ಬೆಳಗಾವಿಯ ಮಾಜಿ ಎಂಎಲ್‌ಎ ಮೋಹನ್‌ಶಾ, ರಾಮನಗೌಡ ಪಾಟೀಲ್, ರೈತ ಸಂಘದ ಶಾಸಕ ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ್ ಅಲ್ಲದೆ ಮಹಿಮಾ ಪಾಟೀಲ್‌ರ ಬಂಧು ತೇಜಸ್ವಿ ಪಾಟೀಲ್‌ರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಕರ್ನಾಟಕ ರಾಜ್ಯದಲ್ಲಿ 2006ರಿಂದಲೂ ಕಬ್ಬು ಬೆಳೆಗಾರರ ಸಂಘ್‌ವೊಂದು ಅಸ್ತಿತ್ವದಲ್ಲಿದ್ದು ಕಬ್ಬು ಬೆಳೆಗಾರರ ಸಮಸ್ಯೆಗಳಿಗಾಗಿ ನಿರಂತರ ಹೋರಾಟ ನಡೆಸಿಕೊಂಡು ಬಂದಿದೆ. ವಾಸ್ತವದಲ್ಲಿ ಈ ಮಂಡಳಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಪ್ರಾತಿನಿಧ್ಯ ಪ್ರಮುಖವಾಗಿರಬೇಕಿತ್ತು. ಆದರೆ ಈ ಸಂಘವನ್ನು ಉದ್ದೇಶಪೂರ್ವಕ ಕಡೆಗಣಿಸಿರುವುದರ ಹಿಂದೆ ಸಕ್ಕರೆ ಲಾಬಿಯ ಸ್ಪಷ್ಟ ಕೈವಾಡವಿರುವುದರಲ್ಲಿ ಯಾರಿಗೂ ಅನುಮಾನವಿಲ್ಲ.

ಕಾರ್ಖಾನೆ ಮಾಲಿಕರೂ ಆಗಿರುವ ಹಾಲಿ ಮಂತ್ರಿ ಈ ಮಂಡಳಿಯಲ್ಲಿರಬಾರದೆಂದು ಮಂತ್ರಿಯ ತವರು ಜಿಲ್ಲೆಯಿಂದಲೇ ಒತ್ತಡ ಹೆಚ್ಚಿದ ಹಿನ್ನೆಲೆಯಲ್ಲಿ ಎಸ್‌ಆರ್ ಪಾಟೀಲ್ ಮಂಡಳಿಯ ಸ್ಥಾನ ತೆರವು ಮಾಡಿ ತಮ್ಮ ಬಂಧುವನ್ನು ಅಲ್ಲಿ ಕೂರಿಸಿದ್ದಾರೆ. ಸದರಿ ಮಂಡಳಿಗೆ ಸಂಘದ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಆಗ್ರಹಿಸಿ ಸಾವಿರಾರು ರೈತರು ಸಿಎಂ ಮನೆ ಮುಂದೆ ಪ್ರತಿಭಟನೆ ಮಾಡಿದರೂ ಸರ್ಕಾರ ಜಗ್ಗಲಿಲ್ಲವೆಂದರೆ ಈ ಲಾಬಿ ಎಷ್ಟು ಬಲಾಢ್ಯವಾಗಿದೆಯೆಂಬುದನ್ನು ಊಹಿಸಬಹುದು. ರೈತರನ್ನು ದಿಕ್ಕು ತಪ್ಪಿಸಲಿಕ್ಕಾಗಿ 'ಸಂಘ'ದ ಅಧ್ಯಕ್ಷ ಕುರುಬೂರು ಶಾಂತಕುಮಾರ್‌ರನ್ನು ವಿಶೇಷ ಆಹ್ವಾನಿತರು ಎಂದು ಸಭೆಗೆ ಆಹ್ವಾನಿಸಿ ಕಣ್ಣೊರೆಸುವ ನಾಟಕವೊಂದು ಶುರುವಾಗಿದೆ.

ಕಳೆದ ವರ್ಷ ಒಂದು ಟನ್ ಕಬ್ಬಿಗೆ 2400 ರೂಗಳೆಂದು ನಿಗದಿಯಾಗಿತ್ತು. ಪ್ರಸಕ್ತ ಸಾಲಿನಲ್ಲಿ ಅದನ್ನು 2500 ರೂಪಾಯಿಗಳಿಗೆ ಏರಿಸಲಾಗಿದೆ. ಆದರೆ ವಾಸ್ತವದಲ್ಲಿ ಕಬ್ಬು ಉತ್ಪಾದನಾ ವೆಚ್ಚ ಕಳೆದ ಸಾಲಿಗಿಂತ ಕನಿಷ್ಟ 300 ರೂಪಾಯಿಯಷ್ಟು ಹೆಚ್ಚಳವಾಗಿದೆ. ಬೀಜ ಮತ್ತು ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬೆಲೆಯಲ್ಲಿ ಭಾರೀ



ಏರಿಕೆಯಾಗಿರುವುದು, ಕೃಷಿ ಕೂಲಿದರದಲ್ಲಿ ಏರಿಕೆಯಾಗಿರುವುದು ಪ್ರಮುಖ ಕಾರಣಗಳು.

ಬೆಲೆ ನಿಗದಿ ಮಾಡಲೆಂದು ನೇಮಿಸಲಾಗಿದ್ದ ಕೃಷಿ ಇಲಾಖೆಯ ತಜ್ಞರ ತಂಡ ಕೊಟ್ಟಿರುವ ವರದಿಯ ಪ್ರಕಾರ ಒಂದು ಟನ್ ಕಬ್ಬು ಉತ್ಪಾದಿಸಲು 2,460 ರೂ.ಗಳು ವೆಚ್ಚವಾಗುತ್ತದೆ. ಹೀಗಿರುವಾಗ ಸರ್ಕಾರ 2500 ರೂ ನಿಗದಿ ಮಾಡುವುದಾದರೆ ರೈತರು ಮಣ್ಣು ತಿನ್ನಬೇಕೆ? ಸಾಲಸೋಲ ಮಾಡಿ ಹೂಡಿದ ಬಂಡವಾಳಕ್ಕೆ ಕನಿಷ್ಟ ಬಡ್ಡಿಯಾದರೂ ಹುಟ್ಟಬೇಕಲ್ಲವೆ? ಕಬ್ಬು ಬೆಳೆಗಾರರ ಸಂಘವು ಟನ್ ಒಂದಕ್ಕೆ ಕನಿಷ್ಟ 3,050 ರೂಪಾಯಿಗಳನ್ನು ನಿಗದಿ ಮಾಡುವಂತೆ ಒತ್ತಾಯ ಹೇರಿದೆ. ಈಗಾಗಲೆ ಪಂಜಾಬ್, ಹರ್‍ಯಾಣ, ಗುಜರಾತ್ ಮತ್ತು ಉತ್ತರಪ್ರದೇಶಗಳಲ್ಲಿ ಒಂದು ಟನ್ ಕಬ್ಬಿಗೆ ಸರಿಸುಮಾರು 3000 ರೂಗಳನ್ನು ನಿಗದಿಗೊಳಿಸಿವೆ.

ಕರ್ನಾಟಕದ ಕಾರ್ಖಾನೆ ಮಾಲಿಕರು ಬೆಳೆಗಾರರಿಗೆ ನ್ಯಾಯಬದ್ಧ ಬೆಲೆ ಕೊಟ್ಟು ಖರೀದಿಸಿದ ಇತಿಹಾಸವೇ ಇಲ್ಲ. ಬಹುಪಾಲು ಕಂಪನಿಗಳು ತಮ್ಮ ಅಧಿಕೃತ ಲೆಕ್ಕಪತ್ರದಲ್ಲಿ ಒಂದೋ ನಷ್ಟವನ್ನು ತೋರಿಸುತ್ತವೆ ಅಥವ ಅತ್ಯಲ್ಪ ಮೊತ್ತದ ಲಾಭವನ್ನಷ್ಟೆ ತೋರಿಸುತ್ತವೆ.

ಹೀಗೆ ಸಕ್ಕರೆ ಕೈಗಾರಿಕೆಯ ಆದಾಯದ ಲೆಕ್ಕಾಚಾರದಲ್ಲಿ ಗೋಲ್‌ಮಾಲ್ ನಡೆಯುವುದು ಮಾಮೂಲಿ. ಸಕ್ಕರೆಯ ಉಪ ಉತ್ಪನ್ನಗಳಾದ ಕಾಕಂಬಿ, ಮಡ್ಡಿ, ಬಗಾಸ್ ಮುಂತಾದವುಗಳನ್ನು ಸರಿಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಒಂದು ಟನ್ ಕಬ್ಬನ್ನು ಅರೆದಾಗ ಸಕ್ಕರೆಯ ಜೊತೆ ಸುಮಾರು 40 ಲೀಟರ್ ಕಾಕಂಬಿ(ಮೊಲಾಸಿಸ್) ದೊರೆಯುತ್ತದೆ. ಮದ್ಯ ತಯಾರಿಕೆಯಲ್ಲಿ ಬಳಕೆಯಾಗುವ ಕಾಕಂಬಿಗೆ ಬೇಡಿಕೆಯಿದ್ದೇ ಇದೆ. ಹಾಗೆ ಉಳಿಯುವ ಕಬ್ಬಿನ ಸಿಪ್ಪೆಯನ್ನು ಉರುವಲಾಗಿ ಬಳಸಿ, ವಿದ್ಯುತ್ ತಯಾರಿ ಮಾಡುವ ಅವಕಾಶಗಳು ವಿಪುಲವಾಗಿವೆ. ಈಗಾಗಲೇ ಕೆಲವು ಕಾರ್ಖಾನೆಗಳು ವಿದ್ಯುತ್ ತಯಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಇದರ ಜೊತೆಗೆ ಕಬ್ಬಿನ ರಸವನ್ನು ಬೇಯಿಸುವಾಗ ಬರುವ ಮಡ್ಡಿಯನ್ನು ಜೈವಿಕ ಗೊಬ್ಬರವಾಗಿ ಬಳಸಲಾಗುತ್ತಿದ್ದು ಅದೂ ಕೂಡ ಒಂದಷ್ಟು ಆದಾಯ ತಂದುಕೊಡುತ್ತದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ನಿಯಂತ್ರಣ ಮಂಡಳಿಯಲ್ಲಿ ಕಬ್ಬಿನ ಉತ್ಪಾದನೆಯ ವೆಚ್ಚವನ್ನು ಹಾಗೂ ಕಾರ್ಖಾನೆಗಳ ಒಟ್ಟಾರೆ ಆದಾಯ-ವೆಚ್ಚಗಳನ್ನು ಪರಿಶೀಲಿಸುವ ಸಾಮರ್ಥ್ಯವಿರುವ ವಿಷಯ ತಜ್ಞರನ್ನು ನೇಮಿಸುವಂತಾದರೆ ಆದಾಯ ವೆಚ್ಚದ ತಪ್ಪು ಲೆಕ್ಕಾಚಾರಗಳಿಗೆ ಒಂದಷ್ಟಾದರೂ ಕಡಿವಾಣ ಬೀಳುತ್ತದೆ.

ಇನ್ನು ದೇಶದ ಒಟ್ಟಾರೆ ಸ್ಥಿತಿಗತಿಯನ್ನು ಗಮನಿಸುವುದಾದರೆ, ಸಕ್ಕರೆ ಉದ್ಯಮ ಕ್ಷೇತ್ರದಲ್ಲಿ ಮೊದಲ ಸ್ಥಾನದಲ್ಲಿರುವ ಮಹಾರಾಷ್ಟ್ರದಲ್ಲೂ ಇಡೀ ಉದ್ಯಮದ ಮಾಲಿಕತ್ವ ಭ್ರಷ್ಟ ಮಂತ್ರಿ ಮಹೋದಯರ ಕೈಗಳಲ್ಲೇ ಇದೆ. ಉದಾಹರಣೆಗೆ ಎನ್‌ಸಿಪಿ ಮುಖಂಡ ಹಾಗೂ ಕೇಂದ್ರ ಕೃಷಿ ಮಂತ್ರಿ ಶರದ್‌ಪವಾರ್ ಒಬ್ಬರ ಹಿಡಿತದಲ್ಲೇ 7 ಸಕ್ಕರೆ ಕಾರ್ಖಾನೆಗಳಿವೆ. ಮಹಾರಾಷ್ಟ್ರದ ಹಣಕಾಸು ಮಂತ್ರಿ ಜಯಂತ್ ಪಾಟೀಲ್ ಮಾಲಿಕತ್ವದಲ್ಲಿ 3 ಕಾರ್ಖಾನೆಗಳಿವೆ. ಬಿಜೆಪಿಯ ಮಾಜಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯ ಮಾಲೀಕತ್ವದಲ್ಲೂ ಸಕ್ಕರೆ ಹಾಗೂ ಅದರ ಉಪ ಉತ್ಪನ್ನಗಳಿಗೆ ಸಂಬಂಧಿಸಿದ ಹಲವು ಕಂಪನಿಗಳಿವೆ. ಇದು ಕೇವಲ ಮಹಾರಾಷ್ಟ್ರ ಅಥವ ಕರ್ನಾಟಕದ ಸಂಗತಿ ಮಾತ್ರವಲ್ಲ; ಇಡೀ ದೇಶದ ಸಕ್ಕರೆ ಕೈಗಾರಿಕೆಯ ಚಿತ್ರಣ ಇದಕ್ಕಿಂತ ಭಿನ್ನವೇನಲ್ಲ.

ಅಂದಹಾಗೆ ಸಕ್ಕರೆ ಕ್ಷೇತ್ರದ ಸಮಸ್ಯೆಗಳ ಪರಿಶೀಲನೆಗಾಗಿ ರಚಿಸಲಾಗಿರುವ ಉನ್ನತ ಸಮಿತಿಯ ಅಧ್ಯಕ್ಷರಾಗಿ ಕೂತಿರುವುದೂ ಇದೇ ಶರದ್ ಪವಾರ್. ಸಕ್ಕರೆ ಉತ್ಪಾದನೆಯಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರುವ ಮಹಾರಾಷ್ಟ್ರದಲ್ಲಿ 7 ಷುಗರ್ ಫ್ಯಾಕ್ಟರಿಗಳು ಇದೇ ಶರದ್ ಪವಾರ್ ಮತ್ತು ಬಂಧುಗಳ ಒಡೆತನದಲ್ಲಿವೆ.


ಈಗ ಹೇಳಿ. ಈ ದುಷ್ಟಕೂಟ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂದರೆ ನೀವು ನಂಬುತ್ತೀರಾ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಒಂದು ಟನ್ ಕಬ್ಬಿನ ಆರ್ಥಿಕ ವಹಿವಾಟು

ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ಸರ್ಕಾರ ಸೇರಿಕೊಂಡು ಕಬ್ಬು ಬೆಳೆಯುವ ರೈತರನ್ನು ಯಾವ ರೀತಿಯಲ್ಲಿ ವಂಚಿಸುತ್ತಿವೆ ಎಂದು ಅರ್ಥ ಮಾಡಿಕೊಳ್ಳಲು ಈ ಕಬ್ಬಿನ ಒಟ್ಟಾರೆ ಆರ್ಥಿಕತೆಯನ್ನೇ ಬಿಡಿಸಿ ನೋಡಬೇಕು. ಒಂದು ಟನ್ ಕಬ್ಬಿನಲ್ಲಿ ಪಡೆಯಬಹುದಾದ ವಸ್ತುಗಳು ಮತ್ತದರ ಬೆಲೆ ಹಾಗೂ ವಹಿವಾಟಿನ ವಿವರಗಳನ್ನು ಇಲ್ಲಿ ನೀಡಿದೆ.

ಉತ್ಪನ್ನ	ಉತ್ಪಾದನಾ ಪ್ರಮಾಣ	ಬೆಲೆ
1. ಸಕ್ಕರೆ	100 ಕೆಜಿ	2700 ರೂ.
2. ಮೊಲಾಸಿಸ್	40 ಕೆಜಿ	250 ರೂ.
3. ಸಿಪ್ಪೆ	350 ಕೆಜಿ (150 ಯೂನಿಟ್‌ವಿದ್ಯುತ್ ಉತ್ಪಾದನೆ)	750 ರೂ.
4. ಮಡ್ಡಿ	-	60 ರೂ.
		ಒಟ್ಟು 3760 ರೂ.



ಇದು ಮೊದಲನೆ ಹಂತ, ನಂತರದಲ್ಲಿ 350 ಕೆಜಿ ಸಿಪ್ಪೆಯನ್ನೂ ಉರಿಸುವ ಮೂಲಕ 150 ಯೂನಿಟ್‌ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ.

40 ಕೆಜಿ ಮೊಲಾಸಿಸ್ ಮೂಲಕ 10 ಲೀಟರ್‌ನಷ್ಟು ಸ್ಪಿರಿಟ್ ದೊರಕುತ್ತದೆ. ಇದರಿಂದ 30 ಲೀಟರ್ ವಿಸ್ಕಿ ತಯಾರಿಸಬಹುದು.

ಒಂದು ಲೀಟರ್ ವಿಸ್ಕಿಯ ಬೆಲೆ 500 ರೂ. ಅಂತಿಟ್ಟುಕೊಂಡರೂ ಇದರ ಒಟ್ಟು ಮೌಲ್ಯ 15000 ದಷ್ಟಾಗುತ್ತದೆ.

ಅಂದರೆ ಒಟ್ಟಾರೆ ಒಂದು ಟನ್ ಕಬ್ಬು ಅರೆದಾಗ ಅದರ ತಳಹಂತದಲ್ಲಿರುವ ರೈತರಿಗೆ ಸಿಗುವುದು ಕೇವಲ 2500 ರೂ. ಮಾತ್ರ. ಆದರೆ ಅದೇ ಒಂದು ಟನ್ ಕಬ್ಬಿನ ಉಪಉತ್ಪನ್ನಗಳಿಂದ ಒಟ್ಟು 20 ಸಾವಿರ ರೂ.ನಷ್ಟು ಮೌಲ್ಯದ ವಸ್ತುಗಳು ಸಿಗುತ್ತವೆ.

ಈ ಇಡೀ ವಹಿವಾಟಿನಲ್ಲಿ ಸರ್ಕಾರಕ್ಕೆ ಎಲ್ಲಾ ರೀತಿಯ ತೆರಿಗೆಗಳಿಂದ ಸಿಗುವ ಮೊತ್ತ 3050 ರೂ. ಮಾತ್ರ. ಅಂದರೆ ರೈತರಿಗೆ 2500+ ಸರ್ಕಾರದ ತೆರಿಗೆ 3050 ಒಟ್ಟು 20 ಸಾವಿರದಲ್ಲಿ 5550 ಪಾವತಿಸುವ ಕಾರ್ಖಾನೆ ಮಾಲೀಕರು ಹಾಗೂ ಮದ್ಯ ತಯಾರಕರು ಹದಿನೈದು ಸಾವಿರ ರೂಪಾಯಿ ಟರ್ನ್ ಓವರ್ ಮಾಡಿಕೊಳ್ಳುತ್ತಿದ್ದಾರೆ. ಆದರೆ ಕಬ್ಬು ಬೆಳೆವ ರೈತರಿಗೆ ಟನ್‌ಗೆ ಜುಜುಬಿ ನೂರು ರೂಪಾಯಿಯನ್ನಾದರೂ ಹೆಚ್ಚಿಗೆ ಕೊಡಲು ನಿರಾಕರಿಸುತ್ತಿದ್ದಾರೆ!

'ನಾನು ಕ್ರಿಕೆಟರ್ ಅಲ್ಲ, ನಟ' ಎಂದಿದ್ದ ಸಚಿನ್ ತೆಂಡೂಲ್ಕರ್


ಇತ್ತೀಚೆಗೆ ಕ್ರಿಕೆಟ್ ಆಟದಿಂದ ನಿವೃತ್ತಿ ಘೋಷಿಸಿದ ಸಚಿನ್ ತೆಂಡೂಲ್ಕರ್‌ನನ್ನು 'ಕ್ರಿಕೆಟ್ ದೇವರು' ಎಂದೆಲ್ಲಾ ಮಾಧ್ಯಮಗಳು ಕೊಂಡಾಡಿದವು. ಆದರೆ ಇದೇ ತೆಂಡೂಲ್ಕರ್ ತೆರಿಗೆ ಕಟ್ಟುವುದರಿಂದ ತಪ್ಪಿಸಿಕೊಳ್ಳಲು 'ನಾನು ವೃತ್ತಿಯಲ್ಲಿ ಕ್ರಿಕೆಟರ್ ಅಲ್ಲ, ಬದಲಾಗಿ ನಟ. ಹೆಚ್ಚೆಂದರೆ ನಾನು ಒಬ್ಬ ಹವ್ಯಾಸಿ ಕ್ರಿಕೆಟ್ ಆಟಗಾರ' ಎಂದು ತೆರಿಗೆ ಇಲಾಖೆಯ ಮುಂದೆ ಘೋಷಿಸಿಕೊಂಡಿದ್ದ ಸಂಗತಿ ಈಗ ಮತ್ತೆ ಸುದ್ದಿ ಮಾಡುತ್ತಿದೆ.

ಇದಾದದ್ದು ಸುಮಾರು ಎಂಟು ವರ್ಷಗಳ ಹಿಂದೆ. 2001-2005ರ ತನಕ ತೆಂಡೂಲ್ಕರ್ ಇಎಸ್‌ಪಿಎನ್ ಸ್ಟಾರ್ ಸ್ಪೋರ್ಟ್ಸ್, ಪೆಪ್ಸಿಕೊ ಮತ್ತು ವೀಸಾ ಕಂಪನಿಗಳಿಂದ 5,92,31,211 ರೂಪಾಯಿಗಳ ಆದಾಯ ಪಡೆದಿದ್ದ. ಈ ಆದಾಯದ ಮೇಲೆ 2,08,59,707 ರೂಪಾಯಿಗಳನ್ನು ತೆರಿಗೆಯಾಗಿ ಕೊಡು ಎಂದು ಇನ್‌ಕಮ್ ಟ್ಯಾಕ್ಸ್ ಕಮಿಷನರ್ ತೆಂಡೂಲ್ಕರ್‌ಗೆ ಹೇಳಿತ್ತು. ಐದು ಕೋಟಿಗಳಲ್ಲಿ ಎರಡು ಕೋಟಿಯಷ್ಟು ಹಣವನ್ನು ತೆರಿಗೆಯಾಗಿ ಸರ್ಕಾರದ ಬೊಕ್ಕಸಕ್ಕೆ ಕೊಡುವುದೆಂದರೆ ಸುಮ್ಮನೆ ಮಾತೆ. ಅದೂ ತೆಂಡೂಲ್ಕರ್‌ನಂತಹ ಧನಪಿಶಾಚಿಗೆ (ಈ ಪದ ಪ್ರಯೋಗ ಯಾಕೆಂದರೆ ಆತ ವಿದೇಶಿ ಕಾರ್ ಮೇಲೂ ತೆರಿಗೆ ಕಟ್ಟುವುದರಿಂದ ತಪ್ಪಿಸಿಕೊಂಡಿದ್ದು ಎಲ್ಲರಿಗೂ ಗೊತ್ತಿದೆ)

ಆಗ ತೆಂಡೂಲ್ಕರ್ ಇನ್‌ಕಮ್ ಟ್ಯಾಕ್ಸ್‌ನ ಆಕ್ಟ್ ಸೆಕ್ಷನ್ 80 'ಆರ್‌ಆರ್' ಮೊರೆ ಹೋದ. ಆ ಸೆಕ್ಷನ್ ಪ್ರಕಾರ ಲೇಖಕ, ಸಂಗೀತಗಾರ ಅಥವಾ ನಟ ಆಗಿದ್ದರೆ ಈ ವೃತ್ತಿಯಿಂದ ಪಡೆದ ಆದಾಯದ ಮೇಲೆ ತೆರಿಗೆ ವಿನಾಯಿತಿ ಪಡೆಯಬಹುದು ಎಂದು ಹೇಳುತ್ತದೆ.

ಟ್ರಿಬ್ಯೂನಲ್ ಮುಂದೆ ಹಾಜರಾದ ತೆಂಡೂಲ್ಕರ್‌ನನ್ನು ತೆರಿಗೆ ಅಧಿಕಾರಿ 'ನಿಮ್ಮ ವೃತ್ತಿ ಯಾವುದು' ಎಂದು ಪ್ರಶ್ನಿಸಿದರು. ಆಗ ಮಾಸ್ಟರ್ ಬ್ಲಾಸ್ಟರ್ ತೆಂಡೂಲ್ಕರ್ "ನಾನೋರ್ವ ಜನಪ್ರಿಯ ರೂಪದರ್ಶಿ. ನಾನು ಹಲವಾರು ಕಂಪನಿಗಳ ವಸ್ತುಗಳಿಗೆ ಟಿವಿ ಜಾಹೀರಾತುಗಳಲ್ಲಿ ನಟಿಸಿದ್ದೇನೆ. ನಾನು ವೃತ್ತಿಯಲ್ಲಿ ನಟನಾಗಿರುವುದರಿಂದ ಇದನ್ನೇ ನನ್ನ ಆದಾಯದ ಮೂಲ ಎಂದು ದಾಖಲಿಸಿದ್ದೇನೆ. ನಾನು ಹವ್ಯಾಸಿ ಕ್ರಿಕೆಟರ್ ಆಗಿರುವುದರಿಂದ ಅದರಿಂದ ಬಂದ ಆದಾಯವನ್ನು 'ಇತರೆ ಮೂಲಗಳಿಂದ' ಎಂದು ದಾಖಲಿಸಿದ್ದೇನೆ'' ಎಂದು ಉತ್ತರಿಸಿದ್ದ. "ನಟನಾದ ನನಗೆ ಟ್ಯಾಕ್ಸ್‌ನ ಆಕ್ಟ್ ಸೆಕ್ಷನ್ 80 ಆರ್‌ಆರ್ ಅಡಿ ತೆರಿಗೆ ವಿನಾಯಿತಿ ಕೊಡಬೇಕು" ಎಂದು ಹೇಳಿದ್ದ.

ಆಗ ತೆರಿಗೆ ಇಲಾಖೆಯ ಅಧಿಕಾರಿ ಡಿಕ್ಷನರಿಯಲ್ಲಿ 'ಪ್ರೊಫೆಷನಲ್' ಪದದ ಅರ್ಥವನ್ನು ತೆಗೆದು ತೆಂಡೂಲ್ಕರ್‌ಗೆ ವಿವರಿಸಿ "ನೀನು ಕ್ರಿಕೆಟ್ ಆಟಗಾರನಾದ್ದರಿಂದ ಮತ್ತು ಅದರಿಂದಲೇ ನಿನಗೆ ಆದಾಯ ಬರುವುದರಿಂದ ಅದನ್ನೇ ನಿನ್ನ ವೃತ್ತಿ ಎಂದು ಹೇಳಿದರೆ ಸರಿಯಾಗುತ್ತದೆ. ಸಚಿನ್ ತೆಂಡೂಲ್ಕರ್ ಕ್ರಿಕೆಟರ್ ಅಲ್ಲದಿದ್ದರೆ ಯಾರನ್ನು ಕ್ರಿಕೆಟರ್ ಎಂದು ಕರೆಯಲಾಗುತ್ತದೆ? ಅದಕ್ಕಿಂತ ಮುಖ್ಯವಾಗಿ ಸಚಿನ್ ಕ್ರಿಕೆಟರ್ ಆಗಿರುವದರಿಂದಲೇ ವಿವಿಧ ಕಂಪನಿಗಳು ಆತನನ್ನು ರೂಪದರ್ಶಿಯಾಗಿ ಬಳಸಿಕೊಳ್ಳುತ್ತಿವೆಯೇ ಹೊರತು ಆತನ ನಟನೆಯ ಸಾಮರ್ಥ್ಯದ ಕಾರಣಕ್ಕಲ್ಲ. ಆದ್ದರಿಂದ ತೆಂಡೂಲ್ಕರ್ ಅವರಿಗೆ ವಿನಾಯಿತಿ ಕೊಡುವುದು ಸರಿಯಲ್ಲ" ಎಂದು ಸ್ಪಷ್ಟಪಡಿಸಿದರಲ್ಲದೆ ಆತನ ಅಹವಾಲನ್ನು ತಿರಸ್ಕರಿಸಿದ್ದರು.



ಆದರೆ ತೆಂಡೂಲ್ಕರ್ ಅಲ್ಲಿಗೆ ಸುಮ್ಮನಾಗಲಿಲ್ಲ. ತನ್ನನ್ನು ನಟ ಎಂದು ಪರಿಗಣಿಸಬೇಕೆಂದು ಮತ್ತೆ ಅರ್ಜಿ ಸಲ್ಲಿಸಿದ. ಆಗಲೂ ಟ್ರಿಬ್ಯೂನಲ್ "ತೆಂಡೂಲ್ಕರ್ ಓರ್ವ ಕ್ರಿಕೆಟ್ ಪಟು. ಆತನ ನಟನೆಗೆಂದೇ ಯಾರೂ ಆತನಿಗೆ ಹಣವನ್ನು ನೀಡುತ್ತಿಲ್ಲ" ಎಂದಿತ್ತು.

ಈ ತೀರ್ಪಿನ ವಿರುದ್ಧವೂ ತೆಂಡೂಲ್ಕರ್ ಅರ್ಜಿ ಸಲ್ಲಿಸಿದ. ಆಗ ಆತ ಅವಲಂಬಿಸಿದ್ದು ಅಮಿತಾಬ್ ಬಚ್ಚನ್ ಅವರನ್ನು ಕುರಿತಂತೆ ಇನ್‌ಕಂ ಟ್ಯಾಕ್ಸ್ ಇಲಾಖೆ ತೆಗೆದುಕೊಂಡಿದ್ದ ನಿಲುವು. 2004ರಲ್ಲಿ ತೆರಿಗೆ ಇಲಾಖೆಯು ಹೀಗೊಂದು ತೀರ್ಪು ನೀಡಿತ್ತು. 'ಕೌನ್ ಬನೇಗಾ ಕರೋಡ್ ಪತಿ' ಕಾರ್ಯಕ್ರಮ ನಡೆಸಿಕೊಡಲು ಅಮಿತಾಬ್ ಬಚ್ಚನ್ ಅವರು ತಮ್ಮ ನಟನಾ ಕೌಶಲ್ಯವನ್ನು ಉಪಯೋಗಿಸುವುದರಿಂದ ಈ ಕಾರ್ಯಕ್ರಮಕ್ಕೆ ಅವರು ಪಡೆಯುವ ಆದಾಯದ ಮೇಲೆ ವಿನಾಯಿತಿ ನೀಡಬಹುದು' ಎನ್ನಲಾಗಿತ್ತು.

ಅದನ್ನೇ ಆಧರಿಸಿ ಆಶಾ ವಿಜಯರಾಘವನ್ ಎಂಬ ಟ್ರಿಬ್ಯೂನಲ್ ನ್ಯಾಯಾಧೀಶೆ ಮತ್ತು ಆರ್.ಕೆ.ಪಾಂಡ ಎಂಬ ಅಕೌಂಟೆಂಟ್ 'ತೆಂಡೂಲ್ಕರ್ ಕೂಡ ಲೈಟ್ಸ್ ಮತ್ತು ಕ್ಯಾಮೆರಾ ಮುಂದೆ ನಿಂತು ಜಾಹೀರಾತುಗಳಲ್ಲಿ ನಟಿಸುವುದರಿಂದ, ಅದಕ್ಕೆಂದು ಅವರು ತಮ್ಮ ನಟನಾ ಕೌಶಲ್ಯವನ್ನು ಉಪಯೋಗಿಸುವುದರಿಂದ ಅವರಿಗೆ ವಿನಾಯಿತಿ ಕೊಡಬಹುದು" ಎಂದು ತೀರ್ಪು ನೀಡಿದ್ದರು.

ಆ ಮೂಲಕ ತೆಂಡೂಲ್ಕರ್ ಎರಡು ಕೋಟಿ ರೂಪಾಯಿಗಳನ್ನು ತೆರಿಗೆಯಾಗಿ ಕಟ್ಟದೇ ದೇಶದ ಬೊಕ್ಕಸಕ್ಕೆ ವಂಚಿಸಿದ್ದ.

ಅಷ್ಟೇ ಅಲ್ಲದೆ, ಆತ ತನ್ನ ಸಿಬ್ಬಂದಿಗೆ ಟೀ ಮತ್ತು ತಿಂಡಿ ಒದಗಿಸಲು ವೆಚ್ಚಮಾಡಿದ್ದ ರೂ. 57,969 ಮೇಲೂ, ಟೆಲಿಫೋನ್ ಮತ್ತು ಮನರಂಜನೆಗೆ ಖರ್ಚು ಮಾಡಿದ್ದ 50,000 ರೂಪಾಯಿಗಳು, ಕಾರ್‌ಗೆ ಪೆಟ್ರೋಲ್ ಹಾಕಿಸಲು ಕಟ್ಟಿದ್ದ 1,42,824 ರೂಪಾಯಿಗಳ ಮೇಲೂ ತೆರಿಗೆ ವಿಧಿಸಬಾರದೆಂದು ಕೋರಿದ್ದ. ಆದರೆ ಅದೃಷ್ಟವಶಾತ್ ತೆರಿಗೆ ಇಲಾಖೆಯು ಈ ಮನವಿಯನ್ನು ತಿರಸ್ಕರಿಸಿತ್ತು. ಕಾರಣ ಟೆಲಿಫೋನ್, ಕಾರ್ ಮತ್ತು ಊಟ-ತಿಂಡಿಗಳನ್ನು ಆತ ಮತ್ತು ಆತನ ಕುಟುಂಬದವರೂ ಬಳಸಿದ್ದರಿಂದ.

ಇಂತಹ ಜುಗ್ಗ ತೆರಿಗೆ ವಂಚಕ ತೆಂಡೂಲ್ಕರ್‌ನನ್ನು ಕೊಂಡಾಡುವ ಜನ ಪೆದ್ದರೋ, ಮುಗ್ಧರೋ ಅರ್ಥವಾಗದು!



ಎಟಿಎಂ ಕಿರಾತಕನ ಶಿಕಾರಿ



ಅಪರಾಧಿಕ ಅಧೋಗಾಥೆಯಲ್ಲಿ ಆತನೇ ಬೇರೆ, ಆತನ ವಿಕೃತಿಯೇ ಬೇರೆ. ದಂಡುಪಾಳ್ಯದ ನರಹಂತಕರ ಹಾಗೆ ಹೊಂಚು ಹಾಕಿ ಮನೆಗೆ ನುಗ್ಗಲಾರ. ಉಮೇಶ್ ರೆಡ್ಡಿಯಂತೆ ಕತ್ತಲಾಗುವತನಕ ಕಾಯಲಾರ. ಒಂಟಿ ಮಹಿಳೆಯೇ ಆತನ ಗುರಿ ನಿಜ. ಆದರೆ ಆಕೆಯ ಬಳಿ ಎಟಿಎಂ ಕಾರ್ಡಿರಬೇಕು.

ಕಾಮಕ್ಕಾಗಿ ಹೆಂಗಸರನ್ನು ಕೊಂದವರುಂಟು. ಒಂಟಿ ಹೆಂಗಸರಿರುವ ಮನೆಗೆ ನುಗ್ಗಿ ದೋಚಿದವರುಂಟು. ಹಾಗೆ ದೋಚಿಕೊಂಡು ಕೊಂದು ಬಂದವರೂ ಉಂಟು. ಆದರೆ ಎಟಿಎಂ ಘಟಕಗಳನ್ನೇ ಹೊಂಚುಹಾಕಿ ಅಲ್ಲಿಗೆ ಬರುವ ಅಸಹಾಯಕ ಮಹಿಳೆಯರನ್ನು ಪೈಶಾಚಿಕವಾಗಿ ಕೊಂದು ಹಾಕುವ ಕ್ರೂರಿ ಈತ ಮಾತ್ರ.

ಇವತ್ತು ಕರ್ನಾಟಕ ಮತ್ತು ಆಂಧ್ರ ರಾಜ್ಯಗಳ ಪೊಲೀಸ್ ಇಲಾಖೆಗಳನ್ನಷ್ಟೇ ಅಲ್ಲ; ಸಮಸ್ತ ಬ್ಯಾಂಕ್ ವಲಯವನ್ನೇ ಕಲ್ಲೋಲಗೊಳಿಸಿರುವ ಈ ಎಟಿಎಂ ಕಿರಾತಕನಿಗಾಗಿ ನಡೆದಿರುವ ಪೊಲೀಸ್ ಬೇಟೆ ಮಾಮೂಲಿಯದೇನಲ್ಲ. ಕರ್ನಾಟಕ ಪೊಲೀಸ್ ಪಡೆಯ ಒಂಬತ್ತು ತಂಡಗಳಲ್ಲದೆ ಆಂಧ್ರದ ಹನ್ನೆರಡು ಪೊಲೀಸ್ ತಂಡಗಳೂ ಈ ಎಟಿಎಂ ಭೂತದ ಬೆನ್ನತ್ತಿವೆ. ಟೀವಿಗಳಲ್ಲಿ, ತರಹೇವಾರಿ ನ್ಯೂಸ್ ಚಾನಲ್ಲುಗಳಲ್ಲಿ ಆತ ಎಟಿಎಂಗೆ ನುಗ್ಗಿ ಒಂಟಿ ಮಹಿಳೆಯನ್ನು ಹಿಂಸಿಸಿದ ಬರ್ಬರವೊಂದೇ ಎಂಥವರನ್ನೂ ಥರಗುಟ್ಟಿಸಿ ಬಿಡುತ್ತದೆ.

ಮೊನ್ನೆ ನವೆಂಬರ್ 19ರ ಮಂಗಳವಾರದ ಬೆಳಗ್ಗೆಯ ದಾರುಣವಾದರೂ ಎಂಥಾದ್ದು!

ಅದು ಬೆಳಗ್ಗೆ 7.10ರ ಸಮಯ. ಬೆಂಗಳೂರು ಮಹಾನಗರ ಪಾಲಿಕೆ ಪಕ್ಕದ ಮಿಷನ್ ರಸ್ತೆ ಕಾರ್ಪೊರೇಷನ್ ಬ್ಯಾಂಕ್ ಶಾಖೆಯ ಚೆಕ್ ವಹಿವಾಟು ವಿಭಾಗದ ಮ್ಯಾನೇಜರ್ ಜ್ಯೋತಿ ಉದಯ್ ಎಂಬ 44ರ ವಯಸ್ಸಿನ ಮಹಿಳೆಯೇ ಈತನ ಲೇಟೆಸ್ಟ್ ಬಲಿ. ಅವತ್ತು ಆಕೆಯ ಮಗಳ ಹುಟ್ಟುಹಬ್ಬ. ಅದಕ್ಕೆಂದು ಪಾಲಿಕೆ ಎದುರಿಗಿದ್ದ ಎಲ್‌ಐಸಿ ಕಲ್ಲು ಕಟ್ಟಡದ ಎಟಿಎಂಗೆ ಜ್ಯೋತಿ ಬಂದಿದ್ದಾಳೆ. ತನ್ನದೇ ಬ್ಯಾಂಕಿನ ಎಟಿಎಂನಿಂದ ಡ್ರಾ ಮಾಡಲು ಜ್ಯೋತಿ ಇನ್ನೇನು ತಿರುಗಬೇಕೆನ್ನುವಷ್ಟರಲ್ಲೇ ಆಗಂತುಕನ ಪ್ರವೇಶವಾಗಿತ್ತು.

ಕಗ್ಗೆ, ದಪ್ಪಗೆ, ಕ್ರೂರ ಮುಖಚರ್ಯೆಯ ಆ ಆಗಂತುಕ ತನ್ನ ಕೈಯಲ್ಲಿ ಗನ್ ಹಾಗೂ ಮಚ್ಚು ಇದ್ದ ಬ್ಯಾಗ್ ಹಿಡಿದೇ ಎಟಿಎಂಗೆ ನುಗ್ಗಿದ್ದ. ಬಂದುಬಂದವನೇ ಜ್ಯೋತಿಯನ್ನು ಗೋಡೆಗೆ ದಬ್ಬಿ ಕುತ್ತಿಗೆಯನ್ನು ಒತ್ತಿ ಹಿಡಿದು ಡ್ರಾ ಮಾಡಿದ್ದ ದುಡ್ಡು ಕಿತ್ತುಕೊಂಡ. ಕೈಲಿದ್ದ ಎಟಿಎಂ ಕಾರ್ಡು, ಆಕೆಯ ಮೊಬೈಲ್, ಪರ್ಸು ಎಲ್ಲವನ್ನೂ ಕಿತ್ತುಕೊಂಡ. ಪ್ರಾಣ ಉಳೀಬೇಕು ಅಂದ್ರೆ ಕಾರ್ಡಿನ ಪಿನ್ ನಂಬರನ್ನು ಕೊಡು ಎಂದಿದ್ದಾನೆ. ಜ್ಯೋತಿ ತಡಬಡಾಯಿಸಿದ್ದಾರೆ. ಬಹುಶಃ ಯಾವುದಾದರೂ ಸುಳ್ಳು ನಂಬರ್ ಹೇಳಿ ಕ್ಷಣಹೊತ್ತು ಕಾಲಹರಣ ಮಾಡುವ ಉಪಾಯವಾದರೂ ಮಾಡಬೇಕಿತ್ತು. ತಕ್ಷಣವೇ ತನ್ನ ಬಳಿಯಿದ್ದ ಚೀಲದಿಂದ ಪಿಸ್ತೂಲೊಂದನ್ನು ಹೊರತೆಗೆದಿದ್ದಾನೆ. ದುಡ್ಡು ತೆಗಿ ಇಲ್ಲಾಂದ್ರೆ ಕೊಂದು ಹಾಕ್ತೀನಿ ಎಂದು ಪಿಸ್ತೂಲನ್ನು ಆಕೆಯ ತಲೆಗಿಟ್ಟು ಗೋಡೆಗೆ ಒತ್ತಿದ್ದಾನೆ.

ಹುಲಿಯ ಬಾಯಿಗೆ ಸಿಕ್ಕ ಹುಲ್ಲೇಮರಿಯಂತೆ ಚೀರಾಡುತ್ತಿದ್ದ ಜ್ಯೋತಿಯ ಕಿರುಚಾಟ ಎಟಿಎಂ ಹೊರಗಿನ ಯಾವ ದಾರಿಹೋಕರಿಗೆ ತಾನೇ ಕೇಳಲು ಸಾಧ್ಯ?

ಮಣಿಯದ ಜ್ಯೋತಿಯನ್ನು ನೆಲಕ್ಕೆ ಕೆಡವಿದ್ದೇ ಕೈಲಿದ್ದ ಮಚ್ಚಿನಿಂದ ಸೌದೆ ಕತ್ತರಿಸಿದಂತೆ ಕಡಿದಿದ್ದಾನೆ. ಒಂದೇ ಏಟಿಗೆ ಪ್ರಜ್ಞೆ ತಪ್ಪಿ ಬಿದ್ದ ಜ್ಯೋತಿ ಸತ್ತೇ ಹೋದಳೆಂದು ಭಾವಿಸಿದ್ದೇ ಹೊರಬಂದವನು ಎಟಿಎಂನ ಶೆಟರ್ ಎಳೆದು ಮುಚ್ಚಿ ಮಾಯವಾಗಿದ್ದಾನೆ. ಇದಾಗಿ ಎಷ್ಟೋ ಹೊತ್ತಿನ ನಂತರ ಶಾಲೆಗೆ ಹೊರಟಿದ್ದ ಮಕ್ಕಳಿಗೆ ಎಟಿಎಂನಿಂದ ಹರಿದುಬರುತ್ತಿದ್ದ ರಕ್ತ ಮತ್ತು ಹೆಂಗಸಿನ ನರಳಾಟ ಕೇಳಿಸಿದೆ. ನೆರೆದ ದಾರಿಹೋಕರೆಲ್ಲ ಸೇರಿ ಮುಚ್ಚಿದ್ದ ಎಟಿಎಂನ ಶೆಟರ್ ಎಳೆದು ನೋಡಿದರೆ ರಕ್ತದ ಮಡುವಿನಲ್ಲಿ ಬಿದ್ದು



ಹಲ್ಲೆ ಮಾಡಿದ ಆರೋಪಿ ವೇಷ ಬದಲಿಸಿಕೊಂಡರೆ ಕಂಡುಬರಬಹುದಾದ ಕಾಲ್ಪನಿಕ ಚಿತ್ರಗಳು

ಒದ್ದಾಡುತ್ತಿದ್ದರು ಬ್ಯಾಂಕ್ ಮ್ಯಾನೇಜರ್ ಜ್ಯೋತಿ.

ಆಕೆಯ ತಲೆಯನ್ನೇ ಕಿರಾತಕ ಸೀಳಿ ಹಾಕಿದ್ದ. ಕಪಾಳದ ಮೂಳೆ ಜಜ್ಜಿ ಹೋಗಿತ್ತು. ಮುಖದ ಆಕಾರವೇ ಬದಲಾಗಿತ್ತು. ಸದ್ಯ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯ ಐಸಿಯುನಲ್ಲಿ ಜ್ಯೋತಿ ಸಾವುಬದುಕಿನ ನಡುವೆ ಹೆಣಗಾಡುತ್ತಿದ್ದಾರಾದರೂ ಮತ್ತೆ ಹಿಂದಿನಂತಾಗಬೇಕೆಂದರೆ ಆರು ತಿಂಗಳುಗಳೇ ಬೇಕು. ಜ್ಯೋತಿ ಅನುಭವಿಸಿದ ಕ್ರೌರ್ಯದ್ದೇ ಒಂದು ಕತೆಯಾದರೆ, ಸುದ್ದಿ ವಾಹಿನಿಗಳಲ್ಲಿ ಕ್ರೌರ್ಯದ ಫುಟೇಜ್ ನೋಡಿದವರೆಲ್ಲ ಥರಗುಟ್ಟಿದ್ದು ಮತ್ತೊಂದು ರೀತಿ.

ರಾಜ್ಯಪಾಲ ಭಾರದ್ವಾಜ್ ಈ ಬಗ್ಗೆ ಏನೇ ಆತಂಕ ವ್ಯಕ್ತಪಡಿಸಿರಬಹುದು. ಗೃಹಸಚಿವ ಜಾರ್ಜ್ ಎಷ್ಟೇ ಕ್ರಮ ಕೈಗೊಂಡಿರಬಹುದು. ಎಟಿಎಂಗಳ ಸುರಕ್ಷತೆ ಕುರಿತಂತೆ ಟಿವಿ, ಪತ್ರಿಕೆಗಳಲ್ಲಿ ಪ್ರತಿನಿತ್ಯ ಚರ್ಚೆಗಳೇ ನಡೆಯಬಹುದು. ಆದರೆ ನಡೆದ ಪೈಶಾಚಿಕತೆಯನ್ನು ಮಾತ್ರ ಜನ ಸದ್ಯಕ್ಕೆ ಮರೆಯಲಾರರು. ಆದೊಂದು ಕರಾಳ ಮಂಗಳವಾರ ಮತ್ತು ಅಳಿಸಲಾಗದ ದುಃಸ್ವಪ್ನ!

ಎಟಿಎಂ ಕಿರಾತಕನ ಬೇಟೆಗಿಳಿದ ಪೊಲೀಸ್ ಕಮೀಷನರ್ ಔರಾದ್‌ಕರ್ ಪ್ರಾರಂಭದಲ್ಲಿ ನಾಲ್ಕು ತಂಡಗಳನ್ನು ರಚಿಸಿದರಾದರೂ ನಂತರದ ವಿದ್ಯಮಾನಗಳು ಬೇರೆಯದೇ ವಿಸ್ತಾರ ಪಡೆಯತೊಡಗಿದವು. ಹಾಗೆ ಎಟಿಎಂಗೆ ನುಗ್ಗಿ ಸಿಕ್ಕ ಮಹಿಳೆಯನ್ನು ಕತ್ತರಿಸಿದ್ದ ಆತ ಜ್ಯೋತಿ ಉದಯ್ ಧರಿಸಿದ್ದ ಚಿನ್ನಾಭರಣಗಳನ್ನು ಮುಟ್ಟಿರಲಿಲ್ಲ. ಬಹುಶಃ ಎಟಿಎಂಗಳಲ್ಲಿ ಸಿಸಿ ಟೀವಿಯ ಕ್ಯಾಮೆರಾಗಳಿರುತ್ತವೆ ಎಂಬ ಪರಿಜ್ಞಾನವೂ ಆತನಿಗಿದ್ದಂತಿಲ್ಲ, ಇದ್ದಿದ್ದರೆ ಮುಖಕ್ಕೆ ಮಾಸ್ಕ್ ಹಾಕಿಕೊಂಡಿರುತ್ತಿದ್ದ. ಕನ್ನಡದಲ್ಲೇ ಮಾತಾಡಿದ್ದ. ಅದೂ ಬೆಂಗಳೂರು ಪೋರ್ಕಿ ಕನ್ನಡ.

ಮೊದಲಿಗೆ ಈತ ಯಾರೋ ಬೆಂಗಳೂರು ತಮಿಳನಿರಬೇಕೆಂಬುದು ಪೊಲೀಸರ ಲೆಕ್ಕಾಚಾರವಾಗಿತ್ತು. ಆದರೆ ಪ್ರಶ್ನೆಯಾಗೆ ಉಳಿದದ್ದು ದರೋಡೆಯೇ ಆತನ ಉದ್ದೇಶವಾಗಿದ್ದರೆ ಜ್ಯೋತಿ ಧರಿಸಿದ್ದ ಚಿನ್ನಾಭರಣಗಳನ್ನಾತ ಏಕೆ ಬಿಟ್ಟು ಹೋಗುತ್ತಿದ್ದ?

ಅಲ್ಲಿಗೆ ಎಟಿಎಂ ದರೋಡೆಗಿಂತಲೂ ಇದು ಯಾವುದೋ ವೈಯಕ್ತಿಕ ಕಾರಣಕ್ಕಾದ ಹತ್ಯಾಯತ್ನವೆಂದೂ ಹಂತಕ ಉದ್ದೇಶಪೂರ್ವಕವಾಗಿ ಜ್ಯೋತಿಯವರನ್ನೇ ಬೆನ್ನತ್ತಿ ಬಂದಿದ್ದಾನೆಂದೂ ಆಕೆಯನ್ನ ಮುಗಿಸುವುದೊಂದೇ ಆತನ ಉದ್ದೇಶವಾಗಿದ್ದರಿಂದಲೇ ಧರಿಸಿದ್ದ ಆಭರಣಗಳನ್ನು ಬಿಟ್ಟು ಹೋಗಿದ್ದಾನೆಂದೂ ತೀರ್ಮಾನಕ್ಕೆ ಬಂದ ಪೊಲೀಸರಿಗೆ ಆಂಧ್ರದಿಂದ ಬಂದ ಮಾಹಿತಿಗಳು ಮತ್ತಷ್ಟು ಆಘಾತಕಾರಿಯಾಗಿದ್ದವು.

ಹಾಗೆ ಪಾಲಿಕೆ ಎದುರಿನ ಎಟಿಎಂನಿಂದ ಜ್ಯೋತಿಯವರ ಎಟಿಎಂ ಕಾರ್ಡು, ಮೊಬೈಲನ್ನು ಕಿತ್ತೊಯ್ದ ಹಂತಕ ಅದನ್ನು ಆಂಧ್ರದ ಹಿಂದೂಪುರದಲ್ಲಿ ಐನೂರು ರೂಪಾಯಿಗೆ ಮಾರಿದ್ದ. ಜ್ಯೋತಿಯ ಮೊಬೈಲ್ ಸಿಮ್ ಅನ್ನು ಟ್ರ್ಯಾಕ್ ಮಾಡಿದ ಪೊಲೀಸರಿಗೆ ಅದು ಆಂಧ್ರದ ಹಿಂದೂಪುರದ ರಹಮತ್‌ನಗರ ಎಂಬ ಏರಿಯಾದ ಮಾರ್ಡಿಲ್ ಸೆಲ್ ಪಾಯಿಂಟ್ ಎಂಬ ಸೆಕೆಂಡ್‌ಹ್ಯಾಂಡ್ ಮೊಬೈಲ್ ಅಂಗಡಿಯಲ್ಲಿ ಆಕ್ಟಿವೇಟ್ ಆಗಿದ್ದು ಗೊತ್ತಾಯಿತು. ರಾತ್ರೋರಾತ್ರಿ ಹಿಂದೂಪುರಕ್ಕೆ ಹೋದ ಬೆಂಗಳೂರು ಪೊಲೀಸ್ ತಂಡ ಮೊಬೈಲ್ ಮಳಿಗೆಯ ಮಾಲಿಕ ಅಬೂಜರ್ ಎಂಬಾತನನ್ನು ಬಂಧಿಸಿ ಬೆಂಗಳೂರಿಗೆ ತಂದಿತು.

ಅಬೂಜರ್ ತಾನು ಐನೂರು ರೂಪಾಯಿಗೆ ಸದರಿ ಮೊಬೈಲ್‌ನ್ನು ಖರೀದಿಸಿದ್ದೆಂದೂ ಯಾರೋ ಅನಾಮಿಕನೊಬ್ಬ ತನ್ನ ಅಂಗಡಿಗೆ ಬಂದು ಅದನ್ನು ಮಾರಿದನೆಂದೂ ಪೊಲೀಸರೆದುರು ಪೇಚಾಡುತ್ತಿದ್ದ. ಆದರೆ ಮೊಬೈಲ್ ಕೊಟ್ಟವನ ಚಹರೆಯನ್ನಾತ ಸ್ಪಷ್ಟವಾಗೇ ಗುರುತಿಸಿದ್ದ. ಕಗ್ಗೆ ವಿಕಾರವಾಗಿದ್ದ. ಬೆಂಗಳೂರಿನ ಎಟಿಎಂನ ಸಿಸಿ ಟೀವಿಯಲ್ಲಿದ್ದಂತೆ ಆದೇ ಬಟ್ಟೆಯನ್ನು ಧರಿಸಿದ್ದ. ಅಂದರೆ ಬೆಂಗಳೂರಿನಲ್ಲಿ ರಕ್ತ ಹರಿಸಿದ ಪಾತಕಿ ನೇರವಾಗಿ ಆಂಧ್ರದ ಹಿಂದೂಪುರಕ್ಕೆ ಬಂದಿದ್ದ. ಹಾಗೆ ಹಿಂದೂಪುರದಲ್ಲಿ ಕಿತ್ತೊಯ್ದ ಮೊಬೈಲ್ ಮಾರುವಾಗಲೂ ಆತನ ಬಳಿ ಮಚ್ಚು ಇಟ್ಟುಕೊಂಡಿದ್ದ ಆದೇ ಚೀಲವಿತ್ತು.

ಇದಿಷ್ಟೂ ಜ್ಯೋತಿಯ ಮೊಬೈಲ್ ಜಾಡು ಹಿಡಿದ ಬೆಂಗಳೂರು ಪೊಲೀಸರಿಗೆ ಸಿಕ್ಕ ಮಾಹಿತಿಯಾದರೆ ಆಂಧ್ರದ ಪೊಲೀಸರು ನೀಡಿದ ವಿವರಗಳು ಇನ್ನೂ ಭಯಾನಕವಾಗಿತ್ತು. ಕನಿಷ್ಠ ಬೆಂಗಳೂರಿನ ಜ್ಯೋತಿಯ ಪ್ರಾಣವಾದರೂ ಉಳಿದಿತ್ತು. ಆದರೆ ಆಂಧ್ರದ ಧರ್ಮಾವರಂನ ಪ್ರಮೀಳಮ್ಮ ಎಂಬಾಕೆಯ ದಾರುಣವೇ ಬೇರೆಯಿತ್ತು. ಆಕೆಯನ್ನು ಕಿರಾತಕ ಪ್ರಾಣಿ-ಪಶುಗಳಿಗಿಂತಲೂ ಹೀನಾಯವಾಗಿ ಕತ್ತರಿಸಿ ಕೊಂದಿದ್ದ.

ಅದು ನವೆಂಬರ್ 10ರ ರಕ್ತದೋಕುಳಿ: ಧರ್ಮಾವರಂನ ಚಂದ್ರಬಾಬುನಗರದ ಪ್ರಮೀಳಮ್ಮ ಮಾಮೂಲಿನಂತೆ ತಮ್ಮ ಮನೆ ಸಮೀಪದ ಎಟಿಎಂಗೆ ಹೋಗಿದ್ದಾರೆ. ದುಡ್ಡನ್ನೂ ಡ್ರಾ ಮಾಡಿದ್ದಾರೆ. ಅದು ರಾತ್ರಿ ಹೊತ್ತಿನ ಎಟಿಎಂ. ಏಕಾಏಕಿ ನುಗ್ಗಿ ಬಂದ ಕಿರಾತಕ ತನ್ನ ಚೀಲದಿಂದ ಮಚ್ಚೆತ್ತಿದ್ದೇ ಆಕೆಯ ಕುತ್ತಿಗೆಗೆ ಹಿಡಿದಿದ್ದಾನೆ. ಪ್ರಾಣಭೀತಿಗೆ ಪ್ರಮೀಳಮ್ಮ ತನ್ನ ಬಳಿಯಿದ್ದ ಎರಡೂ ಎಟಿಎಂ ಕಾ[...]ಗಳನ್ನು ಆತನ ಕೈಗಿತ್ತಿದ್ದಾರೆ. ಡ್ರಾ ಮಾಡಿದ್ದ ದುಡ್ಡು [...]ಕೊಂಡ ಪಟ್ಟೆ ಶರ್ಟಿನ ಹಂತಕ ಎರಡೂ ಕಾರ್ಡ್[...] ಪಿನ್ ನಂಬರ್ ನೀಡುವಂತೆ ಪೀಡಿಸಿದ್ದಾನೆ. ಪ್ರಾಣ ಉಳಿ[...] ಸಾಕೆಂದು ಎರಡೂ ಕಾರ್ಡುಗಳ ಪಾಸ್‌ವರ್ಡ್ ಬಾ[...] ಬಿಟ್ಟಿದ್ದಾರೆ ಪ್ರಮೀಳಮ್ಮ.

ಆ ನಂತರ ನಡೆದದ್ದು ಇನ್ನೂ ಭೀಭತ್ಸ. ಒಂದೊಂದ[...] ಎರಡೂ ಕಾರ್ಡುಗಳ ಪಾಸ್‌ವರ್ಡ್ ಪಡೆದ ಹ[...] ಮರುಕ್ಷಣದಲ್ಲೇ ಮಚ್ಚೆತ್ತಿಕೊಂಡು ಪ್ರಮೀಳಮ್ಮನನ್ನು ಕ[...] ಕತ್ತರಿಸಿದ್ದಾನೆ. ಕತ್ತರಿಸಿದ ಪೆಟ್ಟಿಗೆ ಸ್ಥಳದಲ್ಲೇ ಪ್ರಮೀಳ[...] ಮಾಂಸದ ಮುದ್ದೆಯಂತೆ ಹೆಣವಾಗಿದ್ದಾರೆ! ದುರ[...]ಯೆಂದರೆ ಆ ಎಟಿಎಂಗೆ ಸಿಸಿ ಟಿವಿಯಾಗಲಿ, ಕ್ಯಾಮೆ[...]ಗಳಾಗಲಿ ಇರಲೇ ಇಲ್ಲ.

ಇದು ನವೆಂಬರ್ 10ರ ಧರ್ಮಾವರಂ ದಾರುಣವಾ[...] ಅನಂತರ ಹಂತಕ ಕಾಲಿಟ್ಟದ್ದು ಆಂಧ್ರದ ಕದಿರಿ ಎ[...] ಊರಿಗೆ. ಅಲ್ಲಿ ಎಟಿಎಂ ಎದುರು ಸಾಲಿನಲ್ಲಿ ನಿಂತು ಒ[...] ಕಾರ್ಡಿನಿಂದ ನಾಲ್ಕು ಸಾವಿರ ರೂಪಾಯಿ ಡ್ರಾ ಮಾಡಿಕೊ[...] ಕಿರಾತಕನ ಚಿತ್ರ ಸ್ಪಷ್ಟವಾಗೇ ಸಿಸಿ ಟಿವಿ ಕ್ಯಾಮೆರಾ[...] ಸೆರೆಯಾಗಿತ್ತು. ಅದೇ ನೀಲಿ ಪಟ್ಟೆಯ ಶರ್ಟು, ಟೈಟ್ ಜ[...] ಪ್ಯಾಂಟು ಮತ್ತು ಕೈಯಲ್ಲಿ ಮಚ್ಚಿನ ಚೀಲ!

ಹಾಗೆ ಕದಿರಿಯಲ್ಲಿ ನವೆಂಬರ್ 11ರಂದು 4 ಸಾ[...] ಡ್ರಾ ಮಾಡಿಕೊಂಡ ಹಂತಕ ಆ ನಂತರ ಪ್ರತ್ಯಕ್ಷನಾ[...] ಬೆಂಗಳೂರಿನಲ್ಲಿ. ಬೆಂಗಳೂರಿಗೆ ಬಂದವನೇ ಇಲ್ಲಿನ ಸ್ಟೇ[...] ಬ್ಯಾಂಕ್ ಇಂಡಿಯಾದ ಎಟಿಎಂ ಒಂದರಲ್ಲಿ ಹದಿನೆ[...] ಸಾವಿರ ರೂಪಾಯಿಗಳನ್ನು ಡ್ರಾ ಮಾಡಿಕೊಂಡಿದ್ದಾನೆ. ಆ[...] ಈ ಎಟಿಎಂಗೂ ಸಿಸಿ ಟಿವಿಯಾಗಲಿ, ಕ್ಯಾಮೆರಾಗಳಾ[...] ಇರಲೇ ಇಲ್ಲ. ಕದಿರಿಯಿಂದ ಡ್ರಾ ಮಾಡಿದ ದು[...] ಮೆಸೇಜ್ ಅಲರ್ಟ್ ಪ್ರಮೀಳಮ್ಮನ ಮಗನ ಮೊಬೈ[...] ಬಂದಿತ್ತು. ಹಕೀಕತ್ತೇನೆಂದರೆ ಪ್ರಮೀಳಮ್ಮನವರ ಬಳಿ[...] ಎರಡೂ ಎಟಿಎಂ ಕಾರ್ಡುಗಳೂ ಅವರ ಮ[...] ಹೆಸರಿನಲ್ಲಿತ್ತು.

ಯಾವತ್ತು ಎರಡನೇ ಕಾರ್ಡು ಬೆಂಗಳೂರಿ[...] ಚಲಾವಣೆಯಾದ ಅಲರ್ಟ್ ಮೆಸೇಜು ಪ್ರಮೀಳ[...] ಮಗನ ಮೊಬೈಲಿಗೆ ಬಂತೋ ಆತ ತಕ್ಷಣವೇ ಬ್ಯಾ[...] ಕಸ್ಟಮರ್ ಕೇರ್‌ಗೆ ಮಾಹಿತಿ ಕೊಟ್ಟು ಕಾರ್ಡನ್ನು [...] ಮಾಡಿಸಿದ್ದಾನೆ. ಅಲ್ಲಿಗೆ ನಾಲ್ಕೇ ದಿನದಲ್ಲಿ ಹಂತಕ ಆಂ[...] ಧರ್ಮಾವರಂನಿಂದ ಕಾರ್ಡು ದೋಚಿ, ಹೆಣವನ್ನೂ ಬ[...] ಕದರಿಗೆ ಬಂದು ಅಲ್ಲಿ 4 ಸಾವಿರ ಡ್ರಾ ಮಾಡಿ[...] ನಂತರ ಬೆಂಗಳೂರಿಗೆ ಬಂದು 18 ಸಾವಿರ [...] ಮಾಡಿಕೊಂಡಿದ್ದ. ಅಂದರೆ ಒಟ್ಟು 22 ಸಾವಿರ.

ಬಹುಶಃ ನವೆಂಬರ್ 19ರ ಹೊತ್ತಿಗೆ ಈ ಇಪ್ಪತ್ತೆ[...] ಸಾವಿರ ರೂಪಾಯಿ ಖಾಲಿಯಾಗಿರಬೇಕು. ಕೈಲಿದ್ದ [...] ಖಾಲಿಯಾಗಿದ್ದೇ ತಡ ಯಾರ ಹೆಣ ಕೆಡವಿಯಾದ[...] ಆತನಿಗೆ ದುಡ್ಡು ಬೇಕು. ದುಡ್ಡು ಸಲೀಸಾಗಿ ಸಿಗುವ[...] ಎಟಿಎಂಗಳಲ್ಲಿ. ಅದೂ ನಿರ್ಜನ ಪ್ರದೇಶಗಳ ಅ[...] ಜನ ಓಡಾಡದ ಎಟಿಎಂಗಳೇ ಆತನಿಗೆ ಅಚ್ಚುವೆ[...] ಇದಕ್ಕೆ ಬಲಿಯಾದವರು ಕಾರ್ಪೊರೇಷನ್ ಬ್ಯಾಂಕ್ ಅಧಿ[...] ಜ್ಯೋತಿ ಉದಯ್.

ನಾಯಿಕೊಡೆಗಳಂತೆ. ಫುಟ್‌ಪಾತ್ ಬೊ[...] ಅಂಗಡಿಗಳಂತೆ ಕಂಡಕಂಡಲ್ಲಿ ಎಟಿಎಂ ಶಾಖೆಗಳನ್ನು ತೆ[...] ಲಾಭ ಮಾಡಲು ಹೊರಟ ಧನದಾಹಿ ಬ್ಯಾಂಕ್[...] ಅದಕ್ಕೊಂದು ಸೆಕ್ಯೂರಿಟಿ ಗಾರ್ಡ್ ನೇಮಿಸಿದರೆ ಅ[...] ನಷ್ಟದ ಬಾಬತ್ತೆಂದು ಪರಿಗಣಿಸುತ್ತವೆ. ಸಿಸಿ ಕ್ಯಾಮೆರಾಗಳನ್ನಿಟ್ಟರೆ ಅದು ಕೂಡ ನಷ್ಟದ ಲೆಕ್ಕವಾಗು[...] ಆದರೆ ಗಾರ್ಡೊಬ್ಬನ ಸಂಬಳ ಉಳಿಸಲು ಹೋಗಿ [...] ಬಂದ ಬ್ಯಾಂಕುಗಳೂ ಮಾಡಿದ್ದೇನು?

ಹೋದದ್ದು ಅಮಾಯಕ ಹೆಂಗಸರ ಪ್ರಾಣ [...]ಗಳಿಸಿದ್ದು ಭಯಾನಕ ಎಟಿಎಂ ಹಂತಕನ ಆಕ್ರಮ[...]

■ ರಾ.ಸೋಮನಾ[...]

ಕೊನೆಯ ಬಾರಿ ಕಂಡಿದ್ದು ಪೆನುಕೊಂಡದಲ್ಲಿ

ಆಂಧ್ರದ ಪೊಲೀಸರಷ್ಟೇ ಅಲ್ಲದೆ ರೈಲ್ವೇ ಪ್ರೊಟೆಕ್ಷನ್ ಫೋರ್ಸ್‌ನ ಕಮಾಂಡೆಂಟ್ ಸೇರಿದಂತೆ ಬೆಂಗಳೂರಿನ ಮೂವರು ಡಿಸಿಪಿಗಳು, ಹತ್ತು ಮಂದಿ ಇನ್ಸ್‌ಪೆಕ್ಟರ್‌ಗಳು, ನೂರಕ್ಕೂ ಅಧಿಕ ಪೊಲೀಸರು ಅಹೋರಾತ್ರಿ ನಿದ್ದೆಗೆಟ್ಟು ಹುಡುಕಾಡುತ್ತಿರುವ ಎಟಿಎಂ ಕಿರಾತಕ ಓರ್ವ ಸೈಕೋಪಾತ್ ಎಂಬುದಕ್ಕೆ ಸೀಸಿಟಿವಿ ದೃಶ್ಯಾವಳಿಗಳೇ ಸಾಕು.

ನವೆಂಬರ್ ಹತ್ತರಿಂದ 19 ರ ತನಕ ಆತ ದೋಚಿರುವುದು ಒಟ್ಟು 22 ಸಾವಿರ ರೂಪಾಯಿಗಳಷ್ಟಾದರೂ ತನಗೊಂದು ಜೊತೆ ಹೊಸ ಬಟ್ಟೆ ಖರೀದಿಸುವಷ್ಟು ಪರಿಜ್ಞಾನವಿಲ್ಲವೆಂದರೆ ಏನರ್ಥ. ಹಾಗಾದರೆ ದೋಚಿದ ದುಡ್ಡನ್ನು ಆತ ಏನು ಮಾಡಿದ ಮತ್ತು ಕಳೆದದ್ದೆಲ್ಲಿ?

ಯಾರಿಗೂ ಅರ್ಥವಾಗದ ಪ್ರಶ್ನೆಯಿದು. ಕುಡಿತದ ಚಟವೋ, ಜುಗಾರಿಯೋ, ವೇಶ್ಯಾಚಟವೋ ಏನೇ ಇದ್ದರೂ ಕನಿಷ್ಠ ಹಾಕಿದ ಬಟ್ಟೆಯನ್ನಾದರೂ ಬದಲಿಸಬೇಕಿತ್ತಲ್ಲವೆ? ಕೈಯಲ್ಲಿ ಹಳ್ಳಿಗರಂತೆ ಚೀಲ ಹಿಡಿದು ಮಚ್ಚು ಅಡಗಿಸಿಕೊಂಡಿದ್ದೂ ಹೈಟೆಕ್ ರೌಡಿಗಳಂತೆ ಪಿಸ್ತೂಲನ್ನೂ ಬಳಸುತ್ತಾನೆ. ಕತ್ತರಿಸಿದ ಹೆಂಗಸಿನ ಮೈಮೇಲಿದ್ದ ಆಭರಣವನ್ನೂ ಮರೆಯುತ್ತಾನೆ. ಒಂದೇ ಜಾಗದಲ್ಲಿ ನಿಲ್ಲದೆ ಊರೂರು ತಿರುಗುತ್ತಾನೆ. ಕಾರ್ಯಾಚರಣೆಯಲ್ಲಿ ಆತ ಒಬ್ಬಂಟಿ ಮತ್ತು ಹುಷಾರು. ಆಂಧ್ರ ಮತ್ತು ಕರ್ನಾಟಕದ ಎರಡೂ ಕಡೆ ಘಾತಕ ಎಸಗಬೇಕೆಂದರೆ ಕನ್ನಡ, ತೆಲುಗು ಎರಡೂ ಬಲ್ಲವನಾಗಿರಲೇಬೇಕು.

ಇಂಥ ಎಲ್ಲಾ ಸಾಧ್ಯತೆಗಳನ್ನು ಕರಾರುವಾಕ್ಕಾಗಿಯೇ ಲೆಕ್ಕ ಹಾಕಿದ ಅಲಸೂರು ಗೇಟ್ ಎಸಿಪಿ ಸಿದ್ರಾಮಯ್ಯ ಆಂಧ್ರದ ಧರ್ಮಾವರಂ ಸುತ್ತಮುತ್ತಲ ಊರುಗಳಲ್ಲಿ ಹೆಣಗಾಡಿದ ಫಲವಾಗಿ ಸಿಕ್ಕ ಒಂದೇ ಒಂದು ಕ್ಲೂ ಎಂದರೆ ಹಂತಕನ ಕೊನೆಯ ಜಾಡು ಪತ್ತೆಯಾಗಿರುವುದು ಆಂಧ್ರದ ಪೆನುಕೊಂಡದಲ್ಲಿ, ಧರ್ಮಾವರಂನಲ್ಲಿ ಹೆಣ ಕೆಡವಿ, ಬೆಂಗಳೂರಿಗೆ ಬಂದು ರಕ್ತ ಹರಿಸಿ, ತದನಂತರ ಹಿಂದೂಪುರದಲ್ಲಿ ಜ್ಯೋತಿಯ ಮೊಬೈಲ್ ಮಾರಿದ ಎಟಿಎಂ ಕಿರಾತಕನ ಚಹರೆ ಪೆನುಕೊಂಡದ ಯಾವುದೋ ಸೀಸಿ ಟೀವಿಯಲ್ಲಿ ದಾಖಲಾಗಿರಬೇಕು. ಧರ್ಮಾವರಂನಿಂದ ಬೆಂಗಳೂರಿಗೆ ಬರುವ ರೈಲೇ ಆತನ ಕಾರ್ಯಕ್ಷೇತ್ರವಾಗಿರಲಿಕ್ಕೂ ಸಾಕು.

ಮಂಡ್ಯ: ಅರುಣಕುಮಾರನ ನಕಲಿ ನೋಟ್ ಪೊಲೀಸರದ್ದೂ ನಕಲಿ ಶಾಟ್

ಆತನಿಗೆ ಕೋಟಿಗಟ್ಟಲೆ ಹಣ-ಆಸ್ತಿ ಇತ್ತು, ಬಾರ್, ಮನೆ, ಬಿಲ್ಡಿಂಗ್ ಬಾಡಿಗೆ ಎಂದೆಲ್ಲಾ ಸಾಕಷ್ಟು ಹಣ ಪ್ರತಿ ತಿಂಗಳು ಆತನ ತಿಜೋರಿ ಸೇರುತ್ತಿತ್ತು, ಕೋಟಿಗಟ್ಟಲೆ ಹಣವನ್ನು ಬಡ್ಡಿಗೆ ಬಿಟ್ಟಿದ್ದರಿಂದ ಅಲ್ಲೂ ಲಕ್ಷಾಂತರ ಹಣ ಬರುತ್ತಿತ್ತು, ರಾಜಕಾರಣದಲ್ಲಿ ಪಳಗಿದ್ದ ಈತ ಅಲ್ಲೂ ಸಾಕಷ್ಟು ಹಣ ಮಾಡಿದ್ದ. ಇಷ್ಟೆಲ್ಲಾ ಇದ್ದರೂ ದುರಾಸೆ ಮಾತ್ರ ಆತನ ಹುಟ್ಟಿನಿಂದಲೇ ಬಂದಿತ್ತು, ಹಣ ಮಾಡುವ ತನ್ನ ದುರಾಸೆಯನ್ನು ಖೋಟಾನೋಟಿನ ಜಾಲಕ್ಕೂ ವಿಸ್ತರಿಸಲು ಹೋಗಿ ರೆಡ್‌ಹ್ಯಾಂಡ್ ಆಗಿ ಮಂಡ್ಯ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಖೋಟಾನೋಟು ಎಣಿಸಲು ಹೋಗಿ ಕಂಬಿ ಎಣಿಸುತ್ತಿರುವುದು ಬೇರ್‍ಯಾರೂ ಅಲ್ಲ ಮಂಡ್ಯ ನಗರಸಭೆಯ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಎಂ.ಪಿ. ಅರುಣ್‌ಕುಮಾರ್.

ಜಿಲ್ಲೆಯಲ್ಲಿ ಖೋಟಾನೋಟಿನ ಡಬ್ಲಿಂಗ್ ದಂಧೆ ನಡೆಯುತ್ತಿದೆ ಎಂಬ ಬಗ್ಗೆ ಕಳೆದೊಂದು ತಿಂಗಳ ಹಿಂದೆಯೇ ಶ್ರೀರಂಗಪಟ್ಟಣದ ಪೊಲೀಸರಿಗೆ ಸುಳಿವು ಸಿಕ್ಕಿತ್ತು, ಅದರಂತೆ ನವೆಂಬರ್ 25ರಂದು ರಾತ್ರಿ 7ಗಂಟೆ ಸುಮಾರಿಗೆ ಶ್ರೀರಂಗಪಟ್ಟಣ ಸಚಿನ್ ಲಾಡ್ಜ್‌ನಲ್ಲಿ ಖೋಟಾನೋಟಿನ ಡಬ್ಲಿಂಗ್ ದಂಧೆಕೋರರು ಇದ್ದಾರೆಂಬ ಖಚಿತ ಸುಳಿವು ಡಿವೈಎಸ್ಪಿ ಗೀತಾಪ್ರಸನ್ನ, ಸಿಪಿಐ ಜಯಕುಮಾರ್ ಹಾಗೂ ಪಿಎಸ್‌ಐ ಅಜರುದ್ದೀನ್‌ರವರಿಗೆ ಸಿಕ್ಕಿತ್ತು, ಅದರಂತೆ ಸಚಿನ್ ಲಾಡ್ಜ್‌ಗೆ ದಾಳಿಯಿಟ್ಟ ಪೊಲೀಸರಿಗೆ ಮಂಡ್ಯ ನಗರಸಭೆಯ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಎಂ.ಪಿ.ಅರುಣ್‌ಕುಮಾರ್ ಸೇರಿದಂತೆ ಪಾಂಡವಪುರ ತಾಲ್ಲೂಕಿನ ಅಂಕೇಗೌಡನ ಕೊಪ್ಪಲುವಿನ ಶಿವರಾಮು, ಶ್ರೀರಂಗಪಟ್ಟಣದ ಗಂಜಾಂನ ಮಂಜುನಾಥ್, ಮಂಡ್ಯದ ಗಾಂಧಿನಗರದ ಜೀತನ್‌ಕುಮಾರ್ ಹಾಗೂ ಶ್ರೀರಂಗಪಟ್ಟಣದ ರಮೇಶ್ ಎಂಬಾತ ತಗಲಾಕಿಕೊಂಡಿದ್ದಾರೆ. ಪೊಲೀಸರನ್ನು ಕಂಡಕೂಡಲೇ ಇಮ್ತಿಯಾಜ್ ಎಂಬಾತ ಪರಾರಿಯಾಗಿದ್ದಾನೆ. ಈ ಇಮ್ತಿಯಾಜ್ ಎಂಬಾತನೇ ಖೋಟಾನೋಟಿನ ಜಾಲದ ಪ್ರಮುಖ ರೂವಾರಿಯಾಗಿದ್ದು, ಪೊಲೀಸರು ಈತನ ಪತ್ತೆಗೆ ಬಲೆ ಬೀಸಿದ್ದಾರೆ.




ಖೋಟಾನೋಟು ಖದೀಮರೊಂದಿಗೆ ನಗರಸಭಾ ಸದಸ್ಯ ಅರುಣ್‌ಕುಮಾರ್

ಹಳ್ಳ ಹಿಡಿಸಿದ ಪೊಲೀಸರು

ದಾಳಿಯ ಸಂದರ್ಭದಲ್ಲಿ 25 ಲಕ್ಷ ನಗದು ಹಣ, ಐದು ಮೊಬೈಲ್, 2 ಕಾರು ಹಾಗೂ ಒಂದು .22 ರಿವಾಲ್ವರ್ ಸಿಕ್ಕಿದೆ. ಈ ರಿವಾಲ್ವರ್ ಅರುಣ್‌ಕುಮಾರ್‌ಗೆ ಸೇರಿದ್ದು, ಖೋಟಾನೋಟಿನ ವ್ಯವಹಾರದಲ್ಲಿ ಯಾರನ್ನು ನಂಬುವ ಸ್ಥಿತಿಯಲ್ಲಿರದ ಅರುಣ್‌ಕುಮಾರ ಅಂದು ರಿವಾಲ್ವರ್ ಜೊತೆಗೆ ಬಂದಿದ್ದ. ಇನ್ನೇನು ವ್ಯವಹಾರ ಮುಗಿಯಬೇಕು ಅಷ್ಟರಲ್ಲಿಯೇ ದಾಳಿ ನಡೆಸಿದ್ದರಿಂದ ಅರುಣ್‌ಕುಮಾರನ ಇಡೀ ಟೀಮೇ ಅರೆಸ್ಟಾಗಿದೆ. ಖೋಟಾನೋಟು ತರುವ ಗ್ಯಾಂಗ್ ತಪ್ಪಿಸಿಕೊಂಡಿದೆ ಎಂದು ಮಂಡ್ಯದ ಎಸ್ಪಿ ಭೂಷಣ್ ಜಿ.ಬೊರಸೆಯವರು ಕಥೆ ಹೇಳುತ್ತಾರೆ. ಈ ಪ್ರಕರಣದ ಹಿನ್ನೆಲೆಯಲ್ಲಿ ಖೋಟಾನೋಟಿನ ಜಾಲವಿದೆ ಎಂಬ ಬಗ್ಗೆ ಜನರೇ ರಾಜಾರೋಷವಾಗಿ ಹೇಳುತ್ತಿರುವಾಗ ಮಂಡ್ಯ ಪೊಲೀಸರು ಮಾತ್ರ ಚಂದ ಮಾಮನ ಕಥೆ ಹೇಳುತ್ತಾ ಡಬ್ಲಿಂಗ್ ಪ್ರಕರಣವನ್ನು ಹಳ್ಳ ಹಿಡಿಸಿದ್ದಾರೆ. ಆದರೆ ಇಡೀ ಪ್ರಕರಣದ ಅಸಲಿಯತ್ತೇ ಬೇರೆ ಇದೆ.

ಮಂಡ್ಯದ ಪೊಲೀಸರು ಚಂದಮಾಮ ಕಥೆ ಹೇಳುವುದನ್ನು ಬಿಟ್ಟು ಸರಿಯಾದ್ದೊಂದು ಕಾರ್ಯಾಚರಣೆ ನಡೆಸಿದ್ದರೆ ದೇಶದ ಆರ್ಥಿಕತೆಯನ್ನು ದುಷ್ಪಟ್ಟುಗೊಳಿಸುವ ಡಬ್ಲಿಂಗ್ ದಂಧೆಯಲ್ಲಿದ್ದ ಪ್ರಮುಖರು ತಗಲಾಕಿಕೊಳ್ಳುತ್ತಿದ್ದರು. ಇಡೀ ಪ್ರಕರಣದಲ್ಲಿ ಅರುಣ್‌ಕುಮಾರನೇ ಪ್ರಮುಖ ವ್ಯಕ್ತಿಯಾಗಿದ್ದು ಆತನ ವಿಚಾರಣೆ ನಡೆಸಿದ್ದರೆ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಡಬ್ಲಿಂಗ್ ದಂಧೆಯ ಕರಾಳ ಚರಿತ್ರೆಯೇ ಬಯಲಾಗುತ್ತಿತ್ತು. ಆದರೆ ಮಂಡ್ಯದ ಎಸ್ಪಿ ಮೇಲೆ ಅದ್ಯಾವ ಒತ್ತಡ ಬಂತೋ ಏನೋ ತಿಳಿಯಲಿಲ್ಲ, ಅದಾದನಂತರ ಕೆಲಸಕ್ಕೆ ಬಾರದ ಕೇಸು ಹಾಕಿ ಅರುಣ್‌ಕುಮಾರನನ್ನು ಜೈಲಿಗೆ ಬಿಟ್ಟು ಬಂದಿದ್ದಾರೆಂಬ ಬಗ್ಗೆ ಜನರೇ ಬಹಿರಂಗವಾಗಿ ಮಾತನಾಡುತ್ತಿದ್ದಾರೆ. ಪಕ್ಷೇತರ ಸದಸ್ಯ ಅರುಣ್‌ಕುಮಾರ್ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿರುವುದರಿಂದ ಕಾಂಗ್ರೆಸ್ ಪಕ್ಷದ ಪ್ರಭಾವಿಗಳು ಸಾಕಷ್ಟು ಒತ್ತಡ ತಂದಿದ್ದಾರೆಂಬ ಮಾತುಗಳು ಈಗ ಎಲ್ಲೆಡೆ ಕೇಳಿಬರುತ್ತಿದೆ. ಈಗಲಾದರೂ ಮಂಡ್ಯ ಎಸ್ಪಿ ಭೂಷಣ್ ಜಿ. ಬೊರಸೆ ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಸಿದರೆ ಮಂಡ್ಯದಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಡಬ್ಲಿಂಗ್ ದಂಧೆಯ ಮೇಲೆ ಮುರಕೊಂಡು ಬೀಳಬಹುದು. ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ದಾಳಿಮಾಡಲು ಪಾಕ್ ಖೋಟಾನೋಟಿನ ಚಲಾವಣೆಯಲ್ಲಿ ತೊಡಗಿದೆ ಎಂದು ಬಾಯಿಬಡಿದುಕೊಳ್ಳುವ ಪೊಲೀಸ್ ಇಲಾಖೆಯೇ ಈ ದಂಧೆಯಲ್ಲಿರುವ ಸ್ಥಳೀಯ ಬಲಾಢ್ಯ ವ್ಯಕ್ತಿಗಳನ್ನು ರಕ್ಷಿಸಲು ಹೊರಟಿರುವುದು 5-10ಲಕ್ಷ ಕದ್ದ ಕಳ್ಳರನ್ನೇ ಪತ್ರಿಕಾಗೋಷ್ಠಿ ಮಾಡಿ ತಿಳಿಸುವ ಎಸ್ಪಿ ಬೊರಸೆ ಅರುಣ್‌ಕುಮಾರ್ ವಿಚಾರದಲ್ಲಿ ಏಕೆ ಹಾಗೆ ಮಾಡದೆ ತಮ್ಮ ಬ್ಲಾಗ್‌ನಲ್ಲಿ ಒಂದಷ್ಟು ಮಾಹಿತಿ ಕೊಟ್ಟು ತೆಪ್ಪಗಾಗಿದ್ದಾರೆ. ಜನರ, ಮಾಧ್ಯಮದವರ ಪ್ರಶ್ನೆಗಳಿಗೆ ಹೆದರಿಯೇ ಮಂಡ್ಯ ಎಸ್ಪಿ ಈ ರೀತಿ ಮಾಡಿದ್ದಾರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.



25ಲಕ್ಷ ಹಣ– ನೋಟು ಎಣಿಸುವ ಯಂತ್ರ

ಹಿಂದೆಯೂ ನಡೆದಿತ್ತು

ಕಳೆದ ಜೂನ್ 18ರಂದು ಕೆ.ಆರ್.ಪೇಟೆಯಲ್ಲಿ ಮುರುಕನಹಳ್ಳಿ ಫಾರ್ಮ್‌ಹೌಸ್‌ನಲ್ಲಿ ನಡೆದ ಸಂಪತ್ ಕೃಷ್ಣ ಎಂಬಾತನ ಕಿಡ್ನಾಪ್ ಹಿಂದೆಯೂ ಡಬ್ಲಿಂಗ್ ದಂಧೆಯ ಕರಾಳ ಇತಿಹಾಸವಿತ್ತು, ಗೋಪಾಲಕೃಷ್ಣ ಅವಧಾನಿ ಎಂಬಾತ ಬೆಂಗಳೂರಿನ ಸಾರಕ್ಕಿಯ ರಂಗನಾಥ ಎಂಬಾತನಿಂದ 50 ಲಕ್ಷಕ್ಕೂ ಹೆಚ್ಚು ಹಣವನ್ನು ಪಡೆದು ದ್ವಿಗುಣ ಮಾಡಿಕೊಡುವುದಾಗಿ ಹೇಳಿ ವಂಚಿಸಿದ್ದ, ಇದರಿಂದ ಕೆರಳಿದ ಸಾರಕ್ಕಿ ರಂಗನಾಥ ಮಂಡ್ಯದ ಪತ್ರಕರ್ತ ಯೋಗೇಶನನ್ನು ಜೊತೆಗಾಕಿಕೊಂಡು ಗೋಪಾಲ ಕೃಷ್ಣ ಅವಧಾನಿ ಸಿಗದ ಕಾರಣ ಆತನ ಅಣ್ಣ ಸಂಪತ್ ಕೃಷ್ಣನನ್ನು ಕರೆದೊಯ್ದು ತಮ್ಮ ಗೋಪಾಲ ಕೃಷ್ಣನ ಬಗ್ಗೆ ಬಾಯಿ ಬಿಡಿಸಲು ನೋಡಿದ್ದಾರೆ. ಆದರೆ ಆತ ಏನೂ ಹೇಳಲಿಲ್ಲ, ಅಪಹರಣ ಎಂದು ಪೊಲೀಸ್ ಕಂಪ್ಲೇಂಟ್ ಆದ ಕೂಡಲೇ ಆತನನ್ನು ಮತ್ತೆ ಕೆ.ಆರ್.ಪೇಟೆಗೆ ಬಿಟ್ಟು ಹೋಗಿದ್ದರು. ಗೋಪಾಲಕೃಷ್ಣ ಅವಧಾನಿ ಪ್ರಭಾವಿ ಜ್ಯೋತಿಷಿಯಾದ್ದರಿಂದ ಕೆ.ಆರ್.ಪೇಟೆ ಪೊಲೀಸರು ಸಾರಕ್ಕಿ ರಂಗನಾಥ್ ಮೇಲೆ ಅಪಹರಣ ಪ್ರಕರಣವಷ್ಟೇ ದಾಖಲಿಸಿ ಖೋಟಾ ನೋಟಿನ ಡಬ್ಲಿಂಗ್ ದಂಧೆಯ ಬಗ್ಗೆ ತನಿಖೆ ಮುಂದುವರಿಸದೆ ಸಗಣಿ ಸಾರಿಸಿದ್ದರು.

ಪೊಲೀಸರ ಸುತ್ತ ಅನುಮಾನದ ಹುತ್ತ!

ಈಗ ನೋಡಿದರೆ ಶ್ರೀರಂಗಪಟ್ಟಣದ ಡಬ್ಲಿಂಗ್ ದಂಧೆಯಲ್ಲೂ ಪೊಲೀಸರು ಸರಿಯಾದ ನಿಟ್ಟಿನಲ್ಲಿ ತನಿಖೆಯನ್ನೇ ಮಾಡದೆ ತಿಪ್ಪೆ ಸಾರಿಸಿಬಿಟ್ಟಿದ್ದಾರೆಂಬ ಸಾರ್ವಜನಿಕರ ವ್ಯಾಪಕ ಟೀಕೆಯಿಂದಾದರೂ ಎಸ್ಪಿ ಭೂಷಣ್ ಜಿ. ಬೊರಸೆ ಎಚ್ಚೆತ್ತುಕೊಂಡು ಸೂಕ್ತ ತನಿಖೆಗೆ ಆದೇಶಿಸಬೇಕಿದೆ.

ಈ ಪ್ರಕರಣದಲ್ಲಿ ಪೊಲೀಸರು ವಶಪಡಿಸಿಕೊಂಡಿರುವ ನೋಟು ಎಣಿಸುವ ಯಂತ್ರ, ರಿವಾಲ್ವರ್, ಖೋಟಾನೋಟು ಪತ್ತೆ ಮಾಡುವ ಯಂತ್ರ ಇವೆಲ್ಲವನ್ನು ನೋಡಿದರೆ ಯಾರಿಗಾದರೂ ಇದೊಂದು ಖೋಟಾನೋಟು ಜಾಲ ಎಂಬ ಸಂಗತಿ ಗೊತ್ತಾಗುತ್ತದೆ. ಆದರೆ ಪೊಲೀಸರು ಮಾತ್ರ ಇದರ ಸುತ್ತ ಸರಿಯಾದ ತನಿಖೆಯನ್ನೇ ಮಾಡಿಲ್ಲ, ಅವರಿಗೆ ಈ ಪ್ರಕರಣವನ್ನು ಡಮ್ಮಿ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿರುವುದರಿಂದ ಅವರು ಆರೋಪಿಗಳನ್ನು ಮತ್ತಷ್ಟು ತನಿಖೆಯ ನಿಟ್ಟಿನಲ್ಲಿ ತಮ್ಮ ವಶಕ್ಕೆ ಕೊಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿಲ್ಲದಿರುವುದು ಪೊಲೀಸರತ್ತ ಅನುಮಾನ ಮೂಡಿಸಿದೆ.

ದಾಳಿಯ ಸಂದರ್ಭದಲ್ಲಿ ಒಂದು ಕೋಟಿಗೂ ಹೆಚ್ಚು ಹಣ ಪೊಲೀಸರ ಕೈಗೆ ಸಿಕ್ಕಿದೆ ಎಂಬುದು ದಟ್ಟವಾಗಿ ಕೇಳಿಬಂದಿತ್ತು, ಆದರೆ 25 ಲಕ್ಷ ಮಾತ್ರ ಅಸಲಿ ಹಣ ಸಿಕ್ಕಿರುವುದಾಗಿ ಪೊಲೀಸರು ಹೇಳುತ್ತಿರುವ ಕಥೆ ಚಂದ ಮಾಮನ ಕಥೆಯಂತಿದೆ. ಅಲ್ಲಿ 1000 ರೂ. 20 ಕಟ್ಟುಗಳು, 500 ರೂ. 10 ಕಟ್ಟುಗಳು ಸೇರಿದಂತೆ 30 ಕಟ್ಟುಗಳು ಮಾತ್ರ ಇದ್ದವು. ಇದನ್ನು ಎಣಿಸಲು ನೋಟಿನ ಯಂತ್ರ ಏಕೆ ಬೇಕಿತ್ತು? ಐದು ಮಂದಿಯೇ ಸಾಕಿತ್ತು ಅಲ್ಲವೇ?

ಇನ್ನು ಖೋಟಾನೋಟು ಪತ್ತೆ ಮಾಡುವ ಯಂತ್ರ ಏಕೆ ತೆಗೆದುಕೊಂಡು ಹೋಗಿದ್ದರು ಎಂಬುದನ್ನು ನೋಡುವುದಾದರೆ, ಅರುಣ್‌ಕುಮಾರ್ ಖೋಟಾನೋಟನ್ನು ಪಡೆಯಲು ದೊಡ್ಡ ಮೊತ್ತವನ್ನ ತೆಗೆದುಕೊಂಡು ಹೋಗಿದ್ದಾನೆ. ಡಬ್ಲಿಂಗ್ ದಂಧೆಯಲ್ಲಿ ಯಾರೂ ಯಾರನ್ನೂ ನಂಬಲು ಆಗುವುದಿಲ್ಲ ನೋಡಿ ಅದಕ್ಕಾಗಿ ನೋಟುಗಳು ಅಸಲಿಯೇ ಇಲ್ಲಾ ನಕಲಿಯೇ ಎಂಬುದನ್ನು ಪರೀಕ್ಷಿಸಲು ಈ ಯಂತ್ರ ತೆಗೆದುಕೊಂಡು ಹೋಗಲಾಗಿತ್ತಲ್ಲವೇ? ಅಲ್ಲದೆ ಈ ಯಂತ್ರಗಳನ್ನು ಅರುಣ್‌ಕುಮಾರ್ ತೆಗೆದುಕೊಂಡು ಹೋಗಿದ್ದನೆ ಅಥವಾ ಡಬ್ಲಿಂಗ್ ದಂಧೆಕೋರರು ತಂದಿದ್ದರೆ ಎಂಬ ಬಗ್ಗೆ ಪೊಲೀಸರು ತುಟಿಬಿಚ್ಚಿಲ್ಲ.

ನೋಟು ಎಣಿಸುವ ಯಂತ್ರವನ್ನು ಖೋಟಾನೋಟು ಪಡೆಯಲು ಹೋದ ಅರುಣ್‌ಕುಮಾರ್ ತೆಗೆದುಕೊಂಡು ಹೋಗಿದ್ದ. ಅರುಣ್‌ಕುಮಾರ್ ತಂದಿರುವ ನೋಟುಗಳು ಅಸಲಿಯೇ ಎಂದು ಪರೀಕ್ಷಿಸಲು ಡಬ್ಲಿಂಗ್ ದಂಧೆಕೋರರು ಖೋಟಾನೋಟು ಪತ್ತೆ ಮಾಡುವ ಯಂತ್ರವನ್ನು ತಂದಿದ್ದರೆಂಬ ಮಾತುಗಳು ವ್ಯಾಪಕವಾಗಿದೆ.

ಅರುಣ್‌ಕುಮಾರ 5ನೇ ಆರೋಪಿ


ಅರುಣ್‌ಕುಮಾರ್‌ನೇ 25 ಲಕ್ಷ ಹಣ ನನ್ನದೇ ಎಂದು ಹೇಳಿಕೆ ನೀಡಿದ್ದಾನೆ. ಇಡೀ ಪ್ರಕರಣದಲ್ಲಿ ಈತನೇ ಮುಖ್ಯ ಪಾತ್ರ ವಹಿಸಿದ್ದಾನೆ. ಹೀಗಿದ್ದರೂ ಈತನನ್ನು 5ನೇ ಆರೋಪಿಯನ್ನಾಗಿ ಮಾಡಲಾಗಿದೆ. ಕಾರಿನ ಡ್ರೈವರ್‌ಗಳನ್ನೇ ಮೊದಲನೇ ಮತ್ತು ಎರಡನೇ ಆರೋಪಿಗಳನ್ನಾಗಿ ಮಾಡಲಾಗಿದೆ. 25 ಲಕ್ಷ ಹಣ ತೆಗೆದುಕೊಂಡು ಹೋದ ಅರುಣ್‌ಕುಮಾರ್ ಮೊದಲ ಆರೋಪಿ ಯಾಗಬೇಕಿತ್ತಲ್ಲವೇ? ಆದರೆ ಪೊಲೀಸರು ಅದೇನು ತಿಂದರೋ ಅರುಣ್ ಕುಮಾರ್‌ನನ್ನು 5ನೇ ಆರೋಪಿಯನ್ನಾಗಿ ಮಾಡಿ ಕೈತೊಳೆದುಕೊಂಡಿದ್ದಾರೆ.

ಇಡೀ ಪ್ರಕರಣದಲ್ಲಿ ಪೊಲೀಸರ ನಡೆ ಸಂಶಯಕ್ಕೆಡೆಮಾಡಿದೆ. 5-10 ಲಕ್ಷ ಕದ್ದ ಕಳ್ಳರನ್ನು ಹಿಡಿದು ಪತ್ರಿಕಾಗೋಷ್ಠಿ ನಡೆಸುವ ಎಸ್ಪಿ ಬೊರಸೆಯವರು ಈ ಪ್ರಕರಣದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹೇಳುತ್ತೇನೆಂದು ಹೇಳಿದವರು ತಮ್ಮ ಬ್ಲಾಗ್‌ನಲ್ಲಿ ಮಾತ್ರ ಹಾಕಿದ್ದಾರೆ. ಪತ್ರಕರ್ತರ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಎಸ್ಪಿ ಈ ರೀತಿ ಮಾಡಿದ್ದಾರೆ.

ಇನ್ನು ಅರುಣ್‌ಕುಮಾರ್ ಈ ಹಣವನ್ನು ರಿಯಲ್ ಎಸ್ಟೇಟ್ ಮೂಲಕ ಇಮ್ತಿಯಾಜ್ ಎಂಬಾತ ಜಮೀನು ತೋರಿಸುತ್ತೇನೆಂದು ಹೇಳಿದ್ದ ಹಿನ್ನೆಲೆಯಲ್ಲಿ ತೆಗೆದುಕೊಂಡು ಬಂದಿದ್ದಾಗಿ ಪೊಲೀಸರ ಮುಂದೆ ಹೇಳಿದ್ದಾನೆ. ಅಷ್ಟು ರಾತ್ರಿಯಲ್ಲಿ ಜಮೀನು ನೋಡಲು ಹೇಗೆ ಸಾಧ್ಯ? ಸಚಿನ್ ಲಾಡ್ಜ್‌ನಲ್ಲಿ ತಂಗಿದ್ದೇಕೆ? ಖೋಟಾನೋಟು ದಂಧೆಯಲ್ಲಿ ಇಲ್ಲದಿದ್ದರೆ ರಿಯಲ್ ಎಸ್ಟೇಟ್ ಇಮ್ತಿಯಾಜ್ ಏಕೆ ಪರಾರಿ ಯಾಗುತ್ತಿದ್ದ ಎಂಬ ಪ್ರಶ್ನೆಗಳಿಗೆ ಪೊಲೀಸರು ಬಾಯಿಬಿಡದೆ ಮೌನವಾಗಿರುವುದರ ಹಿಂದೆ ಇರುವ ರಹಸ್ಯ ತಿಳಿದು ಜನ ಪೊಲೀಸರನ್ನು ಬಾಯಿಗೆ ಬಂದಂತೆ ಬಯ್ಯುತ್ತಿದ್ದಾರೆ.

■ ನಾಗೇಶ್

ಯಾರಿವನು ಎಂ.ಪಿ.ಅರುಣ್‌ಕುಮಾರ್



ಮಂಡ್ಯದ ವಿದ್ಯಾನಗರದ ನಿವಾಸಿಯಾದ ಎಂ.ಪಿ.ಅರುಣ್‌ಕುಮಾರ್ ಮಂಡ್ಯ ನಗರಸಭೆಯ ಹಾಲಿ ಸದಸ್ಯ, ಈಡಿಗ ಜನಾಂಗದ ಪುಟ್ಟಸ್ವಾಮಿ ಎಂಬಾತನ ಮಗನಾದ ಅರುಣ್‌ಕುಮಾರ್ ಮಂಡ್ಯ ನಗರಸಭೆಯ 11ನೇ ವಾರ್ಡ್‌ನಿಂದ 2ನೇ ಬಾರಿಗೆ ಪುನರಾಯ್ಕೆಯಾಗಿದ್ದಾನೆ. ಮಂಡ್ಯ ನಗರಸಭೆಗೆ 20 ವರ್ಷಗಳ ಕಾಲ ಮಾಜಿ ಸಚಿವ ಆತ್ಮಾನಂದರ ಚಿಕ್ಕಪ್ಪ ಎಂ.ಕೆ.ರಾಮಲಿಂಗೇಗೌಡ ಅಧ್ಯಕ್ಷನಾಗಿದ್ದ ಸಮಯದಲ್ಲಿ ಅವರ ಆಪ್ತರಾದ ಅರುಣ್‌ಕುಮಾರ್ ತಂದೆ ಪುಟ್ಟಸ್ವಾಮಿ ಅವರ ಸಹಕಾರದಿಂದ ಮಂಡ್ಯದ ಹಲವೆಡೆ ಆ ಕಾಲದಲ್ಲೇ ಸೈಟು ಮಾಡಿಕೊಂಡಿದ್ದರು. ಮಂಡ್ಯದ ಪೇಟೆ ಬೀದಿಯಲ್ಲಿ ಮಹೇಶ್ ಬಾರ್ ಹಾಗೂ ನಗರಸಭೆ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ತನ್ನ ದಬ್ಬಾಳಿಕೆಯಿಂದ ಸಾರ್ವಜನಿಕರ ತೀವ್ರ ವಿರೋಧವಿದ್ದರೂ ನಿವೇಶನ ಉದಯಗಿರಿಯಲ್ಲಿ ತೆರೆದ ಸೂರ್ಯ ಬಾರ್ ಅರುಣ್‌ಕುಮಾರ್‌ಗೆ ಸೇರಿದೆ. ಇನ್ನು ವಿ.ವಿ.ರಸ್ತೆಯಲ್ಲಿ ಬಾಡಿಗೆ ಕೊಡುವ ಬಿಲ್ಡಿಂಗ್ ಇದೆ. ಸರ್ಕಾರಿ ಮಹಾವಿದ್ಯಾಲಯದ ಆವರಣಕ್ಕೆ ಹೊಂದಿಕೊಂಡಿರುವ ನಿವೇಶನ ಹಾಗೂ [illegible] ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವ ನಿವೇಶನ ದೊಡ್ಡ ವಿವಾದವಾಗಿದೆ.

ಜೆಡಿಎಸ್ ನಾಯಕರಿಗೆ ಸೆಡ್ಡು

2008ರಲ್ಲಿ ಜೆಡಿಎಸ್ ಶಾಸಕರಾಗಿದ್ದ ಎಂ.ಶ್ರೀನಿವಾಸ್‌ರವರು ತನ್ನ ಆಪ್ತವಲಯದಲ್ಲಿದ್ದ ಅರುಣ್‌ಕುಮಾರನಿಗೆ ನಗರಸಭೆ ಚುನಾವಣೆಯಲ್ಲಿ 11ನೇ ವಾರ್ಡ್‌ನಿಂದ ಜೆಡಿಎಸ್ ಟಿಕೆಟ್ ನೀಡಿ ಗೆಲ್ಲಿಸಿಕೊಂಡಿದ್ದರು. ನಗರಸಭೆಯ 2ನೇ ಅವಧಿಯ ಅಧ್ಯಕ್ಷ ಸ್ಥಾನ ಹಿಂದುಳಿದ ವರ್ಗಕ್ಕೆ ಮೀಸಲಾಗಿದ್ದರಿಂದ ಅರುಣ್‌ಕುಮಾರ್ ಅಧ್ಯಕ್ಷಸ್ಥಾನಕ್ಕೇರಿ ಬಿಟ್ಟ. ಎರಡೂವರೆ ವರ್ಷಗಳ ಅಧ್ಯಕ್ಷ ಅವಧಿಯನ್ನು ತಲಾ 15 ತಿಂಗಳಂತೆ ಅರುಣ್‌ಕುಮಾರ್ ಹಾಗೂ ಪದ್ಮಾವತಿಗೆ ಎಂದು ನಿಗದಿಮಾಡಿದ್ದ ಜೆಡಿಎಸ್ ನಾಯಕರಾದ ಎಂ.ಶ್ರೀನಿವಾಸ್, ಚಲುವರಾಯಸ್ವಾಮಿ ಮಾತಿಗೆ ಕ್ಯಾರೇ ಎನ್ನದ ಅರುಣ್‌ಕುಮಾರ ಭರ್ತಿ ಎರಡೂವರೆ ವರ್ಷ ಅಧಿಕಾರದ ರುಚಿ ಸವಿದ. ಜೆಡಿಎಸ್ ವರಿಷ್ಠರಾದ ದೇವೇಗೌಡ, ಕುಮಾರಸ್ವಾಮಿ ಆದೇಶವನ್ನು ಧಿಕ್ಕರಿಸಿದ ಅರುಣ್‌ಕುಮಾರ್ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಎಲ್ಲದಕ್ಕೂ ಪರ್ಸೆಂಟೇಜ್ ಫಿಕ್ಸ್ ಮಾಡಿ ಭರ್ಜರಿಯಾಗಿಯೇ ಹಣ ಮಾಡಿದ. ಪ್ರತಿ ಸಾಮಾನ್ಯ ಸಭೆಯಲ್ಲಿ ಸದಸ್ಯರು ಅರುಣಕುಮಾರನ ಹಗರಣಗಳನ್ನು ಕೆದಕುತ್ತಿದ್ದರೆ, ಅದಕ್ಕೆ ಸೊಪ್ಪು ಹಾಕದೆ ತನ್ನ ಹಣ ಹಾಗೂ ಅಧಿಕಾರದ ಬಲದಿಂದ ಎಲ್ಲವನ್ನೂ ಜೀರ್ಣಿಸಿಕೊಂಡ.

ಇಂತಹ ಅರುಣ್‌ಕುಮಾರನಿಗೆ ಈ ಬಾರಿಯ ನಗರಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಟಿಕೆಟ್ ನೀಡಲಿಲ್ಲ. ಕಾಂಗ್ರೆಸ್ ಕೂಡ ಟಿಕೆಟ್ ನೀಡದ್ದರಿಂದ 11ನೇ ವಾರ್ಡ್‌ನಿಂದ ಪಕ್ಷೇತರನಾಗಿ ಸ್ಪರ್ಧಿಸಿದ ಅರುಣ್‌ಕುಮಾರ್ ತನ್ನಲ್ಲಿದ್ದ ಹಣಬಲ, ದುಡ್ಡನ್ನು ಯಥೇಚ್ಛವಾಗಿ ಸುರಿದು 2ನೇ ಬಾರಿಗೆ ಗೆದ್ದುಬಂದಿದ್ದ, ಹಣಕ್ಕೇನೂ ಕೊರತೆಯಿರಲಿಲ್ಲ. ಎಷ್ಟೇ ದುಡ್ಡಿದ್ದರೂ ದುರಾಸೆ ಎಂಬುದು ಅರುಣ್‌ಕುಮಾರ್‌ನಲ್ಲಿ ಹೆಚ್ಚಾಗಿಯೇ ಇದ್ದುದ್ದರಿಂದ ಖೋಟಾನೋಟು ಎಣಿಸಲು ಹೋಗಿ ಸಿಕ್ಕಿಬಿದ್ದು ಜೈಲಿನಲ್ಲಿ ಕಂಬಿ ಎಣಿಸುವಂತಾಗಿದೆ.



ಆರುಷಿಯನ್ನು ಕೊಂದದ್ದು ನಿಜವಾಗಲೂ ಆಕೆಯ ಪೋಷಕರೆ?



ತಮ್ಮ 14 ವರ್ಷ ವಯಸ್ಸಿನ ಮಗಳು ಆರುಷಿ ಮತ್ತು ಮನೆಕೆಲಸದಾಳು ಹೇಮರಾಜ್‌ನನ್ನು ಕೊಲೆ ಮಾಡಿದ್ದು ನಿಜವಾಗಲೂ ಆರುಷಿಯ ಅಪ್ಪ ಅಮ್ಮಂದಿರೆ?

ಅಲ್ಲಾ, ಘಾಜಿಯಾಬಾದಿನಲ್ಲಿರುವ ವಿಶೇಷ ಸಿಬಿಐ ನ್ಯಾಯಾಲಯವೇ 'ರಾಜೇಶ್ ಮತ್ತು ನುಪೂರ್ ತಲ್ವಾರ್‌ಗೆ ಜೀವಾವಧಿ ಶಿಕ್ಷೆಯನ್ನು ನೀಡಿರುವಾಗ ಯಾಕೆ ಈ ಪ್ರಶ್ನೆ ಎಂದು ಕೇಳುತ್ತಿದ್ದೀರಾ?

ಆದರೆ 'ನಿಜವಾಗಲೂ ಕೊಲೆಗಡುಕರು ತಲ್ವಾರ್ ದಂಪತಿಗಳೇ?' ಎಂದು ಪ್ರಶ್ನೆ ಕೇಳುವುದು ಅತ್ಯಗತ್ಯವಾಗಿದೆ. ಯಾಕೆಂದರೆ ಒಂದು ವ್ಯವಸ್ಥೆ ತನ್ನ ಅದಕ್ಷತೆಯನ್ನು ಮತ್ತು ಲೋಪದೋಷಗಳನ್ನು ಮುಚ್ಚಿಕೊಳ್ಳಲು ಯಾರನ್ನು ಬೇಕಾದರೂ ಬಲಿಕೊಡುತ್ತದೆ ಎಂಬುದಕ್ಕೆ ಈ ಪ್ರಕರಣ ಒಂದು ಸೂಕ್ತ ಉದಾಹರಣೆಯಾಗಿದೆ.

ನ್ಯಾಯಮೂರ್ತಿ ಶ್ಯಾಮ್ ಲಾಲ್ ಅವರು "ಆರೋಪಿಗಳೇ ಈ ಅಪರಾಧ ಎಸಗಿದ್ದಾರೆ ಎಂದು ನಿಸ್ಸಂಶಯವಾಗಿ ಸಾಬೀತಾಗಿದೆ. ತಮ್ಮ ವಂಶದ ಕುಡಿಯನ್ನು ತಂದೆ, ತಾಯಿಗಳೇ ಕೊಂದಿದ್ದಾರೆ. ಅಪರಾಧ ಎಸಗಿರುವ ಜತೆಗೆ ಶಿಕ್ಷೆಯಿಂದ ಪಾರಾಗಲು ಸಾಕ್ಷಿಗಳ ನಾಶ ಮಾಡಿದ್ದಾರೆ. ಇವರಿಬ್ಬರೂ ಶಿಕ್ಷೆಗೆ ಅರ್ಹರು" ಎಂದಿದ್ದಾರೆ. ಮಾತ್ರವಲ್ಲ, ತಮ್ಮ ತೀರ್ಪಿಗೆ ಹಲವಾರು ಕಾರಣಗಳನ್ನು ನ್ಯಾಯಮೂರ್ತಿ ಪಟ್ಟಿ ಮಾಡಿದ್ದಾರೆ.

ಆ ಕಾರಣಗಳ ಸುತ್ತ ಕಳೆದ ಐದು ವರ್ಷಗಳಿಂದ ಸಹಸ್ರಾರು ಚರ್ಚೆಗಳು ನಡೆದಿದ್ದು, ಪೊಲೀಸರು ಸುಳ್ಳುಗಳನ್ನು ಮತ್ತು ಕಪೋಲಕಲ್ಪಿತ ಕತೆಗಳು ಬೆರೆಸಿದ್ದರಿಂದ ಬಹಳಷ್ಟು ಜನರಿಗೆ ಇದರಲ್ಲಿ ಯಾವುದು ಸತ್ಯ ಯಾವುದು ಮಿಥ್ಯ ಎಂಬುದನ್ನೇ ಗ್ರಹಿಸಲಾಗದಂತಾಗಿದೆ. ಆದ್ದರಿಂದ ಇಲ್ಲಿ ಒಂದಷ್ಟು ವಿಷಯಗಳನ್ನು ಪ್ರಸ್ತಾಪಿಸಬೇಕಿದೆ.

ಆರುಷಿ ಮತ್ತು ಹೇಮರಾಜ್ ಕೊಲೆಯಾದದ್ದು 2008ರ ಮೇ 15-16ರ ರಾತ್ರಿ. ಮೇ 16ರಂದು ಆರುಷಿಯ ಶವ ಪತ್ತೆಯಾದರೆ, ಹೇಮರಾಜನ ಶವ ಸಿಕ್ಕಿದ್ದು ಮೇ 17ರಂದು ಎಂಬುದು ಈಗ ಎಲ್ಲರಿಗೂ ಗೊತ್ತು. ಆದರೆ ಕೊಲೆಯಾದ ರಾತ್ರಿ ಮತ್ತು ಆನಂತರ ನಡೆದ ಘಟನೆಗಳತ್ತ ಗಮನ ಹರಿಸಿದರೆ ಪೊಲೀಸರ ಅದಕ್ಷತೆ ಮಾತ್ರವಲ್ಲ ಕಪಟ ಖಾಕಿಗಳ ಕಂತ್ರಿ ಬುದ್ಧಿಯೂ ಅರ್ಥವಾಗುತ್ತದೆ.

ಆರುಷಿಯ ಶವ ಪತ್ತೆಯಾದ ನಂತರ ಆಕೆಯ ಪೋಷಕರ, ಪೊಲೀಸರ, ಮಾಧ್ಯಮಗಳ ಮತ್ತು ಸಾಮಾನ್ಯ ಜನರ ಗುಮಾನಿ ಸಹಜವಾಗಿಯೇ ಹರಿದಿದ್ದು 'ನಾಪತ್ತೆ'ಯಾಗಿದ್ದ ಹೇಮರಾಜ್‌ನತ್ತ. ಆದರೆ ಮಾರನೆ ದಿನ ಆತನೂ ಕೊಲೆಯಾಗಿದ್ದು ಗೊತ್ತಾದಾಗ ಎಲ್ಲರ ಸಂಶಯಕ್ಕೆ ಕೇಂದ್ರವಾಗಿದ್ದು ತಲ್ವಾರ್ ದಂಪತಿಗಳು. ಅದರ ಹಿಂದಿನ ತರ್ಕ ಸರಳವಾಗಿತ್ತು, ಅಂದು ರಾತ್ರಿ ಮನೆಯಲ್ಲಿ ಇದ್ದದ್ದು ನಾಲ್ವರು. ಆ ನಾಲ್ವರಲ್ಲಿ ಇಬ್ಬರು ಅಸಹಜವಾಗಿ ಸತ್ತಿದ್ದರಿಂದ ಅವರನ್ನು ಕೊಲೆ ಮಾಡಿದ್ದು ಉಳಿದಿದ್ದ ಇನ್ನಿಬ್ಬರು ಎಂಬುದೇ ಆ ಸರಳ ತರ್ಕವಾಗಿತ್ತು, ಇದೇ ತರ್ಕವನ್ನು ನ್ಯಾಯಮೂರ್ತಿಗಳೂ ತಮ್ಮ ತೀರ್ಪಿನಲ್ಲಿ ಮಾಡಿದ್ದಾರೆ.

ಆದರೆ ಈ ತರ್ಕ ಅದೆಷ್ಟು ಸರಿಯಾದದ್ದು?

ಈ ಜೋಡಿ ಕೊಲೆಗಳ ತನಿಖೆಯನ್ನು ಆರಂಭದಲ್ಲಿ ಕೈಗೆತ್ತಿಕೊಂಡ ದೆಹಲಿ ಪೊಲೀಸರು ಮತ್ತು ಆನಂತರದ ಮೊದಲನೆ ಸಿಬಿಐ ತಂಡದ ಅಧಿಕಾರಿಗಳು ತಲ್ವಾರ್ ದಂಪತಿಗಳನ್ನಲ್ಲದೆ ಹೇಮರಾಜನ ಮಿತ್ರರಾದ ಕೃಷ್ಣ, ರಾಜ್‌ಕುಮಾರ್ ಮತ್ತು ವಿಜಯ ಮಂಡಲ್ ಎಂಬ ನೌಕರರನ್ನು ಬಂಧಿಸಿ ಎಲ್ಲರನ್ನೂ ವಿವಿಧ ರೀತಿಯ ವಿಚಾರಣೆಗಳಿಗೆ ಗುರಿಯಾಗಿಸಿದ್ದರು.

ಐವರನ್ನೂ ಪಾಲಿಗ್ರಾಫ್ ಟೆಸ್ಟ್, ಬ್ರೈನ್ ಮ್ಯಾಪಿಂಗ್ ಟೆಸ್ಟ್, ಲೈ ಡಿಟೆಕ್ಟರ್ ಟೆಸ್ಟ್, ನಾರ್ಕೋ ಅನಾಲಿಸಿಸ್ ತರಹದ ಹತ್ತಾರು ಪರೀಕ್ಷೆಗಳಿಗೆ ಒಳಪಡಿಸಲಾಗಿತ್ತು. ಈ ಎಲ್ಲಾ ಪರೀಕ್ಷೆಗಳಲ್ಲೂ ತಲ್ವಾರ್ ದಂಪತಿಗಳು ಯಾವುದೇ ಮುಚ್ಚುಮರೆಯನ್ನು ಮಾಡಿರಲಿಲ್ಲ. ಆದರೆ ಇತರೆ ಮೂವರು ಹಲವಾರು ಸತ್ಯಗಳನ್ನು ಮತ್ತು ಸುಳ್ಳುಗಳನ್ನು ಹೇಳಿದ್ದು ಸಾಬೀತಾಗಿತ್ತು.


ಹೇಮರಾಜ್

ಮೊದಲನೆಯದಾಗಿ ಕೊಲೆಗಳು ನಡೆದ ರಾತ್ರಿ ಕೃಷ್ಣ, ರಾಜ್‌ಕುಮಾರ್ ಮತ್ತು ವಿಜಯ್ ತಲ್ವಾರರ ಮನೆಗೆ ಹೋಗಿ ಹೇಮರಾಜನನ್ನು ಭೇಟಿ ಆಗಿದ್ದರು. ಸ್ವತಃ ಹೇಮರಾಜನಿಗೆ ಕುಡಿತದ ಅಭ್ಯಾಸ ಇರಲಿಲ್ಲವಾದರೂ ಇತರೆ ಮಿತ್ರರು ಅಂದು ಹೇಮರಾಜನ ರೂಮಿನಲ್ಲಿ ಬಿಯರ್ ಮತ್ತು ವೈನ್ ಸೇವಿಸಿದ್ದರು. ಮಾರನೆ ದಿನ ಹೇಮರಾಜನ ರೂಮಿನಲ್ಲಿ ಆ ಖಾಲಿ ಬಾಟಲಿಗಳು ಪೊಲೀಸರಿಗೆ ಸಿಕ್ಕಿದ್ದವು. ಅವುಗಳ ಮೇಲೆ ರಕ್ತದ ಕಲೆಗಳು ಮತ್ತು ಕೈಬೆರಳುಗಳ ಗುರುತುಗಳೂ ಇದ್ದವು. ರಕ್ತವಾಗಲಿ ಕೈಬೆರಳುಗಳ ಗುರುತುಗಳಾಗಲಿ ತಲ್ವಾರ್ ದಂಪತಿಗಳದ್ದಾಗಿರಲಿಲ್ಲ ಎಂದು ಆನಂತರದ ಪರೀಕ್ಷೆಗಳು ಸ್ಪಷ್ಟಪಡಿಸಿದ್ದವು.

ಎರಡನೆಯದಾಗಿ ನಾರ್ಕೋ ಪರೀಕ್ಷೆಯಲ್ಲಿ ಕೃಷ್ಣ ಮತ್ತು ರಾಜ್‌ಕುಮಾರ್ ತಾವು ಹೇಮರಾಜನ ರೂಮಿನಲ್ಲಿ ನೇಪಾಲಿ ಟಿವಿ ಚಾನೆಲ್ ನೋಡುತ್ತಿದ್ದೆವು ಎಂದು ಹೇಳಿದ್ದರು. ಹಾಗೆಯೇ ನಾರ್ಕೋ ಪರೀಕ್ಷೆಗಳಲ್ಲಿ ಮೂವರೂ ಒಂದೇ ನೇಪಾಲಿ ಹಾಡನ್ನು ಗುನುಗಿದ್ದರು. ಇದು ನಳಿನಿ ಸಿಂಗ್ ಅವರು ನಡೆಸುವ ನೇಪಾಲಿ ಚಾನೆಲ್ ಆಗಿದ್ದು ಕೊಲೆ ನಡೆದ ರಾತ್ರಿ ತಮ್ಮ ಚಾನೆಲ್ ಆ ಹಾಡನ್ನು ಬಿತ್ತರಿಸಿದ್ದಾಗಿ ನಳಿನಿ ಪೊಲೀಸರಿಗೆ ತಿಳಿಸಿದ್ದರು.

ಅದೆಲ್ಲಕ್ಕಿಂತ ಮುಖ್ಯವಾಗಿ ನಾರ್ಕೋ ಪರೀಕ್ಷೆಯಲ್ಲಿ ತಾವು ಆರುಷಿ ಕೊಠಡಿಯನ್ನು ಪ್ರವೇಶಿಸಿದ್ದಾಗಿಯೂ, ಆಕೆಯ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಆಕೆ ಕೊಸರಾಡಿದ್ದರಿಂದ ಆಕೆಯನ್ನು ಕೊಲೆ ಮಾಡಿದ್ದಾಗಿಯೂ, ಇದನ್ನು ವಿರೋಧಿಸಿದ ಹೇಮರಾಜನನ್ನೂ ತಾರಸಿಯ ಮೇಲೆ ಕೊಂದದ್ದಾಗಿಯೂ ಕೃಷ್ಣ ಮತ್ತು ರಾಜ್‌ಕುಮಾರ್ ಒಪ್ಪಿಕೊಂಡಿದ್ದರು.

(ನಾರ್ಕೋ ಪರೀಕ್ಷೆಗಳು ವೈಜ್ಞಾನಿಕವೂ ಅಲ್ಲ, ಅವುಗಳಿಗೆ ನ್ಯಾಯಾಲಯದ ಮುಂದೆ ಕಿಮ್ಮತ್ತು ಬೆಲೆಯೂ ಇಲ್ಲ, ಆದರೂ ಅಂತಹ ಪರೀಕ್ಷೆಗಳು ತನಿಖೆ ಯಾವ ನಿಟ್ಟಿನಲ್ಲಿ ಮುಂದುವರೆಯಬೇಕು ಎಂಬುದನ್ನು ಸೂಚಿಸುತ್ತವೆ. ವಿಚಿತ್ರವೆಂದರೆ ಸಿಬಿಐ ತಂಡ ಈ ಮೂವರ ನಾರ್ಕೋ ಪರೀಕ್ಷೆಗಳನ್ನು ಗಂಭೀರವಾಗಿ ತೆಗೆದುಕೊಳ್ಳದೆ ಇದ್ದದ್ದು. ಅದಕ್ಕೆ ಇದ್ದ ಕಾರಣಗಳತ್ತ ಆಮೇಲೆ ಗಮನ ಹರಿಸೋಣ.)

ಕೊಲೆ ನಡೆದ ಮೂರು ದಿನಗಳ ಮುನ್ನ ರಾಜೇಶ್ ಅವರ ದಂತ ಕ್ಲಿನಿಕ್‌ನಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣ ಯಾವುದೋ ಎಡವಟ್ಟು ಮಾಡಿದ್ದಕ್ಕೆ ರಾಜೇಶ್ ಆತನ ವಿರುದ್ಧ ಕಿಡಿಕಾರಿದ್ದರು. ಆಗ ಕೃಷ್ಣ ರಾಜೇಶ್ ಅವರ ಕಾರ್ ಡ್ರೈವರ್ ಉಮೇಶ್ ಮುಂದೆ 'ಇವನನ್ನು ನೋಡಿಕೋತೀನಿ' ಎಂದು ಹೇಳಿದ್ದ. ಅಂದರೆ ಸೇಡು ತೀರಿಸಿಕೊಳ್ಳುವ ಉದ್ದೇಶ ಕೃಷ್ಣನಿಗೆ ಇತ್ತು.

ಮೂರನೆಯದಾಗಿ ಹೇಮರಾಜನ ರೂಮಿನಿಂದ ತಲ್ವಾರ್ ಮನೆಯನ್ನು ಪ್ರವೇಶಿಸಬಹುದಿತ್ತಲ್ಲದೆ ಹೊರಗಿನಿಂದಲೂ ಹೇಮರಾಜನ ರೂಮನ್ನು ಪ್ರವೇಶಿಸಬಹುದಿತ್ತು.

ಈ ಎಲ್ಲ ಅಂಶಗಳನ್ನು ಗಮನಿಸಿದರೆ ಅವತ್ತು ತಲ್ವಾರ್ ಮನೆಯನ್ನು ಹೇಮರಾಜನ ಮಿತ್ರರು ಪ್ರವೇಶಿಸಿದ್ದರು ಮತ್ತು ಕೊಲೆಯಾದ ರಾತ್ರಿ [illegible] ಮನೆಯಲ್ಲಿ ನಾಲ್ವರಿಗಿಂತ ಹೆಚ್ಚು ಜನ ಇದ್ದರು ಎಂದು ಗೊತ್ತಾಗುತ್ತದಲ್ಲವೇ?

ಇಂತಹ ಭೀಭತ್ಸ ಕೊಲೆ ನಡೆದರೂ ಪಕ್ಕದ ರೂಮಿನಲ್ಲಿದ್ದ ಆರುಷಿಯ ಪೋಷಕರಿಗೆ ಏನೂ ಕೇಳಿಸಲಿಲ್ಲವೇ? ಅದರಲ್ಲೂ ಆ ಎರಡು ಕೊಠಡಿಗಳ ನಡುವೆ ಸರಿಯಾದ ಗೋಡೆ ಇರದೆ ಒಂದು ಪ್ಲೈವುಡ್ ಶೀಟ್ ಇರುವಾಗ ಅವರಿಗೆ ಏನೂ ಕೇಳಿಸಲಿಲ್ಲ ಎಂದರೆ ನಂಬಲಿಕ್ಕಾಗುತ್ತದೆಯೇ? ಇದು ಇನ್ನೊಂದು ಮುಖ್ಯ ಪ್ರಶ್ನೆ.

ವಾಸ್ತವವಾಗಿ ಆ ಎರಡೂ ಕೊಠಡಿಗಳ ನಡುವೆ ಇದ್ದದ್ದು ಬರೀ ಒಂದು ಪ್ಲೈವುಡ್ ಶೀಟ್ ಅಲ್ಲ, ಬದಲಾಗಿ ಒಂದು ಇಟ್ಟಿಗೆಯ ಗೋಡೆ. ಆ ಗೋಡೆಗೆ ಪ್ಲೈವುಡ್ ಶೀಟನ್ನು ಲಾಮಿನೇಟ್ ಮಾಡಲಾಗಿತ್ತು. ಆದರೆ ಪೊಲೀಸರು ಮತ್ತು ಮಾಧ್ಯಮಗಳು ವಿವಿಧ ಅಂಶಗಳನ್ನು ಬಿತ್ತರಿಸುತ್ತಾ ಸಾಗಿದಂತೆ 'ಗೋಡೆ' ನಾಪತ್ತೆಯಾಗಿ ಬರೀ ಪ್ಲೈವುಡ್ ಶೀಟ್ ಉಳಿದುಕೊಂಡಿತ್ತು.

ಅಷ್ಟೇ ಮುಖ್ಯವಾದ ವಿಚಾರ ಯಾವುದೆಂದರೆ ಕೊಲೆಯಾದ ಕೆಲವೇ ದಿನಗಳ ನಂತರ ಸಿಬಿಐನ 'ಶಬ್ದ ತಜ್ಞರ ತಂಡ' ಒಂದು ರಾತ್ರಿ ಎರಡೂ ಕೊಠಡಿಗಳ ಏಸಿಗಳನ್ನು ಆನ್ ಮಾಡಿ ಆರುಷಿ ರೂಮಿನಲ್ಲಾಗುವ ಸದ್ದುಗಳು ಆಕೆಯ ಪೋಷಕರ ರೂಮಿಗೆ ಕೇಳಿಸುತ್ತವೆಯೇ ಎಂದು ಪರೀಕ್ಷಿಸಿದ್ದರು. ಆಗ ಆಕೆಯ ಕೊಠಡಿಯಿಂದ ಆ ತಜ್ಞರ ತಂಡಕ್ಕೂ ಯಾವ ಶಬ್ದವೂ ಕೇಳಿಸಿರಲಿಲ್ಲ.

ಆರುಷಿಯ ಕೊಲೆ ಪತ್ತೆಯಾದ ದಿನ ತಲ್ವಾರ್ ದಂಪತಿಗಳು ಹೇಮರಾಜನತ್ತ ಸಂಶಯ ಹರಿಯುವಂತೆ ಮಾಡಿದರಲ್ಲದೆ, ಆತನ ಶವ ಬಿದ್ದಿದ್ದ ತಾರಸಿಯ ಬಾಗಿಲಿನ ಕೀಲಿ ಕೈಕೊಡಲು ನಿರಾಕರಿಸುವ ಮೂಲಕ ತಮ್ಮ ಅಪರಾಧವನ್ನು ಮುಚ್ಚಿ ಹಾಕಲು ಯತ್ನಿಸಿದ್ದರು ಎಂಬುದು ಇನ್ನೊಂದು ವಾದ.

ತಮ್ಮ ಮುದ್ದಿನ ಮಗಳು ನಿಗೂಢವಾಗಿ ಕೊಲೆಯಾಗಿದ್ದು ಸಹಜವಾಗಿಯೇ ತಲ್ವಾರ್ ದಂಪತಿಗಳಿಗೆ ದೊಡ್ಡ ಶಾಕ್ ಆಗಿತ್ತು. ಅಂತಹ ಸಂದರ್ಭದಲ್ಲಿ ಯಾರಿಗೆ ತಾನೇ ಹೇಗೆ ಕೀಲಿ ಕೈ ಎಲ್ಲಿವೆ ಎಂದು ನೆನಪಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ತಾರಸಿಯ ಬಾಗಿಲಿಗೆ ಹಾಕಿದ್ದ ಲಾಕ್ ಮೇಲೆ ರಕ್ತದ ಕಲೆಗಳಿದ್ದವು. ಅದನ್ನು ಗಮನಿಸಿಯಾದರೂ ಪೊಲೀಸರು ಬಾಗಿಲಿಗೆ ಹಾಕಿದ್ದ ಲಾಕ್ ಅನ್ನು ಬಲವಂತವಾಗಿ ಒಡೆದಿದ್ದರೆ ಹೊರಗೆ ಬಿದ್ದಿದ್ದ ಹೇಮರಾಜನ ಶವ ಸಿಗುತ್ತಿತ್ತು. ಆದರೆ ಪೊಲೀಸರು ಹಾಗೆ ಮಾಡಲಿಲ್ಲ. ಯಾಕೆ ಎಂದು ಆನಂತರ ಪ್ರಶ್ನಿಸಿದ್ದಕ್ಕೆ 'ಮರೆತುಹೋಯಿತು' ಎಂಬ ಉತ್ತರ ಪೊಲೀಸರಿಂದ ಬಂದಿತ್ತು. ಪೊಲೀಸರ ಈ 'ಮರೆವು' ಆನಂತರ 'ತಲ್ವಾರ್ ದಂಪತಿಗಳು ಅಸಹಕಾರ ನೀಡುವ ಮೂಲಕ ತಮ್ಮ ಅಪರಾಧವನ್ನು ಮುಚ್ಚಿಹಾಕಲು ಯತ್ನಿಸಿದರು' ಎಂದು ಪರಿವರ್ತನೆ ಗೊಂಡಿತು. ಅದನ್ನೇ ಈಗ ನ್ಯಾಯಾಲಯವೂ ಹೇಳಿದೆ. ಅಂದಹಾಗೆ, ಹೇಮರಾಜನ ಬಳಿ ಇದ್ದ ಮನೆಯ ಮತ್ತು ತಾರಸಿಯ ಕೀಲಿಕೈಗಳು ಎಲ್ಲಿ ಹೋದವು ಎಂದು ಇವತ್ತಿಗೂ ಪತ್ತೆಯಾಗಿಲ್ಲ.

ಆರುಷಿ ಕೊಠಡಿಗೆ ಸ್ವಯಂಚಾಲಿತ ಬೀಗ ಹಾಕುವ ವ್ಯವಸ್ಥೆ ಇತ್ತು. ಒಳಗಿನಿಂದ ಲಾಕ್ ತೆಗೆಯಬಹುದಿತ್ತು. ಆದರೆ ಹೊರಗಿನವರು ಬೀಗ ಇಲ್ಲದೆ ಒಳ ಪ್ರವೇಶಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಆಕೆಯ ಕೊಠಡಿಯನ್ನು ಪ್ರವೇಶಿಸಿ ಆಕೆಯನ್ನು ಕೊಂದಿದ್ದು ಆಕೆಯ ಪಾಲಕರು ಎಂಬುದು ಇನ್ನೊಂದು ತರ್ಕ.

ಆದರೆ ಅವತ್ತು ರಾತ್ರಿ ಆರುಷಿ ತನ್ನ ರೂಮಿಗೆ ಹೋದ ನಂತರ ಆಕೆಯ ರೂಮಿನಲ್ಲಿದ್ದ ಇಂಟರ್‌ನೆಟ್ ಸಂಪರ್ಕವನ್ನು ಆನ್ ಮಾಡಲು ರಾಜೇಶ್ ಹೇಳಿದ್ದರು. ಅದರಂತೆ ನುಪೂರ್ ಆರುಷಿಯ ರೂಮನ್ನು ಪ್ರವೇಶಿಸಿ ಇಂಟರ್‌ನೆಟ್ ಅನ್ನು ಆನ್ ಮಾಡಿದ್ದರು. ಆಗ ಆರುಷಿ ಚೇತನ್ ಭಗತ್ ಬರೆದಿರುವ ಪುಸ್ತಕವನ್ನು ಓದುತ್ತಿದ್ದಳು. ಆಕೆಯ ರೂಮಿನಿಂದ ಹೊರಬಂದ ನುಪೂರ್ ಕೊಠಡಿಯ ಬಾಗಿಲನ್ನು ತೆರೆಯಲು ಉಪಯೋಗಿಸಿದ್ದ ಕೀಲಿಕೈಯನ್ನು ಬಾಗಿಲಿನಲ್ಲೇ ಬಿಟ್ಟಿದ್ದರು.

ಅದನ್ನೇ ಉಪಯೊಗಿಸಿಕೊಂಡು ಯಾರಾದರೂ ಆರುಷಿಯ ಕೊಠಡಿಯನ್ನು ಪ್ರವೇಶಿಸಿರುವ ಸಾಧ್ಯತೆ ಇದೆ. ಜೊತೆಗೆ ಆಗಂತುಕರು ಆಕೆಯ ಕೊಠಡಿ


'ಟಚ್ ಡಿಎನ್‌ಎ' ಪರೀಕ್ಷೆಗೆ ಯಾಕೆ ಸಿಬಿಐ ಒಪ್ಪುತ್ತಿಲ್ಲ?

ಈಗ ವಿದೇಶಗಳಲ್ಲಿ ಕೊಲೆ ಪ್ರಕರಣಗಳ ತನಿಖೆಯಲ್ಲಿ ಅತ್ಯಾಧುನಿಕವಾದ ಟಚ್ ಡಿಎನ್‌ಎ ಎಂಬ ಪರೀಕ್ಷೆಯನ್ನು ಪೊಲೀಸರು ಅವಲಂಬಿಸುತ್ತಿದ್ದಾರೆ. ಇದು ಎಂತಹ ಪರೀಕ್ಷೆಯೆಂದರೆ ಯಾವುದಾದರೂ ವಸ್ತುವನ್ನು ಹತ್ತಾರು ವರ್ಷಗಳ ಹಿಂದೆ ಕೊಲೆಮಾಡಲು ಉಪಯೋಗಿಸಿದ್ದರೂ ಅದನ್ನು ಯಾರು ಕೊನೆಗೆ ಮುಟ್ಟಿದ್ದರು ಎಂಬುದನ್ನು ಅದರ ಮೇಲೆ ಇರುವ ವಸ್ತುಗಳಿಂದ ಪತ್ತೆ ಮಾಡಬಹುದು.

ಈ ಕಾರಣಕ್ಕೇ ತಮ್ಮ ಮನೆಯಲ್ಲಿ ಸಿಕ್ಕಿದ್ದ ಬ್ಯಾಲೆಂಟೈನ್ ವಿಸ್ಕಿ ಬಾಟಲಿಯನ್ನು ಟಚ್ ಡಿಎನ್‌ಎ ಪರೀಕ್ಷೆಗೆ ಒಳಪಡಿಸಬೇಕೆಂದೂ, ಆ ಮೂಲಕ ಈ ಜೋಡಿ ಕೊಲೆಗಳನ್ನು ಮಾಡಿದ್ದು ಯಾರೆಂದು ಪತ್ತೆ ಆಗುತ್ತದೆಂದೂ ತಲ್ವಾರ್ ದಂಪತಿಗಳು ಕಳೆದ ನಾಲ್ಕು ವರ್ಷಗಳಿಂದ ಸಿಬಿಐ ಅನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ.

ಆದರೆ ಸಿಬಿಐ ತನಿಖಾ ತಂಡದ ಮುಖ್ಯಸ್ಥ ಎ.ಜಿ.ಎ.ಕೌಲ್ ಅದರ ಅಗತ್ಯವಿಲ್ಲವೆಂದು ವಾದಿಸುತ್ತಲೇ ಬಂದಿದ್ದಾರೆ. ಯಾಕೆ ಕೌಲ್ ಅವರೇ?

ಸತ್ಯ ಹೊರಬಿದ್ದರೆ ತಮ್ಮ ತನಿಖೆಯ ಅಸಲಿಯತ್ತ ಬಹಿರಂಗವಾಗುತ್ತದೆ ಎಂಬ ಅಳುಕೇ?







ಬಾಗಿಲನ್ನು ತಟ್ಟಿದ್ದರೆ ಅಪ್ಪನೋ, ಅಮ್ಮನೋ ಕರೆಯುತ್ತಿರಬೇಕೆಂದು ಆರುಷಿಯೇ ಬಾಗಿಲನ್ನು ಒಳಗಿನಿಂದ ತೆಗೆದಿರುವ ಸಾಧ್ಯತೆಯೂ ಇದೆ. ಈ ಅಂಶವನ್ನು ಪೊಲೀಸರು ಮುಚ್ಚಿಹಾಕಿದ್ದಾರೆ.

ಇವೆಲ್ಲಕ್ಕಿಂತ ಮುಖ್ಯವಾದದ್ದು 'ಇದೊಂದು ಮರ್ಯಾದಾ ಹತ್ಯೆ' ಎಂಬ ಪೊಲೀಸರ ತರ್ಕ. ಅದನ್ನೇ ನ್ಯಾಯಾಲಯವೂ ಒಪ್ಪಿಕೊಂಡಿದೆ.

ಈ ತರ್ಕ "ಕೊಲೆಯಾದ ರಾತ್ರಿ ಆರುಷಿ ಮನೆಕೆಲಸದ ಹೇಮರಾಜನ ಜೊತೆ ಅಸಭ್ಯವಾಗಿ ಇದ್ದದ್ದನ್ನು ನೋಡಿದ ತಂದೆ ರಾಜೇಶ್ ರೊಚ್ಚಿಗೆದ್ದು ಅವರಿಬ್ಬರನ್ನೂ ಕೊಲೆ ಮಾಡಿದ" ಎಂಬುದಾಗಿದೆ.

ಆದರೆ ತನಿಖೆಯಿಂದ ಈಗಾಗಲೇ ಸ್ಪಷ್ಟವಾಗಿ ಸಾಬೀತಾಗಿರುವ ಅಂಶ ಯಾವುದೆಂದರೆ ಆರುಷಿಯ ಕೊಲೆ ಆಕೆಯ ಕೊಠಡಿಯಲ್ಲಿ ನಡೆದಿದ್ದರೆ ಹೇಮರಾಜನ ಕೊಲೆ ನಡೆದದ್ದು ತಾರಸಿಯ ಮೇಲೆ.

ಸ್ವತಃ ಸಿಬಿಐನ ಫೊರೆನ್ಸಿಕ್ ತಂಡ ಅಲ್ಟ್ರಾ ವಯಲೆಟ್ ಲೈಟ್ ಟೆಸ್ಟ್ ಮಾಡಿದಾಗ ಆರುಷಿ ರೂಮಿನಲ್ಲಿ ಹೇಮರಾಜನ ರಕ್ತ ಪತ್ತೆಯಾಗಿರಲಿಲ್ಲ, ಬದಲಾಗಿ ಆತ ಕೊಲೆಯಾಗಿದ್ದು ತಾರಸಿಯ ಮೇಲೆ ಎಂಬುದು ಗೊತ್ತಾಗಿತ್ತು. ಹಾಗೆಯೇ ಸ್ಥಳ ಪರೀಕ್ಷೆ ಮಾಡಿದ ಪ್ರತಿಷ್ಠಿತ ಏಮ್ಸ್ ವೈದ್ಯರು ಮತ್ತು ವಿಜ್ಞಾನಿಗಳು ಇದ್ದ ಏಳು ಸದಸ್ಯರ ತಂಡವೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು.

ಜೊತೆಗೆ ಹೇಮರಾಜನ ಶವದ ಪಕ್ಕ ಒಂದು ರಕ್ತಸಿಕ್ತ ಹೆಜ್ಜೆಯ ಮತ್ತು ಹಸ್ತದ ಗುರುತುಗಳಿದ್ದವು. ಅವೆರಡೂ ರಾಜೇಶ್ ಅಥವಾ ನುಪೂರ್ ಅವರ ಪಾದ ಮತ್ತು ಹಸ್ತವನ್ನು ಹೋಲುವುದಿಲ್ಲ ಎಂದು ಪೊಲೀಸರೇ ಒಪ್ಪಿಕೊಂಡಿದ್ದಾರೆ. ಸಿಬಿಐ ಕೂಡ ನ್ಯಾಯಾಲಯಕ್ಕೆ ಸಲ್ಲಿಸಿದ ಅಂತಿಮ ವರದಿಯಲ್ಲೂ ಆರುಷಿಯ ಕೊಲೆ ಆಕೆಯ ರೂಮಿನಲ್ಲೂ, ಹೇಮರಾಜನ ಕೊಲೆ ತಾರಸಿಯಲ್ಲೂ ನಡೆಯಿತು ಎಂದು ಹೇಳಿದೆ.

ಹಾಗಿರುವಾಗ ಇದು ಹೇಗೆ "ಆರುಷಿ ಮತ್ತು ಹೇಮರಾಜ್ ಅಸಭ್ಯವಾಗಿದ್ದ ರೀತಿಯಿಂದ ಆಕ್ರೋಶಗೊಂಡ ರಾಜೇಶ್ ತಲ್ವಾರ್ ಮಾಡಿದ ಮರ್ಯಾದೆ ಹತ್ಯೆ ಪ್ರಕರಣ" ಆಗುತ್ತದೆ? ಇದು ಪೊಲೀಸರು ಆರುಷಿ ಎಂಬ ಮುಗ್ಧ ಬಾಲಕಿಯ ಮೇಲೆ ಮಾಡುತ್ತಿರುವ ಪದಗಳ ಅತ್ಯಾಚಾರವಲ್ಲವೇ? ಇಂತಹ ಅಸಹ್ಯ ಮನೋಭಾವವನ್ನು ವಿರೋಧಿಸುವವರೇ ಇಲ್ಲದಂತಾಗಿರುವುದು ನಮ್ಮ ಸಮಾಜದ ದುರಂತವಲ್ಲವೇ?

ತಲ್ವಾರ್ ಧಂಪತಿಗಳಲ್ಲದೆ ಹೊರಗಿನವರು ಈ ಜೋಡಿ ಕೊಲೆ ಮಾಡಿದ್ದರೆ, ಘಟನಾ ಸ್ಥಳವನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ಮುಂದಾಗುತ್ತಿರಲಿಲ್ಲ ಎಂಬುದು ಇನ್ನೊಂದು ವಾದ. ಇದನ್ನು ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಪ್ರಸ್ತಾಪಿಸಿದ್ದಾರೆ.

ಆದರೆ ನಡೆದ ವಿಚಾರವೇ ಬೇರೆ. ಆರುಷಿ ಕೊಲೆ ಪತ್ತೆಯಾದ ದಿನ ಪೊಲೀಸರು ತಲ್ವಾರ್ ಮನೆಗೆ ಬಂದೋಬಸ್ತು ಒದಗಿಸಲಿಲ್ಲ. ಅಷ್ಟೇ ಅಲ್ಲ, ತಲ್ವಾರ್ ದಂಪತಿಗಳ ಮತ್ತು ಆರುಷಿಯ ಸ್ನೇಹಿತರು ಮಾತ್ರವಲ್ಲದೆ, ಅಕ್ಕಪಕ್ಕದವರು, ಮಾಧ್ಯಮದವರು ಮತ್ತು ಕುತೂಹಲಿಗಳು, ಹೀಗೆ ನೂರಾರು ಜನರು ಮನೆಯನ್ನು ಪ್ರವೇಶಿಸುವುದನ್ನು ಆ ಮೂಲಕ ಸಾಕ್ಷ್ಯಾಧಾರಗಳನ್ನು ನಾಶಮಾಡುವುದನ್ನು ಪೊಲೀಸರು ತಡೆಯಲಿಲ್ಲ. ಇದೆಲ್ಲದರಿಂದ ಮನೆ ಗಲೀಜಾಗಿತ್ತು. ಆರುಷಿಯ ಅಂತಿಮ ಸಂಸ್ಕಾರಕ್ಕೆಂದು ತಲ್ವಾರ್ ದಂಪತಿಗಳು ಹೋಗಿದ್ದಾಗ ಅವರ ಸಂಬಂಧಿಗಳು ಮನೆಯನ್ನು ಮತ್ತು ಆರುಷಿಯ ರೂಮಿನಲ್ಲಿದ್ದ ರಕ್ತದ ಕಲೆಗಳನ್ನು ಸ್ವಚ್ಛ ಮಾಡಬಹುದೇ ಎಂದು ಪೊಲೀಸರನ್ನು ಕೇಳಿದ್ದರು. ಪೊಲೀಸರು ತಮಗೆ ಬೇಕಿದ್ದ ಸಾಕ್ಷ್ಯಗಳನ್ನು ಅಷ್ಟುಹೊತ್ತಿಗಾಗಲೇ ಪಡೆದಿದ್ದೇವೆಂದು ಭಾವಿಸಿದ್ದರಿಂದ ಅದಕ್ಕೆ ಅನುಮತಿಯನ್ನು ನೀಡಿದ್ದರು. ಅನಂತರವೇ ತಲ್ವಾರ್ ಅವರ ಸಂಬಂಧಿಕರು ಮನೆಯನ್ನು ಸ್ವಚ್ಛ ಮಾಡಿದ್ದರು. ಇದರಲ್ಲಿ ತಲ್ವಾರ್ ದಂಪತಿಗಳ ಪಾತ್ರವೇ ಇರಲಿಲ್ಲ, ಆದರೂ ಅದೇ ಈಗ ಅವರು 'ಸಾಕ್ಷ್ಯಗಳನ್ನು ನಾಶ ಮಾಡಿದರು' ಎಂಬ ಆರೋಪದ ಮೇಲೆ ಅವರಿಗೆ ಜೀವಾವಧಿ ಶಿಕ್ಷೆ ಸಿಗಲು ಪ್ರಮುಖಕಾರಣಗಳಲ್ಲಿ ಒಂದಾಗಿದೆ. ಇದೆಂತಹ ದುರಂತ.

ಆರುಷಿ ಕೊಲೆಯಾದ ಮಾರನೆ ಬೆಳಗ್ಗೆ ಎದ್ದ ಕೂಡಲೇ ರಾಜೇಶ್ ತಲ್ವಾರ್ ಗಮನಿಸಿದ್ದು ಡೈನಿಂಗ್ ಟೇಬಲ್ ಮೇಲಿದ್ದ 'ಬ್ಯಾಲೆಂಟೈನ್ ವಿಸ್ಕಿ'ಯ ಬಾಟಲಿಯನ್ನು. "ಇದು ಇಲ್ಲೇನು ಮಾಡುತ್ತಿದೆ?" ಎಂದು ಪ್ರಶ್ನಿಸಿದ ರಾಜೇಶ್ ಕೂಡಲೇ "ಆರುಷಿಯನ್ನು ನೋಡು" ಎಂದು ಪತ್ನಿ ನುಪೂರ್‌ಗೆ ಹೇಳಿದ್ದರು. ಆ ಕ್ಷಣವೇ ರಾಜೇಶ್ ಮತ್ತು ನುಪೂರ್ ಆರುಷಿ ಕೊಠಡಿಯನ್ನು ಪ್ರವೇಶಿಸಿದಾಗ ಆಕೆ ಕೊಲೆಯಾಗಿದ್ದು ಗೊತ್ತಾಗಿತ್ತು. ಅಂದಹಾಗೆ ಆ 'ಬ್ಯಾಲೆಂಟೈನ್ ವಿಸ್ಕಿ' ಬಾಟಲಿಯ ಮೇಲೆ ಆರುಷಿ ಮತ್ತು ಹೇಮರಾಜನ ರಕ್ತದ ಕಲೆಗಳಿದ್ದವು. ಆರುಷಿ ಮತ್ತು ಹೇಮರಾಜನನ್ನು ಕೊಂದಿದ್ದವರೇ ಆ ಬಾಟಲಿಯಲ್ಲಿದ್ದ ವಿಸ್ಕಿಯನ್ನು ಕುಡಿದಿದ್ದರು ಎಂಬ ಒಂದು ತರ್ಕ ಹುಟ್ಟಿಕೊಂಡಿತು. ಅದು ನಿಜ ಕೂಡ. ಹಾಗಾದರೆ ಕೊಲೆ ಮಾಡಿದ್ದು ಯಾರು?

ಪೊಲೀಸರ ಪ್ರಕಾರ ಕೊಲೆ ಮಾಡಿದ್ದು ರಾಜೇಶ್... ಯಾಕೆಂದರೆ ಮನೆ ಮಾಲೀಕರು ನಿದ್ರಿಸುತ್ತಿರುವಾಗ ಕೊಲೆ ಮಾಡಿದ ಹೊರಗಿನವರು ವಿಸ್ಕಿ ಕುಡಿಯುವಷ್ಟು 'ಧೈರ್ಯ'ವನ್ನು ತೋರುವುದಿಲ್ಲ.

ಅಲ್ಲ, ಮನೆಯ ಮಾಲೀಕರು ಹತ್ತಿರದಲ್ಲೇ ನಿದ್ರಿಸುತ್ತಿರುವಾಗ ಜೋಡಿ ಕೊಲೆಗಳನ್ನು ಮಾಡುವಷ್ಟು ಧೈರ್ಯವನ್ನು ತೋರಿದ ಕೊಲೆಗಾರರು ವಿಸ್ಕಿಯನ್ನು ... ಹೆದರುತ್ತಾರೆಯೇ ಎಂಬ ಅಂಶವನ್ನು ಪೊಲೀಸರು ಗಮನಕ್ಕೆ

ತೆಗೆದುಕೊಳ್ಳದಿರುವುದನ್ನು ಏನೆಂದು ಅರ್ಥಮಾಡಿಕೊಳ್ಳಬೇಕು?

ಆರಂಭದಲ್ಲಿ ಕೊಲೆ ತನಿಖೆಯನ್ನು ಕೈಗೆತ್ತಿಕೊಂಡಿದ್ದ ದೆಹಲಿ ಪೊಲೀಸ್ ಮತ್ತು ಸಿಬಿಐನ ಮೊದಲನೆ ತಂಡ ಒಂದೂವರೆ ವರ್ಷವಾದರೂ ಕೊಲೆಗಡುಕರನ್ನು ಪತ್ತೆ ಮಾಡುವಲ್ಲಿ ವಿಫಲವಾದಾಗ ಹೊಸ ಮತ್ತು ಎರಡನೆ ಸಿಬಿಐ ತಂಡವನ್ನು ರಚಿಸಿ ಅದಕ್ಕೆ ಈ ಜವಾಬ್ದಾರಿಯನ್ನು ಕೊಡಲಾಯಿತು. ಈ ತಂಡದ ಮುಖ್ಯಸ್ಥನಾಗಿದ್ದವನು ಎ.ಜಿ.ಎಲ್.ಕೌಲ್ ಎಂಬಾತ.

ಈ ಕೌಲ್‌ಗೆ ಗುಮಾನಿ ಇದ್ದದ್ದು ಸಂಪೂರ್ಣವಾಗಿ ತಲ್ವಾರ್ ದಂಪತಿಗಳ ಮೇಲೆಯೇ. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ಆದರೆ ಆತ ಅವರಿಬ್ಬರನ್ನು ಈ




ಹೇಮರಾಜ್ ಕೊಲೆಯಾದ ಜಾಗ

ಕೇಸಿನಲ್ಲಿ ಫಿಟ್ ಮಾಡಲೆಂದೇ ತೆಗೆದುಕೊಂಡ ಕ್ರಮಗಳಿವೆಯಲ್ಲ, ಅವೇ ಎಂಥವರಲ್ಲಾದರೂ ಭಯ ಹುಟ್ಟಿಸುವಂತಹದ್ದು.

ಯಾವುದಾದರೊಂದು ಕೊಲೆಯನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಲು 'ಮೋಟಿವ್' (ಉದ್ದೇಶ) ಮತ್ತು 'ಎವಿಡೆನ್ಸ್' (ಪುರಾವೆ) ಇರಬೇಕು. ಆರುಷಿ ಪ್ರಕರಣದಲ್ಲಿ ತಲ್ವಾರ್ ದಂಪತಿಗಳ ವಿರುದ್ಧ ಇವೆರಡೂ ಇರಲಿಲ್ಲವಾದ್ದರಿಂದ ಅವುಗಳ 'ಸೃಷ್ಟಿ'ಯ ಕಾರ್ಯ ಪ್ರಾರಂಭವಾಯಿತು.

ಜೋಡಿ ಕೊಲೆಯಾದ ನಂತರ ಆರುಷಿಯ ಪೋಸ್ಟ್ ಮಾರ್ಟಮ್ ಮಾಡಿದ್ದ ಘಾಜಿಯಾಬಾದಿನ ಜಿಲ್ಲಾ ಆಸ್ಪತ್ರೆಯ ವೈದ್ಯ ಸುನೀಲ್ ದೋಹ್ರೆ ತನ್ನ ವರದಿಯಲ್ಲಿ ಆರುಷಿ ಮೇಲೆ ಯಾವುದೇ ಲೈಂಗಿಕ ಹಲ್ಲೆ ನಡೆದಿರಲಿಲ್ಲ ಎಂದು ಹೇಳಿದ್ದ. ಅದಾದಮೇಲೆ ಪ್ರತ್ಯೇಕ ತನಿಖೆ ನಡೆಸಿದ ಏಮ್ಸ್ ವೈದ್ಯರ ತಂಡದಲ್ಲೂ ಈ ದೋಹ್ರೆ ಇದ್ದು ಆ ತಂಡವೂ ಆರುಷಿಯ ಮೇಲೆ ಆಕೆ ಕೊಲೆಯಾದ ರಾತ್ರಿ ಲೈಂಗಿಕ ದಾಳಿ ನಡೆದಿರಲಿಲ್ಲವೆಂದೂ, ಆಕೆ ಆ ಹಿಂದೆಯೂ ಯಾವುದೇ ಲೈಂಗಿಕ ಕ್ರಿಯೆಯಲ್ಲಿ ತೊಡಗಿರಲಿಲ್ಲವೆಂದು ಹೇಳಿದ್ದ. ಜೊತೆಗೆ ಆರುಷಿಯ ಕತ್ತನ್ನು ಹರಿತವಾದ ಚಾಕುವಿನಿಂದ ಕತ್ತರಿಸಲಾಗಿತ್ತು ಎಂದು ತನ್ನ ವರದಿಯಲ್ಲಿ ಹೇಳಿದ್ದ. ಮಾತ್ರವಲ್ಲ ಪೊಲೀಸರ ಮತ್ತು ಸಿಬಿಐ ತಂಡದ ಮುಂದೆಯೂ ದೋಹ್ರೆ ಇದನ್ನೇ ಹಲವಾರು ಬಾರಿ ಹೇಳಿದ್ದ.



ಕೊಲೆ ಮಾಡಿದ್ದರೆ ತನಿಖೆಗೆ ಯಾಕೆ ಒತ್ತಾಯಿಸುತ್ತಿದ್ದರು?

ಘಾಜಿಯಾಬಾದ್ ನ್ಯಾಯಾಲಯ ತೀರ್ಪು ನೀಡಿರುವಂತೆ ನಿಜವಾಗಲೂ ತಲ್ವಾರ್ ದಂಪತಿಗಳೇ ತಮ್ಮ ಮಗಳನ್ನು ಮತ್ತು ಕೆಲಸದಾಳನ್ನು ಕೊಂದಿದ್ದರೆ ಅವರೇ ಯಾಕೆ ತನಿಖೆ ಕುರಿತಂತೆ ಪೊಲೀಸರು 'ಅಪರಾಧಿಗಳು ಪತ್ತೆಯಾಗಿಲ್ಲ' ಎಂಬ ಕ್ಲೋಶರ್ ರಿಪೋರ್ಟ್‌ಅನ್ನು ನ್ಯಾಯಾಲಯಕ್ಕೆ ಸಲ್ಲಿಸಬಾರದು, ಬದಲಾಗಿ ತನಿಖೆಯನ್ನು ಮುಂದುವರೆಸಿ ಕೊಲೆಗಡುಕರನ್ನು ಹಿಡಿಯಬೇಕೆಂದು ಒತ್ತಾಯ ಮಾಡುತ್ತಿದ್ದರು?

ಹೀಗೆ ಒತ್ತಾಯ ಮಾಡಿದ್ದರಿಂದಲೇ ಇವತ್ತು ಪೊಲೀಸರು ತಲ್ವಾರ್ ದಂಪತಿಗಳ ವಿರುದ್ಧವೇ ಕಪೋಲಕಲ್ಪಿತ ಸಾಕ್ಷ್ಯಗಳನ್ನು ನೀಡಿ ಅವರೇ ಜೈಲು ಪಾಲಾಗುವಂತೆ ಮಾಡಿದ್ದಾರೆ.

ಇದು ನ್ಯಾಯವೇ?

ಆದರೆ ಆರುಷಿಗೂ, ಹೇಮರಾಜನಿಗೂ ಅಕ್ರಮ ಸಂಬಂಧ ಇತ್ತು ಎಂದೂ, ಮತ್ತು ಈ ಕಾರಣಕ್ಕೇ ಅವರಿಬ್ಬರನ್ನು ರಾಜೇಶ್ ಮತ್ತು ನುಪೂರ್ ಕೊಲೆ ಮಾಡಿದರು ಎಂದೂ ನ್ಯಾಯಾಲಯದ ಮುಂದೆ ಸಾಬೀತುಪಡಿಸುವುದು ಹೇಗೆ? ಪೊಲೀಸ್ ಅಧಿಕಾರಿ ಕೌಲ್‌ನ ಮರ್ಮ ಇರುವುದೇ ಇಲ್ಲಿ.

ಕೌಲ್ ತನಿಖೆಯನ್ನು ಪ್ರಾರಂಭಿಸಿದ ನಂತರ ದೋಹ್ರೆಯ ರಾಗವೇ ಬದಲಾಯಿತು. ಆರುಷಿಯ ಗುಪ್ತಾಂಗವನ್ನು ನೋಡಿದಾಗ ಆಕೆಗೆ ಲೈಂಗಿಕ ಅನುಭವ ಇತ್ತೆಂದು ಗೊತ್ತಾಗುವಂತಿದ್ದೆಂತೂ, ಆಕೆಯ ಗುಪ್ತಾಂಗದ ಹತ್ತಿರ ಬಿಳಿ ದ್ರವ ಇತ್ತೆಂದೂ ಹೇಳಿದ. ಅದಕ್ಕಿಂತ ಆಘಾತಕಾರಿಯಾಗಿ ಆರುಷಿಯ ಕತ್ತನ್ನು ಚಾಕುವಿನಿಂದ ಅಲ್ಲ ಬದಲಾಗಿ ವೈದ್ಯರು ಶಸ್ತ್ರ ಚಿಕಿತ್ಸೆಗೆ ಬಳಸುವ ಸ್ಕಾಲ್‌ಪೆಲ್ ಉಪಯೋಗಿಸಿ ಕತ್ತರಿಸಲಾಗಿತ್ತು ಎಂದು ಹೇಳಲಾರಂಭಿಸಿದ. (ವಾಸ್ತವವಾಗಿ ಅವರಿಬ್ಬರ ಕತ್ತನ್ನು ಎಷ್ಟು ಆಳವಾಗಿ ಕತ್ತರಿಸಲಾಗಿತ್ತೆಂದರೆ ಅದು ದೊಡ್ಡ ಚಾಕುವಿನಿಂದ ಮಾತ್ರ ಸಾಧ್ಯವಿತ್ತೇ ಹೊರತು ಸ್ಕಾಲ್‌ಪೆಲ್‌ನಂತಹ ಚಿಕ್ಕ ಚಾಕುವಿನಿಂದ ಸಾಧ್ಯವೇ ಇರಲಿಲ್ಲ. ಹಾಗೆಯೇ ಸಾಮಾನ್ಯರಿಗೂ ಗೊತ್ತಿರುವಂತೆ ವೈದ್ಯರು ಉಪಯೋಗಿಸುವ ಸ್ಕಾಲ್‌ಪೆಲ್ ಹಿಡಿದು ಚರ್ಮವನ್ನು ಕತ್ತರಿಸಬಹುದೇ ಹೊರತು ಆಳವಾಗಿಯಲ್ಲ.)

ಹೇಮರಾಜನ ಪೋಸ್ಟ್ ಮಾರ್ಟಮ್ ಮಾಡಿದ್ದ ಗೌತಮ್ ಬುದ್ಧ್ ನಗರದ ಜಿಲ್ಲಾಸ್ಪತ್ರೆಯ ವೈದ್ಯ ನರೇಶ್ ರಾಜ್ ಎಂಬಾತ ಕೂಡ ಕೌಲ್ ಎಂಟ್ರಿಯ ನಂತರ ತನ್ನ ರಾಗ-ಬದಲಿಸಿದ. ಈ ಹಿಂದೆ ಇದೇ ನರೇಶ್, ಕೊಲೆ ನಡೆದಾಗ ಹೇಮರಾಜ್ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲವೆಂದೂ, ಆತನ ಕತ್ತನ್ನು ಕುಯ್ಯಲು ಕುಕ್ರಿ ತರಹದ ಚಾಕುವನ್ನು ಬಳಸಿರಬಹುದು ಎಂದು ಹೇಳಿದ್ದ. ಆದರೆ ಕೌಲ್ ಅವರ 'ಪ್ರಭಾವ'ಕ್ಕೆ ಮಣಿದ ನರೇಶ್ ಕೂಡ ಹೇಮರಾಜನ ಗುಪ್ತಾಂಗ ಊದಿಕೊಂಡಿದ್ದರಿಂದ ಆತ ಕೊಲೆಯಾಗುವ ಮುನ್ನ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದ ಎಂದೂ, ಆತನ ಕತ್ತು ಕುಯ್ಯಲು ಸ್ಕ್ಯಾಲ್‌ಪೆಲ್ ಬಳಸಲಾಗಿತ್ತು ಎಂದೂ ತನ್ನ ವಾದವನ್ನೇ ಬದಲಾಯಿಸಿದ.

ಇದೆಲ್ಲದರಷ್ಟೇ ಮುಖ್ಯವಾದ ಪ್ರಶ್ನೆ ಕೊಲೆ ಮಾಡಲು ಉಪಯೋಗಿಸಿದ ವಸ್ತು ಯಾವುದು? ದೋಹ್ರೆ ಮತ್ತು ನರೇಶ್ ಅವರ ಹೇಳಿಕೆಗಳ ಪ್ರಕಾರ ಕೊಲೆ ಮಾಡಲು ಒಂದು ಬಲವಾದ ಮೊಂಡು ವಸ್ತುವನ್ನು ಬಳಸಲಾಗಿತ್ತು ಮತ್ತು ಕತ್ತುಗಳನ್ನು ಕುಯ್ಯಲು ವೈದ್ಯರು ಬಳಸುವ ಸ್ಕ್ಯಾಲ್‌ಪೆಲ್ ಉಪಯೋಗಿಸಲಾಗಿತ್ತು. ಆದರೆ ಇಲ್ಲಿಯವರೆಗೂ ಯಾವ ಸ್ಕ್ಯಾಲ್‌ಪೆಲ್‌ಅನ್ನೂ ಪೊಲೀಸರು ಪತ್ತೆ ಹಚ್ಚಿಲ್ಲ ಅಥವಾ ತಲ್ವಾರ್ ದಂಪತಿಗಳಿಂದ ವಶಪಡಿಸಿಕೊಂಡಿಲ್ಲ.

ಇನ್ನು ಕೊಲೆ ಮಾಡಲು ಉಪಯೋಗಿಸಿದ ಮೊಂಡು ವಸ್ತು ಯಾವುದು?

ಪೊಲೀಸರ ಪ್ರಕಾರ ರಾಜೇಶ್ ಅವರ ಗಾಲ್ಫ್ ಸ್ಟಿಕ್. ಈ ಸ್ಟಿಕ್‌ನ ಹಿಂದೆಯೂ ಒಂದು ಕಪೋಲಕಲ್ಪಿತ ಕತೆ ಇದೆ.

ವಿವಿಧ ಬಗೆಯ ಗಾಲ್ಫ್ ಸ್ಟಿಕ್‌ಗಳಿಗೆ ವಿವಿಧ ಅಂಕಗಳನ್ನು ಕೊಟ್ಟಿರುತ್ತಾರೆ. ಹವ್ಯಾಸಿ ಗಾಲ್ಫ್ ಆಟಗಾರರಾದ ರಾಜೇಶ್ ಅಂತಹ ಸ್ಟಿಕ್‌ಗಳಲ್ಲಿ ನಾಲ್ಕು ಮತ್ತು ಐದನೆ ನಂಬರ್‌ನ ಸ್ಟಿಕ್‌ಗಳನ್ನು ತಮ್ಮ ಕಾರ್‌ನಲ್ಲಿ ಇಟ್ಟುಕೊಂಡಿರುತ್ತಿದ್ದರು. ಕೊಲೆ ನಡೆಯುವ ಕೆಲವು ದಿನಗಳ ಹಿಂದೆ ಕಾರ್ ಅನ್ನು ಸರ್ವಿಸ್‌ಗೆ ಕೊಡಬೇಕಿದ್ದರಿಂದ ಅವರ ಡ್ರೈವರ್ ಅವುಗಳನ್ನು ಕಾರಿನಿಂದ ತೆಗೆದು ಹೇಮರಾಜನ ರೂಮಿನಲ್ಲಿ ಇಟ್ಟಿದ್ದ. ಕೊಲೆಯಾದಾಗ ಆ ಎರಡು ಸ್ಟಿಕ್‌ಗಳಲ್ಲಿ ಒಂದು ನಾಪತ್ತೆಯಾಗಿದ್ದರಿಂದ ಅದನ್ನೇ ಕೊಲೆಗಡುಗರು ಉಪಯೋಗಿಸಿದ್ದರು ಎಂದು ಕೌಲ್ ತರ್ಕಿಸಲಾರಂಭಿಸಿದ.

ಮಗಳು ಕೊಲೆಯಾದ ನಂತರ ಆ ಮನೆಯಲ್ಲಿ ವಾಸ ಮುಂದುವರಿಸಲು ಇಚ್ಛಿಸದ ತಲ್ವಾರ್ ದಂಪತಿಗಳು ಹಲವಾರು ತಿಂಗಳುಗಳ ನಂತರ ತಮ್ಮ ವಾಸ್ತವ್ಯವನ್ನು ಇನ್ನೊಂದು ಮನೆಗೆ ಸ್ಥಳಾಂತರಿಸಿದರು. ಆಗ ಅಟ್ಟದ ಮೇಲೆ ಇದ್ದ ಗಾಲ್ಫ್ ಸ್ಟಿಕ್ ಸಿಕ್ಕಿತ್ತು.

ಕೊಲೆ ನಡೆದು ಒಂದೂವರೆ ವರ್ಷಗಳ ನಂತರ ಗಾಲ್ಫ್ ಸ್ಟಿಕ್‌ಗಳನ್ನು ಕೊಡಬೇಕೆಂದು ಸಿಬಿಐ ಕೇಳಿತು. ಮಾರನೆ ದಿನವೇ ರಾಜೇಶ್ ಇಡೀ ಸೆಟ್ ಅನ್ನು ಪೊಲೀಸರಿಗೆ ಒಪ್ಪಿಸಿದರು. ಆನಂತರ ಪೊಲೀಸರು ತಮ್ಮ ವರದಿಯಲ್ಲಿ ಐದನೆ ನಂಬರ್ ಸ್ಟಿಕ್ ಅನ್ನು ಉಪಯೋಗಿಸಿ ಕೊಲೆ ಮಾಡಲಾಗಿತ್ತು ಎಂದು ದಾಖಲಿಸಿದರು. ಆದರೆ ತಮ್ಮ ಕ್ಲೋಶರ್ ರಿಪೋರ್ಟ್‌ನಲ್ಲಿ ಮೂರನೆ ನಂಬರ್ ಸ್ಟಿಕ್‌ಅನ್ನು ಕೊಲೆಯಲ್ಲಿ ಬಳಸಲಾಗಿತ್ತು ಎಂದು ಪೊಲೀಸರೇ ದಾಖಲಿಸಿದ್ದರು. ತಜ್ಞರು ಎಲ್ಲಾ ಗಾಲ್ಫ್ ಸ್ಟಿಕ್‌ಗಳನ್ನು ಪರೀಕ್ಷಿಸಿದಾಗ ಯಾವುದರ ಮೇಲೂ ರಕ್ತದ ಕಲೆಗಳು ಕಂಡುಬಂದಿರಲಿಲ್ಲ! ಅಂದರೆ ಪೊಲೀಸರಿಗೆ ಯಾವ ಸ್ಟಿಕ್ ಬಳಸಲಾಗಿತ್ತು ಎಂಬುದರ ಬಗ್ಗೆಯೇ ಗೊಂದಲವಿತ್ತು ಮಾತ್ರವಲ್ಲ ತಜ್ಞರ ಪ್ರಕಾರ ಅವು ಯಾವುವನ್ನೂ ಕೊಲೆಗೆ ಉಪಯೋಗಿಸಲಾಗಿರಲಿಲ್ಲ!

ಇಲ್ಲಿ ಇನ್ನೊಂದು ಮುಖ್ಯ ಪ್ರಶ್ನೆ ಉದ್ಭವಿಸುತ್ತದೆ. ಹಾಗೊಮ್ಮೆ ರಾಜೇಶ್ ಗಾಲ್ಫ್ ಸ್ಟಿಕ್ ಅನ್ನು ಬಳಸಿ ತನ್ನ ಮಗಳು ಮತ್ತು ಕೆಲಸದಾಳನ್ನು ಕೊಂದಿದ್ದರೆ ಅವರು ಯಾಕೆ ಅವುಗಳನ್ನು ಪೊಲೀಸರಿಗೆ ನೀಡುತ್ತಿದ್ದರು?

ಈ ಇಡೀ ಪ್ರಕರಣದಲ್ಲಿ ಮುಖ್ಯವಾಗಿರುವ ಒಂದು ಅಂಶ ಯಾವುದೆಂದರೆ ರಕ್ತದ ಕಲೆಗಳು.

ಮೊದಲನೆಯದಾಗಿ, ಕೊಲೆ ನಡೆದ ದಿನ ರಾಜೇಶ್ ಮತ್ತು ನೂಪುರ್ ಅವರ ಬಟ್ಟೆಗಳ ಮೇಲೆ ಆರುಷಿಯ ರಕ್ತದ ಕಲೆಗಳಿದ್ದವೇ ಹೊರತು ಹೇಮರಾಜನದ್ದಲ್ಲ. ಆ ರಕ್ತದ ಕಲೆಗಳೂ ಅವರ ಬಟ್ಟೆಗೆ ಅಂಟಿಕೊಂಡಿದ್ದು ಅವರು ತಮ್ಮ ಮಗಳ ಶವವನ್ನು ಎತ್ತಿಕೊಂಡಾಗ.

ಎರಡನೆಯದಾಗಿ ಹೇಮರಾಜನ ರಕ್ತದ ಕಲೆಗಳು ಮನೆಯ ಯಾವ ಭಾಗದಲ್ಲೂ ಪತ್ತೆ ಆಗಿರಲಿಲ್ಲ.

ಮೂರನೆಯದಾಗಿ ಹೇಮರಾಜನ ರಕ್ತದ ಕಲೆ ಇದ್ದ ದಿಂಬಿನ ಕವರ್ ಒಂದು ಪತ್ತೆಯಾಗಿದ್ದು ತಲ್ವಾರ್ ದಂಪತಿಗಳ ಮನೆಯಲ್ಲಲ್ಲ, ಬದಲಾಗಿ ಹೇಮರಾಜನ ಮಿತ್ರ ಕೃಷ್ಣನ ಮನೆಯಲ್ಲಿ!

ಅದು ಹೇಗೆ ಹೇಮರಾಜನ ರಕ್ತದ ಕಲೆ ಕೃಷ್ಣನ ಮನೆಯಲ್ಲಿತ್ತು ಎಂಬುದನ್ನು ಪೊಲೀಸರು ತನಿಖೆ ಮಾಡಲೇ ಇಲ್ಲ!!

ಇಬ್ಬರು ವೈದ್ಯರು ಬದಲಾಯಿಸಿದ್ದ ಹೇಳಿಕೆಗಳು ಮತ್ತು ಪೊಲೀಸರು ನೀಡಿದ ಸುಳ್ಳು ಸಾಕ್ಷಿಗಳು ನ್ಯಾಯಾಲಯದ ಮುಂದೆ ತಲ್ವಾರ್ ದಂಪತಿಗಳ ವಿರುದ್ಧ 'ಮೋಟಿವ್' ಮತ್ತು 'ಎವಿಡೆನ್ಸ್' ಆಗಿ ಅವರಿಗೆ ಈಗ ಜೀವಾವಧಿ ಶಿಕ್ಷೆ ಸಿಗುವಂತಾಗಿದೆ.

ಈಗ ಹೇಳಿ, 'ನಿಜವಾಗಲೂ ಆರುಷಿಯನ್ನು ಕೊಂದದ್ದು ಯಾರ್ ಗೊತ್ತಾ?' ಎಂಬ ಪ್ರಶ್ನೆಗೆ ನಿಮ್ಮಲ್ಲಿ ಮೂಡುವ ಉತ್ತರ ಯಾವುದು? ■

ಹುಬ್ಬಳ್ಳಿ: ಬಿಜೆಪಿಗಳು ಕಸ ತಿಂದರು- ರಸ್ತೆ ನುಂಗಿದರು!

"ಸಿಗಬಾರದವರ ಕೈಯಲ್ಲಿ ಅಧಿಕಾರ ಸಿಕ್ಕರೆ ಆಗುವುದೇ ಹೀಗೆ" ಎನ್ನುವ ಗಾದೆ ಮಾತು ನಿಜವಾಗಿದೆ. ಈ ಹಿಂದೆ ಒಮ್ಮೆ ಬಿಜೆಪಿಗೆ ಚಾನ್ಸ್ ಕೊಟ್ಟು ನೋಡೋಣ ಎಂದು ಮತ ಹಾಕಿದ ಜನರಿಗೆ ಓಡಾಡುವ ರಸ್ತೆಗಳೇ ಮಾಯವಾಗಿ, ಬಿಜೆಪಿಗಳು ಕಸವನ್ನೂ ಸಹ ಬಿಡದೇ ತಿಂದು ಎದ್ದು ಹೋಗಿರುವುದನ್ನು ಕಂಡು ಶಾಕ್ ಆಗಿದೆ.

ಇದು ಹುಬ್ಬಳ್ಳಿ-ಧಾರವಾಡ ನಗರಗಳ ಕತೆ. ಕಮಲ ಪಕ್ಷ ರಾಜ್ಯಭಾರ ಮಾಡಿದ 2008 ರಿಂದ 2013 ರ 5 ವರ್ಷದ ಇತಿಹಾಸವನ್ನು ಈಗ ಹುಡುಕಿ ನೋಡಿದರೆ ಇಲ್ಲಿ ರಸ್ತೆಯೂ ಇಲ್ಲ, ಕಸ ಎತ್ತಿ ಹಾಕಿರುವ ಕುರುಹೂ ಕಾಣುತ್ತಿಲ್ಲ. ಬಿಜೆಪಿ ಅಧಿಕಾರದ ಅವಧಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಗಳ ರಸ್ತೆ ನಿರ್ಮಾಣಕ್ಕೆ ಬರೋಬ್ಬರಿ ಖರ್ಚು ಮಾಡಿದ್ದು 156 ಕೋಟಿ. ಇನ್ನು ಕಸವನ್ನೇ ರಸವೆಂದು ಹೀರಿದ್ದು ಬರೋಬ್ಬರಿ 136 ಕೋಟಿ. ಇಂದು ಮೋದಿ ಆರಿಸಿ "ಭಾರತ ಗೆಲ್ಲಿಸಿ" ಎಂದು ಕೂಗಾಡುತ್ತಿರುವವರು ನಗರಕ್ಕೆ ಕರುಣಿಸಿದ ಭಾಗ್ಯ.

ಕರ್ನಾಟಕದ ರಾಜ್ಯಭಾರ ಸಾಕಾಗಿ ಕೇಂದ್ರಭಾರ ಹೊರಲು ತಯಾರಿ ನಡೆಸುತ್ತಿರುವ ಇವರಿಗೆ ರಾಜ್ಯದ ಪ್ರತಿ ರೈತರು ವಲ್ಲಭಾಯ್ ಪಟೇಲ ಪ್ರತಿಮೆ ನಿರ್ಮಾಣಕ್ಕಾಗಿ ಕಬ್ಬಿಣ ಕೊಡಬೇಕಂತೆ! ಈಗಾಗಲೇ ರಾಮಮಂದಿರ ನಿರ್ಮಾಣದ ಹೆಸರಲ್ಲಿ ಇಟ್ಟಿಗೆ ಸಂಗ್ರಹದಿಂದ ಎತ್ತಿರುವ ಹಣ ಕರಗಿದೆ. ಚಡ್ಡಿಗಳು ಈಗ ಕಬ್ಬಿಣ ಸಂಗ್ರಹಿಸಲು ಹೊರಟಿದ್ದಾರೆ.


ಪಾಪ ಜನಾರ್ದನ ರೆಡ್ಡಿ ಜೈಲಿನಲ್ಲಿ ಇರದೇ ಹೊರಗಿದ್ದರೆ, ಅಷ್ಟೂ ಕಬ್ಬಿಣ ನಾನೇ ಕೊಡುತ್ತೇನೆ ಪಟೇಲ ಮುತ್ಥಳಿ ಸ್ಥಾಪಿಸಿ ಅದರಲ್ಲಿ ನನ್ನ ಹೆಸರಿರಲಿ ಅಂತಾ ಹೇಳುತ್ತಿದ್ದನೋ ಏನೋ?




ಜಗದೀಶ್ ಶೆಟ್ಟರ್



ನಾರಾಯಣ್



ಎಸ್. ಮುತ್ತಣ್ಣವರ್



ಪ್ರಹ್ಲಾದ್ ಜೋಶಿ

ರಸ್ತೆಗೆ- ಕಸಕ್ಕೆ ಸುರಿದ ಹಣ

ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ನಗರಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ನಿರ್ಮಾಣಕ್ಕೆಂದು ಯಾವ ಯಾವ ಬಾಬ್ತಿನಿಂದ ಹಣ ಬಳಕೆಯಾಯಿತೆಂಬ ವಿವರಗಳು ಹೀಗಿವೆ.

ರಸ್ತೆ ಕಾಮಗಾರಿಗಾಗಿ ಐದು ವರ್ಷಗಳಲ್ಲಿ ಬಳಕೆ ಮಾಡಿದ ಹಣದ ವಿವರ (ಕೋಟಿ ರೂ.ಗಳಲ್ಲಿ)

ಅನುದಾನ	2008-09	2009-10	2010-11	2011-12	2012-13	ಒಟ್ಟು
ಸಾಮಾನ್ಯ ನಿಧಿ	5.05	05.40	05.48	11.47	-	27.41
ಎಸ್ಎಫ್‌ಸಿ	10.2	09.52	04.92	09.03	-	24.50
12ನೇ ಹಣಕಾಸು ಯೋಜನೆ	05.25	11.7	-	-	-	01.70
13ನೇ ಹಣಕಾಸು ಯೋಜನೆ	-	-	01.71	33.7	-	03.54
ಸಿಆರ್‌ಎಫ್	-	21.32	00.65	-	-	21.97
ಒಟ್ಟು 06.60	37.42	11.24	23.87	-	79.14	
100 ಕೋಟಿ ವಿಶೇಷ ಅನುದಾನ	-	42.26	-	-	-	42.26
ಎರಡನೇ 100 ಕೋಟಿ ವಿಶೇಷ ಅನುದಾನ	-	-	-	25.61	-	25.61
ವಿಶೇಷ ಅನುದಾನ	-	-	-	-	09.00	09.00
ಒಟ್ಟು	06.60	79.68	11.24	49.48	09.00	156.01

ಯಡ್ಡಿ ಹಂಚಿದ ಪ್ರಸಾದ

2008 ರಲ್ಲಿ ಬಿಜೆಪಿಯ ಪ್ರಥಮ ಮುಖ್ಯಮಂತ್ರಿಯಾಗಿ ಯಡ್ಡಿ ಅಧಿಕಾರಕ್ಕೆ ಬಂದಾಗ ತನ್ನ ಮನೆಯ ಆಸ್ತಿಯನ್ನು ಹಂಚಿದಂತೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ 100 ಕೋಟಿ ವಿಶೇಷ ಅನುದಾನವನ್ನು ದಯಪಾಲಿಸಿದ.

2004-05 ರಲ್ಲಿ ಪಾಲಿಕೆಯ ಆಯುಕ್ತರಾಗಿದ್ದ ಪಿ. ಮಣಿವಣ್ಣನ್ ಅವಧಿಯಲ್ಲಿ 30 ಕೋಟಿ ರೂಪಾಯಿ ವೆಚ್ಚದಲ್ಲಿ ಹುಬ್ಬಳ್ಳಿ ಪ್ರಮುಖ ರಸ್ತೆಗಳ ನಿರ್ಮಾಣ ಹಾಗೂ ಫುಟ್‌ಪಾತ್‌ಗಳು ತಲೆ ಎತ್ತಿದ್ದ ದೊಡ್ಡ ಯೋಜನೆ ಆಗಿತ್ತು. ಈ ರಸ್ತೆಗಳು ಸುಮಾರು ವರ್ಷಗಳ ಕಾಲ ಸುಸ್ಥಿತಿಯಲ್ಲಿದ್ದವು. ಮಣಿವಣ್ಣನ್ ಅವಧಿಯಲ್ಲಿಯೇ ಹುಬ್ಬಳ್ಳಿ ಧಾರವಾಡ ಮಹಾನಗರಗಳ ಜನಸಂಖ್ಯೆ ಮುಂದಿನ 30 ವರ್ಷಗಳಲ್ಲಿ ಎಷ್ಟಾಗಬಹುದೆಂದು ಗಮನದಲ್ಲಿಟ್ಟುಕೊಂಡು ಯುಜಿಡಿ ಕಾಮಗಾರಿ (ಒಳಚರಂಡಿ ವ್ಯವಸ್ಥೆ) ಯೋಜನೆ ರೂಪಗೊಂಡು ಅಂತಿಮ ಹಂತಕ್ಕೆ ಬಂದು ನಿಂತಿತ್ತು. ನಂತರ ಮಣಿವಣ್ಣನ್ ಹಾಗೂ ಜಿಲ್ಲಾಧಿಕಾರಿ ಶ್ರೀಕರ ವರ್ಗಾವಣೆಯಾಗಿ ಈ ಫೈಲು ಮೂಲೆ ಸೇರಿತು. ಆಗ ಇದೇ ಜಗದೀಶ ಶೆಟ್ಟರ್ ವಿರೋಧ ಪಕ್ಷದಲ್ಲಿದ್ದರು. ಬಿಜೆಪಿ ಯಾವಾಗ ಅಧಿಕಾರಕ್ಕೆ ಬಂದಿತೋ ಆಗ ಯಡ್ಡಿ ದಯಪಾಲಿಸಿದ ವಿಶೇಷ ಅನುದಾನ ಹಾಗೂ ಮಹಾನಗರ ಪಾಲಿಕೆಯ ವಿವಿಧ ಅನುದಾನಗಳನ್ನು ಬಳಕೆ ಮಾಡಿಕೊಂಡು ಪ್ರತಿ ವರ್ಷ ಸರಾಸರಿ 30 ಕೋಟಿ ರೂಪಾಯಿ ತಂದು ರಸ್ತೆ ಕಾಮಗಾರಿಗೆ ಸುರಿದರು. ಮುಂದೆ ಇದೇ ರಸ್ತೆ ಅಗೆದು ಯುಜಿಡಿ ಕಾಮಗಾರಿ ಕೈಗೆತ್ತಿಕೊಳ್ಳುವ ಕೆಲಸಕ್ಕೆ ಕೈಹಾಕಿದ್ದು ಇದೇ ಮಾಜಿ ಮುಖ್ಯಮಂತ್ರಿ ಶೆಟ್ಟರ್. ಇದಕ್ಕಾಗಿ ತನಗೆ ಅನುಕೂಲ ಕಲ್ಪಿಸಿ ಕೊಡುವ ಜಿಲ್ಲಾಧಿಕಾರಿಯಾಗಿ ದರ್ಪಣ ಜೈನ್‌ನನ್ನು ಧಾರವಾಡಕ್ಕೆ, ಮಹಾನಗರ ಪಾಲಿಕೆಗೆ ಆಯುಕ್ತರಾಗಿ ಪಾಟೀಲರಂತಹವರನ್ನು ಆಯ್ದು ಕುಳ್ಳರಿಸಿ ರಸ್ತೆಗೆಂದು 156 ಕೋಟಿ ಸುರಿದರು. ನಂತರ ಅದೇ ರಸ್ತೆಗಳಲ್ಲಿ ಯುಜಿಡಿ ಕಾಮಗಾರಿಗಾಗಿ ಕೋಟ್ಯಾಂತರ ರೂಪಾಯಿ ಸುರಿದು ಹಳೆಯ ರಸ್ತೆ ಇಲ್ಲದಂತೆ ಮಾಡಿದ್ದ ಶೆಟ್ಟರ್ ಸಾಧನೆ.

ಹುಬ್ಬಳ್ಳಿ-ಧಾರವಾಡ ಅವಳಿನಗರಗಳಲ್ಲಿ ಹಿಂದಿನ 5 ವರ್ಷಗಳಲ್ಲಿ ವಕ್ಕರಿಸಿದ್ದ ಕಮಲ ಶಾಸಕ ವೀರಭದ್ರಪ್ಪ ಹಾಲಹರವಿ, ಚಂದ್ರಕಾಂತ ಬೆಲ್ಲದ ಹಾಗೂ ಶೆಟ್ಟರ್ ಪರಸ್ಪರ ಸಹಕಾರ ನೀಡಿ ಅವಳಿ ನಗರಗಳನ್ನು ಗುಡಿಸಿ ಸ್ವಚ್ಛಗೊಳಿಸಿದ್ದಾರೆ.

ಕಸದಿಂದ ರಸ ಹೀರಿದವರು

ಕಳೆದ 20 ವರ್ಷಗಳಿಂದ ಪೌರ ಕಾರ್ಮಿಕರ ಹಾಗೂ ಗುತ್ತಿಗೆ ಕಾರ್ಮಿಕರ ಸಂಖ್ಯೆಯೇನು ಬದಲಾವಣೆ ಆಗಿಲ್ಲ. ಆದರೆ, ಕಳೆದ 5 ವರ್ಷಗಳ ಅವಧಿಯಲ್ಲಿ ಕಸ ವಿಲೇವಾರಿಗೆ ಮಾಡಿರುವ ವೆಚ್ಚ ಮಾತ್ರ ಹೆಚ್ಚಾಗಿದೆ. ಇದಕ್ಕೇ ಅನ್ನುವದು ಕಸದಿಂದ ರಸ ತೆಗೆಯುವುದು ಎಂದು. ಹೀಗೆ ಕಸದಿಂದ ರಸ ಹೀರಿದ ಮಾಜಿ ಮುಖ್ಯಮಂತ್ರಿ ಯಾನೆ ಮಾಮು ಶೆಟ್ಟರ, ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ, ಚಂದ್ರಕಾಂತ ಬೆಲ್ಲದ, 5 ವರ್ಷಗಳ ಅವಧಿಗೆ ಪಾಲಿಕೆಯಿಂದ ಖಾಲಿ ಮಾಡಿಸಿದ್ದು 136 ಕೋಟಿ ರೂಪಾಯಿ. ಇದು ಗುತ್ತಿಗೆದಾರರ ಹಾಗೂ ಮಾಜಿಗಳ ಜುಗಲ ಬಂದಿಯಿಂದ ಆದ ಕಾರ್ಯ.

11 ಲಕ್ಷ ಜನ ಸಂಖ್ಯೆ ಹೊಂದಿರುವ ಅವಳಿ ನಗರ ಮಹಾನಗರ ಪಾಲಿಕೆಯು 1983 ರಿಂದ 1990 ರ ವರೆಗೆ ಕಸ ವಿಲೇವಾರಿಗೆ ಒಟ್ಟು 16 ಕೋಟಿ ಖರ್ಚು ಮಾಡಿದ್ದರೆ, 1990 ರಿಂದ 2000 ಇಸವಿವರೆಗೆ 70 ಕೋಟಿ ಖರ್ಚು ಮಾಡಿದೆ. 2001 ರಿಂದ 2008 ರ ವರೆಗೆ ವರ್ಷಕ್ಕೆ ಸರಾಸರಿ 10 ಕೋಟಿಯಂತೆ 70 ಕೋಟಿ ಖರ್ಚು ಮಾಡಿದ್ದಾರೆ. ಆದರೆ ಬಿಜೆಪಿಗಳು ಮಹಾನಗರ ಪಾಲಿಕೆಯ ಆಡಳಿತ ಚುಕ್ಕಾಣಿ ಹಿಡಿಯುತ್ತಿದ್ದಂತೆ 2008-09 ರಲ್ಲಿ 21 ಕೋಟಿ ಹಾಗೂ 2012-13 ರಲ್ಲಿ 31.68 ಕೋಟಿ ಖರ್ಚು ಮಾಡಿದ್ದು ದಾಖಲೆಯಾಗಿದೆ. ಆದರೆ, ಅವಳಿ ನಗರಗಳಲ್ಲಿಯ ಕಸವನ್ನು ಸ್ವಚ್ಛಗೊಳಿಸುತ್ತಿರುವುದು ಈಗಲೂ ಕೂಡ ಹಂದಿಗಳೇ!

ಪುಢಾರಿಗಳಿಗೆ ಕಸದಿಂದಲೂ ರಸ, ಹಂದಿಗಳಿಗೆ ಮಾತ್ರ ಕಸ ಹಾಗೂ ಜನರಿಗೆ ಮೋಸ ಎಂಬುದೇ ಈ ಡೀಲ್‌ನ ಸಾರಾಂಶವಾಗಿದೆ.

■ ಹುಬ್ಬಳ್ಳಿಯಾಂವ್

ರಾಜ್ಯಾಧ್ಯಕ್ಷ ಜೋಶಿ ಕುರ್ಚಿಗೆ ಕೆನರಾ ಬ್ಯಾಂಕ್ ಮಸಿ

ಸಂಸದ ಹಾಗೂ ಬಿಜೆಪಿಯ ರಾಜ್ಯಾಧ್ಯಕ್ಷ ಹುದ್ದೆ ಹೊಂದಿರುವ ಪ್ರಹ್ಲಾದ ಜೋಶಿ ಕುರ್ಚಿಗೆ ಕಪ್ಪು ಮಸಿ ಬಡಿದಿದೆ. ಬಡಿದಿದ್ದು ಬೇರ್‍ಯಾರೂ ಅಲ್ಲ ಸ್ವತಃ ಸಹೋದರ ಗೋಪಾಲ ಜೋಶಿ. ಈತ ಕೆಲಸಕ್ಕಿದ್ದ ಕೆನರಾ ಬ್ಯಾಂಕಿನ ಹಣವನ್ನೇ ದುರುಪಯೋಗಪಡಿಸಿಕೊಂಡಿದ್ದು ಈಗ ಸಿಬಿಐ ಕುಣಿಕೆ ಈತನ ಕುತ್ತಿಗೆಗೆ ಸುತ್ತಿದೆ. ಈತನ ಎಲ್ಲಾ ವಂಚಕ ಕಾರ್ಯಾಚರಣೆಗಳು ನಡೆದಿದ್ದು ಸಂಸದ ಪ್ರಹ್ಲಾದ ಜೋಶಿಯ ಸರಕಾರಿ ಕಚೇರಿಯಿಂದ. ಅದಕ್ಕಾಗಿ ಫ್ಯಾಕ್ಸ್ ಹಾಗೂ ಫೋನ್‌ಗಳು ಬಳಕೆಯಾಗಿವೆ. ಇದರಿಂದಾಗಿ ಕೆನರಾ ಬ್ಯಾಂಕ್‌ಗೆ ನಷ್ಟ ಉಂಟಾಗಿದ್ದು ಬರೋಬ್ಬರಿ 1.08 ಕೋಟಿ ರೂಪಾಯಿ!

ಠೇವಣಿ ಇಟ್ಟ ಸರಕಾರಿ ಸಂಸ್ಥೆಗಳು	ಬ್ಯಾಂಕಿಗೆ ಆದ ಅಂದಾಜು ನಷ್ಟ ರೂ. ಗಳಲ್ಲಿ
* ರಾಜೀವ ಗಾಂಧಿ ಆರೋಗ್ಯ ವಿವಿ	1,08,55,844
* ಮೈಸೂರ ಮಿನರಲ್ಸ್ ಲಿ.	ನಮೂದಿಸಿಲ್ಲ
* ಕರ್ನಾಟಕ ಬೆವರೇಜಿಸ್ ಲಿ.	8,14,499
* ಮೆಸರ್ಸ್ ಹಟ್ಟಿ ಗೋಲ್ಡ್ ಮೈನ್ಸ್ ಲಿ.	50,701
* ಬೆಂಗಳೂರು ಮೆಟ್ರೊಪಾಲಿಟಿನ್ ರೀಜನಲ್ ಡೆವಲಪ್‌ಮೆಂಟ್ ಅಥಾರಿಟಿ (ಬಿಎಂಆರ್‌ಡಿಎ)	16,35,350
* ಜೀವವಿಮಾ ನಿಗಮ (ಎಲ್‌ಐಸಿ)	5,21,000
(ಠೇವಣಿ ಮೊತ್ತ 200 ಕೋಟಿ ರೂ.)	

ಈ ಠೇವಣಿ ಹಣ ಬಹುತೇಕ ರಾಜ್ಯ ಸರಕಾರಿ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳದ್ದೇ ಆಗಿವೆ. ಠೇವಣಿ ಹಣವನ್ನು ಅದರ ಬಡ್ಡಿ ದರವನ್ನು ತಿದ್ದುಪಡಿ ಮಾಡಿ 3ನೇ ವ್ಯಕ್ತಿಗಳ ಖಾತೆಗೆ ವರ್ಗಾವಣೆ ಮಾಡಿದ್ದು ಇದೇ ಗೋಪಾಲ ಜೋಶಿ. ಇದಕ್ಕೆ ಸಹಕಾರ ನೀಡಿದ್ದು ಸಂಸದ ಜೋಶಿ. 2009 ಹಾಗೂ 2010 ರಲ್ಲಿ ಗೋಪಾಲ ಜೋಶಿ ಧಾರವಾಡದ ಕೆನರಾ ಬ್ಯಾಂಕಿನಲ್ಲಿ ಮಾರುಕಟ್ಟೆ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದ. ಗೋಪಾಲ ಜೋಷಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್ 120/ಬಿ, 420, 467, 471 ಹಾಗೂ 1988 ರ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಸೆಕ್ಷನ್ 13 (2), 13 (1) ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮೊಕದ್ದಮೆ ದಾಖಲಿಸಲಾಗಿದೆ. ಇದರಲ್ಲಿ ಸಂಸದ ಪ್ರಹ್ಲಾದ ಜೋಶಿಯ ಅಧಿಕೃತ ಕಚೇರಿ ಬಳಕೆ ಕುರಿತು ಉಲ್ಲೇಖವಿದೆ.

ಕೆಲವು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಬೆಂಗಳೂರು ಬಿಟ್ಟು ಧಾರವಾಡದ ಕೆನರಾ ಬ್ಯಾಂಕಿನಲ್ಲಿ ಠೇವಣಿ ಹಣ ಇಡುವ ಹಿಂದೆ ಜೋಶಿ ಕೈ ಕೆಲಸ ಮಾಡಿದೆ. ಈ ಅಕ್ರಮದಲ್ಲಿ ಅವನ ಕಚೇರಿಯೇ ಬಳಕೆಯಾಗಿದ್ದರೂ ನನಗೂ ಇದಕ್ಕೂ ಸಂಬಂಧವಿಲ್ಲ ಎನ್ನುವದು ಜೋಶಿಗೆ ಮಾಮೂಲಿಯಾಗಿ ಬಿಟ್ಟಿದೆ. ಜಿಮಖಾನಾ ಕ್ಲಬ್ ಸದಸ್ಯತ್ವ ವಿಚಾರದಲ್ಲಿ ಕೂಡಾ ಶೆಟ್ಟರ, ಜೋಶಿ ಈ ಮಾತನ್ನು ಹೇಳಿದ್ದರು ಎನ್ನುವದನ್ನು ಜನ ಮರೆತಿಲ್ಲ.

ಮೂರು ಬಿಟ್ಟು ನಿಂತವರಿಗೆ ಇನ್ನೇನು ತಾನೇ ಸಾಧ್ಯ!

ಮೋದಿ ರ್‍ಯಾಲಿ ಹೆಸರಿನಲ್ಲಿ ಎತ್ತಿದ ಹಣ

ಮೋದಿ ರ್‍ಯಾಲಿ ಹೆಸರಲ್ಲಿ ಕೋಟ್ಯಾನುಗಟ್ಟಲೇ ಹಣ ಎತ್ತಿದ ಚಡ್ಡಿಗಳಿಗೆ ಅದೇ ಹೆಸರಿನಲ್ಲಿ ಹಣ ಎತ್ತುತ್ತಿದ್ದ ಪ್ರಮೋದ ಮುತಾಲಿಕನ ಮೇಲೆ ಸಿಟ್ಟು ಬಂದಿತ್ತು. ಮುತಾಲಿಕನ ವಿರುದ್ಧ ದಾವೆ ಹೂಡುವುದಾಗಿ ಬಿಜೆಪಿ ರಾಜ್ಯ ಅಧ್ಯಕ್ಷ ಜೋಶಿ ಹಾಗೂ ಮಹಾನಗರ ಅಧ್ಯಕ್ಷ ಲಿಂಗರಾಜ ಪಾಟೀಲ ಹೇಳಿದ್ದಾರೆ. ಆದರೆ ಮುತಾಲಿಕ ತಿರುಗಿ ಬಿದ್ದು ರಸ್ತೆಯಲ್ಲಿ ನಿಮ್ಮ ಮಾನ ಹರಾಜು ಹಾಕುವುದಾಗಿ ಗುಟರಿದ್ದಾನೆ. ""ರಾಜ್ಯಕ್ಕೆ ಮುತಾಲಿಕ ರಾಷ್ಟ್ರಕ್ಕೆ ಮೋದಿ" ಎಂದರೆ ನಿಮಗೇನು ನಷ್ಟ ಅಂತಾ' ಮುತಾಲಿಕ ಚಂದಾ ಎತ್ತಿದ್ದಲ್ಲದೆ, 'ನೀವು ಮಾಡಿದ್ದನ್ನು ನಾನು ಮಾಡಿದರೆ ತಪ್ಪೇನು' ಎನ್ನುತ್ತಿದ್ದಾನೆ. ಈಗ ಲಿಂಪಾ, ಜೋಶಿ ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ.

ಬಿಜೆಪಿ ಕಾರ್ಪೋರೇಟರ್‌ಗಳ ಕಮಾನು ಶೌಕಿ

ತಮ್ಮದೇ ಸರಕಾರ, ತಮ್ಮದೇ ಮಹಾನಗರ ಪಾಲಿಕೆ ಹಾಗಾಗಿ ಮಾಡಿದ್ದೆ ಕಾಮಗಾರಿ ಆಡಿದ್ದೇ ಆಟ.

ಇದು ಕಳೆದ 5 ವರ್ಷಗಳಲ್ಲಿ ಬಿಜೆಪಿ ಕಾರ್ಪೋರೇಟರುಗಳು ವರ್ತಿಸಿದ ರೀತಿ. ಯಾವುದು ಮಾಡಬೇಕೋ ಅದನ್ನು ಬಿಟ್ಟು ಮಾಡಬಾರದ್ದನ್ನು ಮಾಡಿ ಅದಕ್ಕೆ ಶಾಶ್ವತವಾಗಿರಲೆಂದು ತಮ್ಮ ಹೆಸರನ್ನು ಇಟ್ಟಿದ್ದಾರೆ.

ಮಹಾನಗರ ಪಾಲಿಕೆಯು ಸದಸ್ಯರ ವಾರ್ಡಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ಹಣ ಮೀಸಲಿಡುತ್ತದೆ. ರಸ್ತೆ ಗಟಾರು, ಸಾರ್ವಜನಿಕ ಶೌಚಾಲಯ, ಒಳಚರಂಡಿ ಕಾಮಗಾರಿ ಕೈಕೊಳ್ಳಿ ಎಂದರೆ, ಬಿಜೆಪಿ ಕಾರ್ಪೋರೇಟರ್‌ಗಳಾದ ನಾರಾಯಣ ಜರತಾರಘರ ಮತ್ತು ಶಿವಾನಂದ ಮುತ್ತಣ್ಣವರ ಓಣಿಗೊಂದರಂತೆ ಮಹಾದ್ವಾರ (ಕಮಾನು) ನಿರ್ಮಿಸಿದ್ದಾರೆ.

ಪಾಲಿಕೆಯ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬರುವ ಘಂಟಿಕೇರಿ ಓಣಿ, ಜೋಳದ ಓಣಿ, ಮಂಗಳವಾರ ಪೇಟ, ಶಾಂತಿನಿಕೇತನ ಕಾಲೋನಿ, ಕರ್ಕಿ ಬಸವೇಶ್ವರ ನಗರಗಳು ಸೇರಿದಂತೆ ಒಟ್ಟು ನಾಲ್ಕು ಮಹಾದ್ವಾರ ನಿರ್ಮಿಸಿದ್ದಾರೆ. 28 ಲಕ್ಷ ರೂಪಾಯಿ ಖರ್ಚು ಮಾಡಿ ಮಹಾದ್ವಾರ ನಿರ್ಮಿಸಿ ತಮ್ಮ ಹೆಸರನ್ನು ಹಾಕಿಕೊಂಡಿರುವ ಜರತಾರಘರ ಮತ್ತು ಮುತ್ತಣ್ಣವರಗೆ ಜನ ಛೀ ಥೂ ಅನ್ನುತ್ತಿದ್ದಾರೆ.

"ಕಮಲದ ಕೈಗೆ ಅಧಿಕಾರ ಕಮಾಯಿಗೆ ಅಧಿಕಾರ" ಎನ್ನುವುದಕ್ಕೆ ಇನ್ಯಾವ ಪುರಾವೆಗಳು ಬೇಕು.



ಮಂಗಳೂರು ವಿ.ವಿಯಲ್ಲಿ ಹೀಗೊಂದು ಇಂಟರ್‌ವ್ಯೂ ಎಂಬ ನಾಟಕ ಮತ್ತು ಹಿಂಸೆ

ಕನ್ನಡ ಪ್ರೊಫೆಸರ್ ಪೋಸ್ಟಿಗಾಗಿ ನಡೆದ ಇಂಟರ್‌ವ್ಯೂ ಅದು. ಸಂದರ್ಶನಕ್ಕೆ ಮೂರು ದಿನ ಮೊದಲು ಒಂದು ರಾತ್ರಿಯ ಯಾವುದೋ ಹೊತ್ತಲ್ಲದ ಹೊತ್ತಿನಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ಒಂದು ಇ-ಮೇಲ್ ಬಂದಿತ್ತು. ನಾನು ಆ ಮಾರನೆಯ ದಿನವೆಲ್ಲ ಏನೋ ಕೆಲಸದ ಬಿಜಿಯಲ್ಲಿ ಮೇಲ್‌ಗಳನ್ನು ಚೆಕ್ ಮಾಡಲು ಹೋಗಿರಲಿಲ್ಲವಾದ್ದರಿಂದ ನೋಡಿರಲಿಲ್ಲ. ಎರಡು ದಿನಗಳ ನಂತರ ಅದನ್ನು ನೋಡುವ ಹೊತ್ತಿಗೆ ಯೂನಿವರ್ಸಿಟಿಯಿಂದ ಒಂದು ಫೋನ್ ಕರೆಯೂ ಬಂತು. 'ನೀವು ಕನ್ನಡ ಪ್ರೊಫೆಸರ್ ಪೋಸ್ಟಿಗೆ ಅರ್ಜಿ ಸಲ್ಲಿಸಿದ್ದೀರಿ. 26ರ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ನಿಮಗೆ ಇಂಟರ್‌ವ್ಯೂ ಇರುತ್ತದೆ, ಬರಬೇಕು' ಎಂದು. ಆಯ್ತು ಎಂದೆ. ಸಂದರ್ಶನಕ್ಕೆಂದು ಹೊರಟು ನಿಂತ ಗಳಿಗೆಯಲ್ಲಿ ಅಂಚೆಯ ಮೂಲಕ ಕೂಡ ಒಂದು ಪತ್ರ ಬಂತು. ಇ-ಮೇಲ್‌ನಲ್ಲಿ ಕಳಿಸಿದ್ದ ಇಂಟರ್‌ವ್ಯೂ ಪತ್ರದಲ್ಲಿ ಸಂದರ್ಶನಕ್ಕೆ ಅರ್ಜಿಯ ಜೊತೆ ಹಾಕಿದ್ದ ಏನೆಲ್ಲಾ ತರಬೇಕು ಎನ್ನುವುದರ ಜೊತೆಗೆ 'ನಿಮ್ಮ ಸೇವಾ ಅನುಭವ ಪ್ರಮಾಣಪತ್ರಕ್ಕೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕೌಂಟರ್ ಸಹಿಯೂ ಇರಬೇಕು' ಎಂದಿತ್ತು. ಸಂದರ್ಶನಕ್ಕೆ ಹೊರಡಲು ಉಳಿದಿದ್ದ ಎರಡು ದಿನಗಳಲ್ಲಿ ಒಂದು ದಿನ ಭಾನುವಾರ ಆಗಿದ್ದು, ಅದರ ಮರುದಿನ ಸೋಮವಾರ ಜಂಟಿ ನಿರ್ದೇಶಕರು ಯಾವುದೋ ಮೀಟಿಂಗ್ ಮೇಲೆ ಹೊರಗೆ ಹೋಗಿದ್ದರು. ಏನು ಮಾಡುವುದೆಂದು ತೋಚಲಿಲ್ಲ.

ಕಚೇರಿಯಲ್ಲಿ ಸಹಿಗಾಗಿ ಅಹವಾಲಿನೊಂದಿಗೆ ಅನುಭವ ಪ್ರಮಾಣಪತ್ರಗಳನ್ನು ಸಲ್ಲಿಸಿ, ಸಲ್ಲಿಸಿದ್ದಕ್ಕೆ ದಾಖಲೆಯನ್ನು ಪಡೆದು ಸಂದರ್ಶನದಲ್ಲಿ ತೋರಿಸಿದರೆ ಆಗುತ್ತದೆ. ಮುಂದಿನ ಬೆಳವಣಿಗೆಯಲ್ಲಿ ಜಂಟಿ ನಿರ್ದೇಶಕರಿಂದ ರುಜುವಾದ ಮೇಲೆ ಮೂಲ ಪ್ರತಿಗಳನ್ನು ತೋರಿಸಿದರೆ ಆಯಿತು ಎನ್ನುವ ಗೆಳೆಯರೊಬ್ಬರ ಸಲಹೆಯಂತೆ ಮುಂದುವರೆದೆ. ಕಚೇರಿಯಲ್ಲಿದ್ದ ಆ ಪ್ರಕ್ರಿಯೆಯ ಹೊಣೆ ಹೊತ್ತ ಅಧಿಕಾರಿಯು 'ಜಂಟಿ ನಿರ್ದೇಶಕರ ಸಹಿ ಬೇಕಾದಲ್ಲಿ ನೀವು ಕೆಲಸ ಮಾಡಿದ ಕಾಲೇಜಿನಿಂದ ನಿಮ್ಮ ಹಾಜರಾತಿ ಮತ್ತು ಅಕ್ವಿಟೆನ್ಸ್ (ಸಂಬಳದ ದಾಖಲೆ) ದಾಖಲೆಯ ನಕಲುಗಳನ್ನು ಸಲ್ಲಿಸಬೇಕು' ಎಂದರು. ಇದೆಲ್ಲಕ್ಕೆ ಹತ್ತರಿಂದ ಹದಿನೈದು ದಿನಗಳ ಸಮಯ ಬೇಕಾಗುತ್ತದೆ ಎನ್ನುವುದರ ಅರಿವಾಯಿತು. ಅಲ್ಲಿಯೂ ಕೂಡ, ಸಂದರ್ಶನದ ನಂತರವೇ ದಾಖಲೆಗಳನ್ನು ಸಲ್ಲಿಸುತ್ತೇನೆ, ದೃಢೀಕೃತ ಸಹಿಗಾಗಿ ಕೋರಿಕೆಯನ್ನು ಸಲ್ಲಿಸಿರುವುದಕ್ಕೆ ಗುರುತನ್ನು ನೀಡಿ, ನೀಡದೆ ಹೋದಲ್ಲಿ ದೃಢೀಕರಣವನ್ನು ರದ್ದುಪಡಿಸಬಹುದು ಎಂದು ಬರೆದುಕೊಟ್ಟು ಸಲ್ಲಿಸಿದ್ದಕ್ಕೆ ಗುರುತಿನ ದಾಖಲೆಯನ್ನು ಪಡೆದು ಸಂದರ್ಶನಕ್ಕೆ ಬಸ್ಸು ಹತ್ತಿದೆ. ಮನಸಿನ ತುಂಬಾ ಒತ್ತಡದ ಇಕ್ಕಟ್ಟು ಮಾತ್ರವೇ ತುಂಬಿಕೊಂಡಿತ್ತು.

ಮಂಗಳವಾರ ಬೆಳಗ್ಗೆ ಒಂಬತ್ತೂವರೆಯ ಹೊತ್ತಿಗೆ ಮಂಗಳಗಂಗೋತ್ರಿಯ ಕುಲಪತಿಯವರ ಕಚೇರಿಯ ಬಳಿ ಕನ್ನಡ ಪ್ರೊಫೆಸರ್ ಹುದ್ದೆಗಾಗಿ ಸಂದರ್ಶನಕ್ಕೆಂದು ಐದು ಜನ ಇದ್ದೆವು. ಈ ಐದು ಜನರನ್ನು ಮಾತ್ರವೇ ಎಲಿಜಬಲ್ ಕ್ಯಾಂಡಿಡೇಟ್ಸ್ ಎಂದು ಸಂದರ್ಶನಕ್ಕೆ ಕರೆಯಲಾಗಿತ್ತು ಕೂಡ. ಮೊದಲಿಗೆ ನಾವು ಎಲಿಜಬಿಲಿಟಿಯನ್ನು ಸಾಬೀತುಪಡಿಸಲು ಸಲ್ಲಿಸಿದ್ದ ಮೂಲ ದಾಖಲೆಗಳ ಪರಿಶೀಲನೆ. ಪರಿಶೀಲಕರಾಗಿ ಕನ್ನಡ ವಿಭಾಗದವರೇ ಆದ ಡೀನ್ ಪ್ರೊ. ಚಿನ್ನಪ್ಪಗೌಡರು, ವಿಭಾಗದ ನಿರ್ದೇಶಕರು ಪ್ರೊ.ಸಬಿಹ ಭೂಮಿಗೌಡ ಮತ್ತು ಅದೇ ಯೂನಿವರ್ಸಿಟಿಯ ಅರ್ಥಶಾಸ್ತ್ರ ವಿಭಾಗದ ಪ್ರೊ.ವಿಶ್ವನಾಥ್ ಇದ್ದರು. ಈ ಪರಿಶೀಲನೆಯು 2010ರ ಯುಜಿಸಿ ನಿಯಮಾವಳಿಗಳ ಪ್ರಕಾರ ನಡೆಯುವಂತಹುದು. ಆದರೆ ಪರಿಶೀಲನೆಗೆ ಬೇಕಾದ ಪರಿಕರಗಳು ಮತ್ತು ತಯಾರಿ ಅಲ್ಲಿದ್ದ ಪರಿಶೀಲಕ ಸಮಿತಿಯಲ್ಲಿ ಕಾಣಲಿಲ್ಲ. ಹೊರಗಿನಿಂದ ಬಂದಿದ್ದ ಎಕ್ಸ್‌ಪರ್ಟ್‌ಗಳೂ ಅಲ್ಲೇ ಕೂತಿದ್ದರು.

ಒಬ್ಬರು ಬಿಳಿ ಹಾಳೆ ಮತ್ತು ಪೆನ್ನು ಹಿಡಿದು ಪಾಯಿಂಟ್ಸ್ ಗುರುತು ಮಾಡಿಕೊಳ್ಳಲು ಕೂತಿದ್ದರೆ, ಇನ್ನೊಬ್ಬರು ನಮ್ಮಲ್ಲಿದ್ದ ದಾಖಲೆಗಳನ್ನು ಹಿಡಿದು ಯಾವುದಕ್ಕೆ ಎಷ್ಟು ಪಾಯಿಂಟ್ಸ್ ಎಂದು ಹೇಳುವುದು ನಡೆದಿತ್ತು. ಮಾರ್ಕೆಟ್ಟಿನಲ್ಲಿ ತರಕಾರಿ ಹರಾಜು ಹಾಕುವಾಗಲಾದರೂ ಒಂದು ನಿಯಮವಿರುತ್ತದೆ. ಆದರೆ ಇಲ್ಲಿ ನೆಪಕ್ಕೆ ಮಾತ್ರ ಯುಜಿಸಿ ನಿಯಮಗಳನ್ನು ಅನುಸರಿಸುತ್ತಿರುವಂತೆ ತೋರಿಸಿಕೊಂಡು ತಮಗೆ ಇಚ್ಛೆ ಬಂದಂತೆ ಪಾಯಿಂಟುಗಳನ್ನು ತೀರ್ಮಾನಿಸಿ ಹೇಳುವುದು ನಡೆದಿತ್ತು. ಅದನ್ನು ಸರಿಯಾಗಿ ಗುರುತು ಮಾಡಿಕೊಳ್ಳುವುದೂ ಕೆಲವೊಮ್ಮೆ ತಪ್ಪಿ ಹೋಗುವಾಗ ಅವರ ಗಮನಕ್ಕೆ ತಂದರೂ ಅವರು ಅದನ್ನು ಕೇಳುವವರಾಗಿರಲಿಲ್ಲ. ಅವರ ಎಣಿಕೆ ದಿಕ್ಕು ತಪ್ಪಿರುವುದು ನಿಚ್ಚಳವಾಗಿ ಕಾಣುತ್ತಿತ್ತು. ಯಾವುದನ್ನು ಕೂಡಿದರು, ಯಾವುದನ್ನು ಕಳೆದರು, ಯಾವುದಕ್ಕೆ ಎಷ್ಟು ಪಾಯಿಂಟುಗಳನ್ನು ಕೊಡಬೇಕಾಗಿತ್ತು, ಎಷ್ಟನ್ನು ಕೊಟ್ಟರು, ಯಾಕೆ ಕೊಡದೆ ಬಿಟ್ಟರು ಈ ಯಾವುದಕ್ಕೂ ಯುಜಿಸಿ ನಿಯಮಗಳು ಇದ್ದಂತೆ ಕಾಣಲಿಲ್ಲ. ಯುಜಿಸಿ ನಿಯಮಗಳ ನೆಪದಲ್ಲಿ ಅವರದೇ ನಿಯಮಗಳಿದ್ದವು. ಅವರ ಲೆಕ್ಕಾಚಾರದ ಪ್ರಕಾರ ನಮಗೆ ಎಷ್ಟು ಪಾಯಿಂಟುಗಳಿವೆ, ಯಾಕೆ ಇಷ್ಟಿದೆ ಎನ್ನುವುದನ್ನು ನಮ್ಮ ಗಮನಕ್ಕೂ ತರಬಾರದೆನ್ನುವಷ್ಟು ತರಾತುರಿಯಲ್ಲಿ ಈ ಅಸೆಸ್‌ಮೆಂಟ್ ನಡೆದುಹೋಗಿತ್ತು. ನಮ್ಮಲ್ಲಿ ಕೆಲವರಿಗೆ ಎಲಿಜಬಿಲಿಟಿ ಇಲ್ಲದಿರುವಂತೆ ಮಾಡುವ ಯೋಜನೆ ಆ ಹೊತ್ತಿಗೆ ಮುಗಿದುಹೋಗಿತ್ತು. ಆದರೆ ಅದು ಆಗ ನಮಗೆ ತಿಳಿಯಲಿಲ್ಲ. ಆಮೇಲೆ ಕುಲಪತಿಯವರ ಚೇಂಬರಿನ ಬಾಗಿಲಲ್ಲಿ ಸಂದರ್ಶನಕ್ಕೆ ಕಾದೆವು.

ಮೊದಲಿಗೇ ಇದ್ದ ಪಿಹೆಚ್.ಡಿ ಮತ್ತು ಡಾ.ಎಂ.ಎಸ್. ಆಶಾದೇವಿಯವರ ಹೆಸರುಗಳನ್ನು ಕೂಗಿ ಕರೆಯಲಾಯಿತು. ಆ ಹೊತ್ತಿಗೆ ಉಳಿದ ಮೂರು ಜನಕ್ಕೆ ಸಂದರ್ಶನವನ್ನು ಮುಗಿಸಿ ಕಳಿಸಲಾಗಿತ್ತು. ಪ್ರೊಫೆಸರ್ ಹುದ್ದೆಗೆ ಸಂದರ್ಶನಕ್ಕೆ ಬೇಕಾದ 400 ಪಾಯಿಂಟುಗಳು ನಿಮಗೆ ಇಲ್ಲ ಎಂದು ಆಶಾದೇವಿಯವರನ್ನು ಮೊದಲಿಗೆ ಹೊರ ಕಳಿಸಲಾಯಿತು. ಎರಡನೆಯ ಸರದಿ ನನ್ನದು. ಇನ್ನೊಮ್ಮೆ ಪರಿಶೀಲಿಸಲು ಬೇಡಿಕೆಯಿಟ್ಟೆ. 'ಎಕ್ಸ್‌ಪರ್ಟ್ಸ್ ನಿಮ್ಮ ಎದುರಿನಲ್ಲೇ ಎಲ್ಲಾ ಮಾಡಿದ್ದಾರಲ್ಲಾ' ಎಂದು ಕುಲಪತಿಯವರು ನಿರಾಕರಿಸಿದರು. ಸುಮ್ಮನೆ ಹೊರಗೆ ಬರದೆ ಬೇರೇನೂ ದಾರಿಯಿರಲಿಲ್ಲ. ಸಂದರ್ಶನಕ್ಕೆ ಕರೆಯುವವರೆಗೆ ಎಲಿಜಿಬಲ್ಲಾಗಿದ್ದ ನಾವು ಈಗ ಹೊರಕ್ಕೆ ದಬ್ಬಲ್ಪಟ್ಟಿದ್ದೆವು.

ಹೀಗೆ ಯೂನಿವರ್ಸಿಟಿಗಳು ತರಾತುರಿಯಲ್ಲಿ ಅಪಾಯಿಂಟ್‌ಮೆಂಟುಗಳನ್ನು ನಡೆಸುತ್ತಿರುವುದೇಕೆ?

ತಮ್ಮ ತಮ್ಮ ಸಬ್ಜೆಕ್ಟುಗಳಲ್ಲಿ ದೊಡ್ಡದೊಡ್ಡ ವಿದ್ವಾಂಸರೇ ಆಗಿರುವ ಇವರು ತಮ್ಮ ಮೂಗಿನ ನೇರಕ್ಕೆ ಯುಜಿಸಿ ನಿಯಮಗಳನ್ನು ಬಳಸುತ್ತಿರುವುದನ್ನು ಸರಿ ಪಡಿಸುವವರು ಯಾರು?


ಯುಜಿಸಿ ನಿಯಮಗಳನ್ನು ಸರಿಯಾಗಿ ತಿಳಿಸಿ ಅದರಂತೆ ಸಮರ್ಥರಾಗಿ ನಡೆದುಕೊಳ್ಳುವಂತೆ ಮಾಡುವವರು ಯಾರು?

ನಮ್ಮಂತೆ ಕೆಲಸಗಳನ್ನು ಅರಸಿ ಬರುವವರನ್ನು ಗೊಂಬೆಗಳಂತೆ ಆಡಿಸಬಹುದೆನ್ನುವ ಈ ದೊಡ್ಡದೊಡ್ಡ ಪ್ರೊಫೆಸರರ ಮೂರ್ಖತನವನ್ನು ತಿಳಿಯ ಹೇಳುವವರು ಯಾರು?

ಹೀಗೆಲ್ಲಾ ಯೋಚಿಸುತ್ತಾ ಅಲ್ಲಿಂದ ಹೊರಕ್ಕೆ ಬರುವ ಹೊತ್ತಿಗೆ ಅಲ್ಲಿದ್ದ ಅನೇಕರ ಮಾತಿನಲ್ಲಿ ಯಾರು ಸೆಲೆಕ್ಟಾಗುತ್ತಾರೆನ್ನುವ ಮಾತು ಗಾಳಿಯಲ್ಲಿತ್ತು. ಅದರ ಹಿಂದಿನ ಹುನ್ನಾರ ಯಾರದು, ಯಾಕೆ ಎನ್ನುವುದರ ತರಾವರಿ ಲೆಕ್ಕಾಚಾರವೂ ಹರಿದಾಡುತ್ತಿತ್ತು. ಬಹುಮಟ್ಟಿನ ಎಲ್ಲಾ ಅಪಾಯಿಂಟ್‌ಮೆಂಟುಗಳ ಸಂಗತಿಯೂ ತನಿಖೆ, ಕೋರ್ಟು ಕಚೇರಿಯ ಬಾಗಿಲು ತಟ್ಟುತ್ತಿರುವ ಇವತ್ತಿನ ಸನ್ನಿವೇಶದಲ್ಲಿ ಇಂತಹ ಪ್ರಸಂಗಗಳನ್ನು ಯೂನಿವರ್ಸಿಟಿ ಜಂಟಲ್‌ಮನ್-ವುಮನ್‌ಗಳ 'ಹೊಣೆ' ಎನ್ನಬೇಕೋ? 'ವರಸೆ' ಎನ್ನಬೇಕೋ?

■ ಚಲಪತಿ

ಇಲ್ಲದ ರಾಜ್‌ಗೆ ಅಭಿಮಾನಿಗಳ ಸಂಘ!



ಸ್ವಾಭಿಮಾನ ಹೋರಾಟ ಅಭಿಮಾನ

ಡಾ|| ರಾಜ್‌ಕುಮಾರ್ ಕನ್ನಡ ಸೇನೆ (ರಿ)

ಅಭಿಮಾನಿಗಳ ಚಿಂತನ ಸಭೆ

ಗೋಕಾಕ್ ಚಳುವಳಿಗೆ [illegible] ರಾಜ್ ಬೀದಿಗಿಳಿದದ್ದು ಹೋರಾಟವೋ [illegible] ಹುಟ್ಟಿಕೊಂಡಿದ್ದು ರಾಜ್‌ಕುಮಾರ್ ಅಭಿಮಾನಿಗಳ ಸಂಘ. 80ರ [illegible] ಬೆಂಗಳೂರ[illegible] ರಾಜ್ ಅಭಿಮಾನಿಗಳ ಸಂಘದ

ಒಂದೇ ಒಂದು ಕರೆಗೆ ಲಕ್ಷಾಂತರ ಅಭಿಮಾನಿಗಳು ಬೀದಿಗಿಳಿಯುತ್ತಿದ್ದ ಕಾಲವಿತ್ತು. ನಾಡು-ನುಡಿಗಾಗಿ ಅವಿಸ್ಮರಣೀಯ ಎನಿಸುವಂತ ಹೋರಾಟಗಳಿಗೂ ರಾಜ್ ಅಭಿಮಾನಿಗಳೇ ಕಾರಣರಾದರು. ಅದೇನಾಯಿತೋ ಕಾಲಕ್ರಮೇಣ ಇಡೀ ಸಂಘವೇ ನಿಷ್ಕ್ರಿಯಗೊಂಡಿತು.



ಇವತ್ತಿಗೂ ಪ್ರಶ್ನೆಯಾಗೇ ಕಾಡುವುದೇನೆಂದರೆ ಇದ್ದಕ್ಕಿದ್ದಂತೆ ಸಂಘದಿಂದ ತಮ್ಮ ಹೆಸರನ್ನು ತೆಗೆದುಹಾಕಲು ರಾಜ್ ಕುಟುಂಬ ಹಠಕ್ಕೆ ಬಿದ್ದಿದ್ದಾದರೂ ಏಕೆ? ಅದು ಸಂಘದ ನಾಯಕತ್ವ ವಹಿಸಿದ್ದ ಸಾ.ರಾ. ಗೋವಿಂದು, ಟಿ. ವೆಂಕಟೇಶ್ ಮತ್ತು ದೇವೇಗೌಡರ ನಡುವಿನ ಜಾತಿಬಾಂಧವ್ಯದ ಅಡ್ಡ ಪರಿಣಾಮವೇ? ದೇವೇಗೌಡರ ಜೊತೆಗಿನ ಒಡನಾಟದ ಫಲವಾಗೇ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ವಿರುದ್ಧ ಅಭಿಮಾನಿಗಳನ್ನು ಅದರ ನಾಯಕತ್ವ ಎತ್ತಿಕಟ್ಟುತ್ತಿತ್ತೆ? ಸಂಘದ ನಾಯಕರ ಜಾತಿಯನ್ನೇ ನೆಪವಾಗಿಸಿಕೊಂಡ ಹೆಗಡೆ ಸಂಘದ ಹೋರಾಟಗಳಿಗೆಲ್ಲ ದೇವೇಗೌಡರೇ ಪ್ರೇರಣೆ ಎಂಬಂತೆ ರಾಜ್ ಕುಟುಂಬದ ದಿಕ್ಕು ತಪ್ಪಿಸಿದರೆ?

ಒಂದಂತೂ ಸತ್ಯ ತನ್ನ ಅಭಿಮಾನಿಗಳ ಸಂಘದ ಹೆಸರಲ್ಲಿ ಕೆಲವರು ರಾಜಕೀಯ ನಡೆಸುವುದು ಖುದ್ದು ರಾಜ್‌ಗೇ ಇಷ್ಟವಿರಲಿಲ್ಲ!

ಈಗ ಪರಿಸ್ಥಿತಿ ಬದಲಾಗಿದೆ. ನಿಷ್ಕ್ರಿಯಗೊಂಡ ರಾಜ್‌ಕುಮಾರ್ ಅಭಿಮಾನಿಗಳ ಸಂಘಕ್ಕೆ ಮತ್ತೆ ಜೀವಕೊಡುವ ಕಾರ್ಯಾಚರಣೆಯೊಂದು ಸದ್ದಿಲ್ಲದೆ ಶುರುವಾಗಿದೆ. ಈ ಹಿಂದೆ ರಾಜ್ ಅಭಿಮಾನಿಗಳ ವಲಯದಲ್ಲಿ ಸಾಕಷ್ಟು ಹೆಸರು ಗಳಿಸಿದ್ದ ಕೆಂಪಾಪುರ ಅಗ್ರಹಾರದ ಜ್ವಾಲಾಮುಖಿ ರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷ ಶೇಷಪ್ಪ, ಪ್ರಕಾಶ್ ನಗರದ ಚಿರ ಯುವಕ ರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷ ವಿ. ತ್ಯಾಗರಾಜ್ ಮತ್ತು ಬಿಬಿಎಂಪಿಯ ದೈತ್ಯ ಕಂಟ್ರಾಕ್ಟರ್ ಎಂ.ಎಸ್. ವೆಂಕಟೇಶ್ ಮುಂತಾದವರ ನೇತೃತ್ವದಲ್ಲಿ 'ಡಾ. ರಾಜ್‌ಕುಮಾರ್ ಕನ್ನಡ ಸೇನೆ' ಎಂಬ ಹೊಸ ಸಂಘಟನೆಯೊಂದು ತಲೆ ಎತ್ತಿದೆ.

ಯಾವುದೋ ಕಾಲಕ್ಕೆ ಅಸ್ತಿತ್ವದಲ್ಲಿದ್ದ ಬೆಂಗಳೂರಿನ 800ಕ್ಕೂ ಅಧಿಕ ರಾಜ್‌ಕುಮಾರ್ ಅಭಿಮಾನಿ ಸಂಘಗಳೂ ಸೇರಿದಂತೆ ರಾಜ್ಯಾದ್ಯಂತ ಒಟ್ಟು 145 ಹಳೆಯ ಸಂಘಗಳೆಲ್ಲ ಮರುಜೀವ ಪಡೆದಂತೆ ಹೊಸ ಸಂಘಟನೆಗೆ ಬೆಂಬಲ ಘೋಷಿಸಿವೆ. ಮೊನ್ನೆ ನವೆಂಬರ್ 1ರ ಕನ್ನಡ ರಾಜ್ಯೋತ್ಸವದ ದಿನದಂದು ಖುದ್ದು ಶ್ರೀರಾಂಪುರಕ್ಕೆ ಬಂದು ಕನ್ನಡ ಧ್ವಜ ಸ್ತಂಭಕ್ಕೆ ಅಡಿಗಲ್ಲಿಟ್ಟಿದ್ದೂ ಅಲ್ಲದೆ ಸಂಘದ ಕೇಂದ್ರ ಕಚೇರಿಯನ್ನೂ ಉದ್ಘಾಟಿಸಿದ್ದಾರೆ ರಾಜ್ ಪುತ್ರ ಶಿವಣ್ಣ. ಶಿವಣ್ಣ ಪರಮಾಪ್ತ ಚಿತ್ರ ನಿರ್ಮಾಪಕ ಶ್ರೀಕಾಂತ್ ಕೂಡ ಹೊಸ ಸಂಘಟನೆಯ ಬೆನ್ನಿಗೆ ನಿಂತಿದ್ದಾರೆ. ಇದೇ ಡಿಸೆಂಬರ್ 14ರಂದು ಕಾನಿಷ್ಕಾ ಹೋಟೆಲ್ ಆವರಣದಲ್ಲಿ ಅಭಿಮಾನಿಗಳ ಚಿಂತನ ಸಭೆ ಹಮ್ಮಿಕೊಂಡಿದ್ದು ನಲ್ಲೂರು ಪ್ರಸಾದ್, ಬರಗೂರು ರಾಮಚಂದ್ರಪ್ಪ ಥರದ ಹಿರೀಕರೇ ರಾಜ್ ಅಭಿಮಾನಿಗಳ ಸಂಘಟನೆಗೆ ಚಾಲನೆ ಕೊಡುತ್ತಿದ್ದಾರೆ.

ಪ್ರಶ್ನೆಯೆಂದರೆ ರಾಜ್ ಹೆಸರಿಗಿದ್ದ ಚುಂಬಕ ಶಕ್ತಿ ಇವತ್ತಿಗೂ ಉಳಿದಿದೆಯೆ? ವರನಟನೇ ಇಲ್ಲವೆಂದ ಮೇಲೆ ಅಭಿಮಾನಿಗಳಿಗೆ ಇನ್ನೆಂಥ ಪ್ರೇರಣೆ ಸಾಧ್ಯ? ರಾಜ್‌ಕುಮಾರ್ ಕನ್ನಡ ಸೇನೆ ಮತ್ತೊಂದು ಅಭಿಮಾನಿಗಳ ಸಂಘವಾಗುತ್ತಾ? ಅಥವಾ ಇದು ನಾರಾಯಣಗೌಡನ ರಕ್ಷಣಾ ವೇದಿಕೆಗೆ ಪರ್ಯಾಯವೆ? ಕಾದು ನೋಡಬೇಕಷ್ಟೆ!



ರಾಜ್ ಸಂಘ ಉದ್ಘಾಟನೆ ಸಂದರ್ಭ [illegible] ಶೇಷಪ್ಪ, ಸಾ.ರಾ. ಗೋವಿಂದು

ಜೈಲು ಅಧಿಕಾರಿಗಳ ಮೋಜು ಲೂಟಿ

ಬಲಿಯಾಗುತ್ತಿರುವ ಬಂಧಿಗಳೆಂಬ ಮನುಷ್ಯರ ಬದುಕು


ಗಗನ್‌ದೀಪ್

ಕಳೆದ ತಿಂಗಳು ಅಖಿಲ ಭಾರತ ಕಾರಾಗೃಹಗಳ ಇಲಾಖಾ ಮುಖ್ಯಸ್ಥರ ಸಮಾವೇಶವೊಂದು ನಡೆಯಿತು. ಆ ಸಮಾವೇಶದಲ್ಲಿ 'ಬಂಧಿಗಳ ಭವಿಷ್ಯದಲ್ಲಿ ಪುನರ್‌ವಸತಿಗಾಗಿ ಕಾರಾಗೃಹದಲ್ಲಿ ವಿನೂತನ ಕೈಗಾರಿಕೆಗಳು' ಎಂಬ ವಿಷಯದ ಬಗ್ಗೆಯೇ ಚರ್ಚೆ ನಡೆದು ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಕಳುಹಿಸಲಾಗಿದೆ. ಈ ಸಮಾವೇಶದಲ್ಲಿ ರಾಜ್ಯದ ಗೃಹಮಂತ್ರಿಗಳು ಪಾಲ್ಗೊಂಡು ಕಾರಾಗೃಹಗಳನ್ನು 21ನೇ ಶತಮಾನಕ್ಕೆ ತಕ್ಕಂತೆ ಬದಲಾಯಿಸಬೇಕಾಗಿದೆ ಎಂಬಂತಹ ಹೇಳಿಕೆ ನೀಡಿದರು.

ಇದಕ್ಕೂ ಮೊದಲು ಬೆಂಗಳೂರು ಕೇಂದ್ರ ಕಾರಾಗೃಹದಿಂದ ತಪ್ಪಿಸಿಕೊಂಡಿದ್ದ ಸೈಕೋ ಶಂಕರನ ಪ್ರಕರಣದ ಹಿನ್ನೆಲೆಯಲ್ಲಿ ಎಡಿಜಿಪಿ ಗೋಪಾಲ್ ಹೊಸೂರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಕಾರಾಗೃಹಗಳ ಭದ್ರತೆ ಕುರಿತು ವರದಿ ನೀಡಲು ನೇಮಿಸಲಾಗಿತ್ತು. ಈ ಸಮಿತಿ ಕೂಡ ಕಾರಾಗೃಹಗಳಲ್ಲಿನ ಭದ್ರತೆ ಕುರಿತಾಗಿ ವರದಿಯೊಂದನ್ನು ನೀಡಿ ತನ್ನ ಶಿಫಾರಸುಗಳನ್ನು ಮಾಡಿತ್ತು. ಅದರಂತೆ ತಾಗಿದರೆ ಮೂರ್ಛೆ ಹೋಗುವಂತಹ ರಾಸಾಯನಿಕವುಳ್ಳ ಬ್ಲೇಡ್‌ತಂತಿಗಳು ವಿದ್ಯುತ್ ಬೇಲಿಗಳನ್ನು ಕಾರಾಗೃಹಗಳ ಗೋಡೆಗಳ ಮೇಲೆ ಅಳವಡಿಸಲಾಗುತ್ತಿದೆ. ಸಿಸಿ ಟಿವಿ ಕ್ಯಾಮೆರಾಗಳನ್ನು ಹೆಚ್ಚಿಸಲಾಗುತ್ತಿದೆ. ಹೊರಗಿನಿಂದ ಊಟ ಬರುವುದನ್ನು ನಿರ್ಬಂಧಿಸಲಾಗುತ್ತಿದೆ.


ಹೊಸ ಸರ್ಕಾರ ರಚನೆಯಾದ ತಿಂಗಳಲ್ಲೆ ಮುಖ್ಯಮಂತ್ರಿ ನಡೆಸಿದ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಕಾರಾಗೃಹಗಳಲ್ಲಿನ ಅಕ್ರಮಗಳ ಕುರಿತು ಖುದ್ದು ಮುಖ್ಯಮಂತ್ರಿಯೇ ಪ್ರಸ್ತಾಪಿಸಿದ್ದರು. ಅಲ್ಲದೆ ಅಕ್ರಮ ಮೊಬೈಲ್ ಮೂಲಕ ಬೆದರಿಕೆ ಹಾಕಿ ಹಣ ಸುಲಿಯಲಾಗುತ್ತಿದೆ. ಹಿಂದೊಮ್ಮೆ ತಮಗೂ ಅಂತಹ ಕರೆಯೊಂದು ಬಂದಿತ್ತು ಎಂದಿದ್ದರು. ಇವನ್ನೇ ನೆಪ ಮಾಡಿಕೊಂಡು ಕಾರಾಗೃಹ ಇಲಾಖೆ ಸಕ್ರಮವಾಗಿ ಬಂಧಿಗಳಿಗೆ ಉಪಯೋಗಕ್ಕೆ ಇದ್ದ ಸ್ಥಿರ ದೂರವಾಣಿಗಳನ್ನೇ ಸ್ತಬ್ಧ ಮಾಡಿತು. ಈ ಸ್ಥಿರ ದೂರವಾಣಿಯಿಂದ ಎಲ್ಲಾ ಕರೆಗಳನ್ನು ರೆಕಾರ್ಡ್ ಮಾಡಿಟ್ಟುಕೊಳ್ಳಲಾಗುತ್ತಿತ್ತು. ಹೀಗಿದ್ದರೂ ಕಾರಾಗೃಹ ಇಲಾಖೆ ಅಕ್ರಮ ಮೊಬೈಲ್‌ಗಳನ್ನು ತಡೆಯುವ ಬದಲು ಸಕ್ರಮ ಸ್ಥಿರ ದೂರವಾಣಿಯನ್ನೇ 'ಬಂದ್' ಮಾಡಿ ತನ್ನ ಪರಾಕ್ರಮ ಮೆರೆಯಿತು. ಆದರೆ ಅಕ್ರಮವಾಗಿ ಮೊಬೈಲ್‌ಗಳ ಬಳಕೆ, ಸುಪಾರಿ ವ್ಯವಹಾರ, ಹಣಕಾಸು ವಹಿವಾಟು, ಕುದುರೆ ಜೂಜು, ಕ್ರಿಕೆಟ್ ಜೂಜು ನಡೆಸುವ ತಂಡಗಳ ಕೆಲಸಗಳಿಗೆ ಯಾವ ತಡೆಯೂ ಇಲಾಖೆ ಮಾಡಿಲ್ಲ ಎಂದು ಹೇಳುವುದೇ ಸೂಕ್ತ. 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ' ಎಳೆಯುವಂತಹ ಕೆಲಸಗಳನ್ನು ಕಾರಾಗೃಹ ಇಲಾಖೆ ಮಾಡುತ್ತಿದೆ. ಸ್ಥಿರ ದೂರವಾಣಿ ಬಂದ್ ಮಾಡಿದ್ದು, ಹೊರಗಿನ ಊಟ ನಿಲ್ಲಿಸಿದ್ದು ಇವೆಲ್ಲಾ ಸಾಮಾನ್ಯ ಬಂಧಿಗಳಿಗೆ ಮಾತ್ರ ತೊಂದರೆ ಮಾಡಿದೆಯೇ ಹೊರತು ಕಾಳಸಂತೆಕೋರರು; ಕ್ರಿಮಿನಲ್ ಡಾನ್‌ಗಳು, ಗ್ಯಾಂಗ್ ಲೀಡರ್‌ಗಳಿಗೆ ಯಾವ ರೀತಿಯಿಂದಲೂ ನಿರ್ಬಂಧಿಸಿಲ್ಲ ಎಂಬುದೇ ನಿಜ. ಇವರಲ್ಲಿ ಇಲಾಖೆಯ ಅಧಿಕಾರಿಗಳೇ ನೇರ ಶಾಮೀಲಾಗಿರುತ್ತಾರೆ ಎಂಬುದು ರಹಸ್ಯವೇನಲ್ಲ, ಸಾವಿರಾರು ರೂಪಾಯಿ ಹಣ ಪಡೆದು ಅಧಿಕಾರಿಗಳು ಇವಕ್ಕೆಲ್ಲಾ ಬೆಂಗಾವಲಾಗಿ ನಿಂತಿರುತ್ತಾರೆ. ಇಂತಹರಿಗೆ ನೀಡುವ ಕೊಠಡಿಯಿಂದ ಹಿಡಿದು ಪ್ರತಿಯೊಂದಕ್ಕೂ ವಾರ ಮತ್ತು ತಿಂಗಳುಗಳ ಲೆಕ್ಕದಲ್ಲಿ ಹಣವನ್ನು ಪಡೆಯಲಾಗುತ್ತದೆ. ಅದು 500 ರೂ.ಗಳಿಂದ ಹಿಡಿದು ಲಕ್ಷದವರೆಗೂ ಇದೆ.

ಆದರೆ ಕಾರಾಗೃಹಗಳಲ್ಲಿ ಬಹುಸಂಖ್ಯಾತರು ಸಾಮಾನ್ಯ ರೈತರು, ದಲಿತ ಹಿಂದುಳಿದ ವರ್ಗಗಳಿಂದ ಬಂದವರು, ಅಲ್ಪಸಂಖ್ಯಾತರೇ ಆಗಿರುತ್ತಾರೆ. ಕ್ರಿಮಿನಲ್ ಗ್ಯಾಂಗ್‌ಗಳಿಗೆ ಸೇರಿದವರು, ವೃತ್ತಿಪರ ಅಪರಾಧಿಗಳ ಸಂಖ್ಯೆ ಬಹಳ ಕಡಿಮೆ ಆಗಿರುತ್ತದೆ. ಈ ಕಡಿಮೆ ಸಂಖ್ಯೆಯವರೇ ಕಾರಾಗೃಹಗಳಲ್ಲಿ ಎಲ್ಲಾ ಅಕ್ರಮಗಳನ್ನು ನಡೆಸುವವರು. ಇವರೊಂದಿಗೇ ಕಾರಾಗೃಹ ಅಧಿಕಾರಿಗಳು ಶಾಮೀಲಾಗಿರುತ್ತಾರೆ.

ಬೆಂಗಳೂರಿನಲ್ಲಿ ನಡೆದ ಕಾರಾಗೃಹ ಇಲಾಖಾ ಮುಖ್ಯಸ್ಥರ ಸಮಾವೇಶದಲ್ಲಿ ಬಂಧಿಗಳನ್ನು ತೊಡಗಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಕುರಿತು ಚರ್ಚೆ ನಡೆಯಿತು. ಬಂಧಿಗಳ ಭವಿಷ್ಯದ ಪುನರ್‌ವಸತಿ ಎಂಬುದು ಸಿಹಿ ಲೇಪಿತ ಸೇರ್ಪಡೆ ಅಷ್ಟೇ.

ಸಾಮರ್ಥ್ಯಕ್ಕಿಂತಲೂ ಎರಡು ಮೂರು ಪಟ್ಟು ಹೆಚ್ಚಿನ ಬಂಧಿಗಳಿಂದ ತುಂಬಿ ತುಳುಕುತ್ತಿರುವ ಕಾರಾಗೃಹಗಳಲ್ಲಿ ಮಲಗಲು ಜಾಗವಿಲ್ಲ, ಶೌಚಾಲಯಗಳಿಲ್ಲ, ವ್ಯವಸ್ಥೆ ಸರಿ ಇಲ್ಲದ, ಹಾಸಲು ಹೊದೆಯಲು ಸರಿಯಾಗಿ ನೀಡದೇ ಇರುವ, ನೀಡಿದರೂ ಕೊಳೆತು ನಾರುತ್ತಿರುತ್ತವೆ. ಕುಡಿಯುವ ನೀರು ಕೂಡ ಕುಡಿಯಲು ಯೋಗ್ಯವಲ್ಲದ ನೀರಾಗಿರುತ್ತವೆ. ಕೆಲವು ಕಾರಾಗೃಹಗಳಲ್ಲಿ ಮಾತ್ರ ಫಿಲ್ಟರ್‌ಗಳನ್ನು ಅಳವಡಿಸಲಾಗಿದೆ. ಮಲಗುವ ಜಾಗದ ಕೊರತೆಯಿಂದ ಜಗಳ ಹೊಡೆದಾಟ ಸಾಮಾನ್ಯ ಅನ್ನುವಂತಹ ಸ್ಥಿತಿಯಾಗಿದೆ ಕಾರಾಗೃಹಗಳಲ್ಲಿ.

ಇನ್ನು ವೈದ್ಯರಿಲ್ಲ, ಮಹಿಳಾ ವೈದ್ಯರಿಲ್ಲ, ಮಾನಸಿಕ ತಜ್ಞರಿಲ್ಲ, ರೋಗಿಗಳಿಗೆ ಅಗತ್ಯವಾದ ಮಂಚ ಹಾಸಿಗೆ ಹೊದಿಕೆಗಳಿಲ್ಲ, ಇರೋದರಲ್ಲಿ ಬೆಂಗಳೂರು ಕೇಂದ್ರ



ಕಾರಾಗೃಹದಲ್ಲಿ ಮಾತ್ರ ಒಂದು ಮಟ್ಟಿಗಿನ ವೈದ್ಯಕೀಯ ಸೌಲಭ್ಯ, ಆಸ್ಪತ್ರೆ ಇದೆ. ಉಳಿದಂತೆ ಎಲ್ಲಾ ಕಾರಾಗೃಹಗಳಲ್ಲೂ ನಾಮ ಮಾತ್ರದ ಆಸ್ಪತ್ರೆ ಅನ್ನೋ ಕೊಠಡಿ ಇವೆ. ವೈದ್ಯರುತು ಹೆಚ್ಚಿನ ಕಡೆಗಳಲ್ಲಿ ಯಾವುದೇ ಕಾಳಜಿ ತೋರದ ಭ್ರಷ್ಟರೆ ಆಗಿದ್ದಾರೆ. ಔಷಧಿ ಮಾತ್ರೆಗಳ ನೆಪದಲ್ಲಿ ಲಕ್ಷಾಂತರ ರೂಪಾಯಿ ಕೊಳ್ಳೆ ನಡೆಯುತ್ತಿವೆ. ಇತ್ತೀಚೆಗೆ ಗುತ್ತಿಗೆ ಆಧಾರದಲ್ಲಿ ಕೆಲವು ವೈದ್ಯರುಗಳನ್ನು ನೇಮಕ ಮಾಡಿಕೊಂಡಿದ್ದರು. ಅದು ಅವಶ್ಯಕತೆಯನ್ನು ಪೂರೈಸುತ್ತಿಲ್ಲ

ಬಂಧಿಗಳ ಮಾನಸಿಕ ಹಾಗೂ ದೈಹಿಕ ಸ್ತಿಮಿತವನ್ನು ಕಾಪಾಡುವಂತಹ ವಾತಾವರಣ ನಿರ್ಮಾಣ ಮಾಡುವ ಬಗ್ಗೆಯಾಗಲಿ, ಅದಕ್ಕೆ ಬೇಕಾದಂತಹ ವ್ಯವಸ್ಥೆ ಸಿಬ್ಬಂದಿ ತರಬೇತಿ, ಕಟ್ಟಡಗಳ ಬಗ್ಗೆಯಾಗಲಿ, ಬಂಧಿಗಳ ಮಾನಸಿಕ ಹಾಗೂ ಬೌದ್ಧಿಕ ವಿಕಾಸಕ್ಕೆ ಬೇಕಾದ ವಿರ್ಹಾಟುಗಳ ಬಗ್ಗೆಯಾಗಲಿ ಸರಿಯಾದ ಊಟ, ತಿಂಡಿ, ಟೀ ನೀಡುವ ಬಗ್ಗೆಯಾಗಲಿ ನಾಮ ಮಾತ್ರಕ್ಕಿರುವ ಶಿಕ್ಷಕ ಎಂಬ ಹುದ್ದೆಯನ್ನು ಸಮರ್ಪಕವಾಗಿ ಬಳಸುವ ಬಗ್ಗೆಯಾಗಲಿ ಈ ಸಮಾವೇಶದಲ್ಲಿ ಚರ್ಚೆಯಾದ ವರದಿಗಳಿಲ್ಲ, ಇಂತಹ

ಕುಟುಂಬದ ಹಿಂಸೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಲೈಂಗಿಕ ಅಲ್ಪಸಂಖ್ಯಾತ ವಂಶಿ ರಾಜು


ವಂಶಿ ರಾಜು

ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ 22 ವಯಸ್ಸಿನ ವಂಶಿ ರಾಜು ನವೆಂಬರ್ 24ರ ರಾತ್ರಿ ಯಶವಂತಪುರದ ತಮ್ಮ ನಿವಾಸದಲ್ಲಿ ವಿಷ ಸೇವಿಸಿ ತಮ್ಮ ಜೀವನವನ್ನು ಕೊನೆಗಾಣಿಸಿದ್ದಾರೆ. ಈ ವಿಷಯವು ಅವರ ಸ್ನೇಹಿತರಿಗೆ ಮತ್ತು ನಗರದ ಇಡೀ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ದೊಡ್ಡ ಆಘಾತವನ್ನುಂಟುಮಾಡಿದೆ. ವಂಶಿ ಅದೇ ದಿನ ಲೈಂಗಿಕ ಅಲ್ಪಸಂಖ್ಯಾತರ ಸ್ವಾಭಿಮಾನ ಮೆರವಣಿಗೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಬೆಂಗಳೂರಿನ ಮುಖ್ಯ ರಸ್ತೆಗಳಲ್ಲಿ ಅವರ ಸ್ನೇಹಿತರೊಂದಿಗೆ ಸಂತಸವಾಗಿ ಕುಣಿದಾಡಿದ್ದರು.

ಇವರು ಲೈಂಗಿಕ ಅಲ್ಪಸಂಖ್ಯಾತ ಸಮುದಾಯ ಸಂಘಟನೆಗಳಾದ ಸಮರ ಮತ್ತು ಸಂಗಮ ಸಂಸ್ಥೆಗಳಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದು ಅನೇಕ ಲೈಂಗಿಕ ಅಲ್ಪಸಂಖ್ಯಾತ ಹೋರಾಟಗಾರರಿಗೆ ತಿಳಿದವರಾಗಿದ್ದರು. ಇವರು ಪ್ರತಿ ಭಾನುವಾರ ಕಚೇರಿಗಳಲ್ಲಿ ನಡೆಯುತ್ತಿದ್ದ ವಾರದ ಸಮುದಾಯ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರು ಒಬ್ಬ ಸ್ನೇಹಪರ, ಉಲ್ಲಾಸಜೀವಿ, ಸಂತೋಷದಿಂದಿರುವ ವ್ಯಕ್ತಿಯಾಗಿದ್ದರು. ಇವರನ್ನು ದುಃಖ, ನಿರಾಶೆ ಅಥವಾ ಖಿನ್ನತೆಯ ಸ್ಥಿತಿಯಲ್ಲಿ ಕಂಡಿರುವ ನೆನಪು ಇಲ್ಲವೆಂದು ಅವರ ಹಲವಾರು ಸ್ನೇಹಿತರು ಹೇಳಿದ್ದಾರೆ.


ಇವರು ತಮ್ಮ ಲಿಂಗತ್ವ (ಜೆಂಡರ್) ಮತ್ತು ಲೈಂಗಿಕ ಆದ್ಯತೆಯನ್ನು (ಸೆಕ್ಷುವಲ್ ಪ್ರೆಫೆರೆನ್ಸ್) ಮುಕ್ತವಾಗಿ, ಸಾರ್ವಜನಿಕವಾಗಿ ಹೇಳಿಕೊಂಡಿದ್ದರು. ಬಹುತೇಕ ಲೈಂಗಿಕ ಅಲ್ಪಸಂಖ್ಯಾತ ಹೋರಾಟಗಾರರಿಗೆ ಇವರು ಲಿಂಗತ್ವ ಅಲ್ಪಸಂಖ್ಯಾತರೆಂದು ತಿಳಿದಿತ್ತು. ಇವರು ಹೆಂಗಸುತನ ಹೊಂದಿರುವ (ಫೆಮಿನೈನ್) ಸಲಿಂಗಕಾಮಿ ಪುರುಷರಾಗಿದ್ದರು. ಇವರು ಹೆಚ್ಚಿಗೆ ಪುರುಷರ ಉಡುಪು ಧರಿಸುತ್ತಿದ್ದು ವಿಶೇಷ ಸಂದರ್ಭಗಳಲ್ಲಿ ಸೀರೆಯನ್ನು ಉಡುತ್ತಿದ್ದರು. ಇವರಿಗೆ ವಿಶೇಷವಾಗಿ ನೆಲಮಂಗಲ ಪ್ರದೇಶದಲ್ಲಿ ಹಿಜ್ರಾ ಸಮುದಾಯದೊಂದಿಗೆ ನಿಕಟಸಂಪರ್ಕವಿತ್ತು. ಇವರ ಸಂಗಾತಿಗಳಲ್ಲಿ ಪುರುಷರು, ಹಿಜ್ರಾಗಳು ಮತ್ತು ಮಹಿಳೆಯರಿದ್ದರು. ಇವರು ಒಬ್ಬ ಉದಾರ ವ್ಯಕ್ತಿಯಾಗಿದ್ದು ಅವರ ಯಾವುದೇ ಸ್ನೇಹಿತರಿಗೆ ಅಗತ್ಯವಿದ್ದಾಗ ಹಣ ಮತ್ತಿತರೆ ರೀತಿಯ ಸಹಾಯ ಮಾಡುತ್ತಿದ್ದರು.

ಇವರು ಒಬ್ಬ ಸ್ನೇಹಿತರೊಂದಿಗೆ ಯಶವಂತಪುರದಲ್ಲಿ ಯಲ್ಲಮ್ಮ (ಕೋಥಿ, ಹಿಜ್ರಾ, ಜೋಗಪ್ಪ ಮತ್ತು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಮುಖ್ಯವಾಗಿ ಆರಾಧಿಸುವ ದೇವತೆ) ದೇವಸ್ಥಾನವನ್ನು ನಡೆಸುತ್ತಿದ್ದರು. ಅನೇಕ ಲೈಂಗಿಕ ಅಲ್ಪಸಂಖ್ಯಾತ ಸಮುದಾಯದವರು ಯಲ್ಲಮ್ಮ ದೇವಸ್ಥಾನಗಳನ್ನು ನಡೆಸುತ್ತಿದ್ದು, ಹಿಜ್ರಾ ಮತ್ತು ಜೋಗಪ್ಪ ಸಮುದಾಯದಲ್ಲಿ ಒಂದು ಸಂಪ್ರದಾಯಿಕ ವೃತ್ತಿ ಆಗಿದೆ. ವಂಶಿ ಈ ಸೆಪ್ಟೆಂಬರ್ ತಿಂಗಳಲ್ಲಿ ಕರಗ ಹೊತ್ತಿದ್ದು ಅವರ ದೇವಸ್ಥಾನದ "ಗಂಜೆ ಹೊಯ್ಯುವ" ಹಬ್ಬದ ವಿಷಯವನ್ನು ಹೆಮ್ಮೆಯಿಂದ ಅವರ ಸ್ನೇಹಿತರೊಂದಿಗೆ ಹಾಗೂ ಫೇಸ್-ಬುಕ್ ಮುಖಾಂತರ ಹಂಚಿಕೊಂಡಿದ್ದರು.

ಇವರ ಕುಟುಂಬವು ಮೂಲತಃ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯವರಾಗಿದ್ದು, ಆಂಧ್ರ ಕ್ಷತ್ರಿಯ (ರಾಜು) ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರ ತಂದೆ ಸಾಂಪ್ರದಾಯಿಕ ಮೂಳೆ ಜೋಡಣಾ (ಪುತ್ತೂರ್ ಕಟ್ಟು) ವೃತ್ತಿಯಲ್ಲಿದ್ದರು. ಇವರ ಕುಟುಂಬದವರು ವಂಶಿ ಅವರ ಲಿಂಗತ್ವ ಮತ್ತು ಲೈಂಗಿಕತೆ ಬಗ್ಗೆ ಅಸಮಾಧಾನ ಹೊಂದಿದ್ದರು. ಇವರ ಲೈಂಗಿಕತೆಯನ್ನು ಕುಟುಂಬದವರು ಒಪ್ಪಿಕೊಳ್ಳದ ಕಾರಣ ಕಳೆದ ಎರಡು ವರ್ಷಗಳಿಂದ ಅವರ ಮನೆಯಲ್ಲಿ ಹಲವಾರು ಬಾರಿ ಜಗಳಗಳಾಗಿದ್ದವು. ಒಂದು ವರ್ಷದ ಹಿಂದೆ ಕುಟುಂಬದವರು ಅವರನ್ನು ಒಂದು ತಿಂಗಳಿಗೂ ಹೆಚ್ಚು ಗೃಹಬಂಧನದಲ್ಲಿರಿಸಿದ್ದಲ್ಲದೇ, ಆ ಸಮಯದಲ್ಲಿ ಅವರಿಗೆ ಕಾಲೇಜಿಗೆ ಹೋಗಲೂ ಅವಕಾಶ ನೀಡಿರಲಿಲ್ಲ. ಇತ್ತೀಚೆಗೆ 10 ದಿನಗಳ ಹಿಂದೆಯಷ್ಟೇ ಒಂದು ರಾತ್ರಿ ವಂಶಿಯ ತಂದೆ ಅವರಿಗೆ ಕ್ರೂರವಾಗಿ ಹೊಡೆದಿದ್ದಲ್ಲದೇ ಅವರನ್ನು ರಾತ್ರಿ 11 ಗಂಟೆಗೆ ಮನೆಯಿಂದ ಹೊರಗೆ ದಬ್ಬಿದ್ದರು. ರಾತ್ರಿ ವಂಶಿ ತಮ್ಮ ಲಿಂಗತ್ವ ಅಲ್ಪಸಂಖ್ಯಾತ ಸ್ನೇಹಿತ ಮನೆಯಲ್ಲಿರಬೇಕಾಯಿತು. ಮನೆಯಲ್ಲಿ ದೊಡ್ಡ ಜಗಳಗಳಾ ಹಲವಾರು ಸಂದರ್ಭಗಳಲ್ಲಿ ಅವರು ತಮ್ಮ ಲಿಂಗ ಅಲ್ಪಸಂಖ್ಯಾತ ಸ್ನೇಹಿತರ ಮನೆಗಳಲ್ಲಿ ಹಲವು ದಿ ಉಳಿದುಕೊಳ್ಳುತ್ತಿದ್ದರು. ವಂಶಿ ಅವರ ತಾಯಿ ಮತ್ತು ತಂದೆ ಇಬ್ಬರೂ "ಇಂಥ ಮಗ ಇರುವುದರಿಂ ನೆರೆಹೊರೆಯವರಿಂದ ಮತ್ತು ಸಂಬಂಧಿಕರಿಂದ ನಮ್ಮ ಕುಟುಂಬದ ಘನತೆಗೆ ಧಕ್ಕೆ ಬರುತ್ತದೆ" ಎಂ ಕಾರಣಕ್ಕೆ ವಂಶಿಯವರನ್ನು ಒಪ್ಪಿಕೊಂಡಿರಲಿ ಕುಟುಂಬದವರು ಹಲವಾರು ಬಾರಿ "ನೀ ಕಾಲೇಜಿನಲ್ಲಿರು ಇಲ್ಲಾ ಮನೆಯಲ್ಲಿರು. ಬೇರೆ ಎಲ್ಲ ಹೋಗಬಾರದು" ಎಂದು ಇವರನ್ನು ಲೈಂಗಿ ಅಲ್ಪಸಂಖ್ಯಾತ ಸ್ನೇಹಿತರಿಂದ ದೂರಮಾಡ ಪ್ರಯತ್ನಿಸಿದ್ದರು. ವಂಶಿಗೆ ತಮ್ಮ ಅಜ್ಜಿಯ ಬ ಅಪಾರ ಪ್ರೇಮವಿತ್ತು, ಅದಕ್ಕೆ ಕಾರಣ ಅವ ಅಜ್ಜಿಯು ಅವರನ್ನು ಒಪ್ಪಿಕೊಂಡಿದ್ದರು. ವಂಶಿ ತವ ಹೆತ್ತವರಿಗಿಂತಲೂ ತಮ್ಮ ಅಜ್ಜಿಗೆ ಹತ್ತಿರವಾಗಿದ್ದ

ಇದೇ ನವೆಂಬರ್ 24ರಂದು ಬೆಂಗಳೂರಿನ ಲೈಂಗಿಕ ಅಲ್ಪಸಂಖ್ಯಾತರ ಸ್ವಾಭಿಮಾ ಮೆರವಣಿಗೆಯಲ್ಲಿ ವಂಶಿ ನರ್ತಿಸುತ್ತಿದ್ದುದ್ದನ್ನು ಅವ ಕುಟುಂಬದವರು ಟಿವಿಯಲ್ಲಿ ನೋಡಿದ್ದರು. ದಿನ ಸುಮಾರು ರಾತ್ರಿ ಒಂಭತ್ತು ಗಂಟೆಗೆ ವ ಮನೆಗೆ ವಾಪಸಾದರು. ಆಗ ಅವ ಮೆರವಣಿಗೆಯಲ್ಲಿ ಭಾಗವಹಿಸಿದ್ದ ವಿಷಯದಿಂದ ಮನೆಯಲ್ಲಿ ದೊಡ್ಡ ಜಗಳವಾಯಿತು. ವಂಶಿ ತಂದೆ ಅವರಿಗೆ ಚೆನ್ನಾಗಿ ಹೊಡೆದಿದ್ದಾರೆ. ಬಹು ತನ್ನ ಕುಟುಂಬ ನಿರಾಕರಣೆ ಸಹಿಸಲಾಗ ಮಾನಸಿಕವಾಗಿ ಕುಗ್ಗಿದ ವಂಶಿ ಆತ್ಮಹತ್ಯೆ ಒಳಗಾಗಿದ್ದಾರೆ.

ಲೈಂಗಿಕ ಅಲ್ಪಸಂಖ್ಯಾತರ ಸಮುದಾಯ


ಕರಗ ಹೊತ್ತಿರುವ ವಂಶಿ

...ಗಳು ಅಲ್ಲಿ ಮುಷ್ಟು ಕೂಡ ಪಡೆಯುವುದಿಲ್ಲ. ನಾಮಕಾವಾಸ್ತೆಗೆ ಕೆಲವೊಂದು ಚರ್ಚಿಸಿ ಅದರಿಂದ ...ಮಗದೆಯಾಗುವ ಹಣ ಕೊಳ್ಳೆ ಹೊಡೆಯುತ್ತಾರೆ.

ಈಗಾಗಲೇ ರಾಜ್ಯದ ಹಲವು ಕಾರಾಗೃಹಗಳಲ್ಲಿ ...ಗಳು, ಮಗ್ಗಗಳು, ನಾರಿನ ಕೈಗಾರಿಕೆ, ಮರದ ಕೈಗಾರಿಕೆ, ಕೃಷಿ, ತರಕಾರಿ, ಹೈನುಗಾರಿಕೆ, ಕುರಿ-ಹಂದಿ ಸಾಕಾಣಿಕೆ ...ವಿಗಳನ್ನು ನಡೆಸಲಾಗುತ್ತಿವೆ. ಆದರೆ ಇದು ಬಂಧಿಗಳಿಗೆ ಉಪಯೋಗಕ್ಕಿಂತಲೂ ಅಧಿಕಾರಿಗಳ ಜೇಬು ತುಂಬಿಸುವ ಕಾರ್ಯಕ್ಕೆ ಪ್ರಧಾನವಾಗಿ ಸೀಮಿತವಾಗಿವೆ. ಎಷ್ಟೋ ಕಾರಾಗೃಹಗಳಲ್ಲಿ ಬಂಧಿಗಳು ದುಡಿದ ಕೂಲಿಯನ್ನು ಸರಿಯಾಗಿ ಕೊಡದೆ ಕೊಳ್ಳೆ ಹೊಡೆಯಲಾಗುತ್ತಿದೆ. ಲೆಕ್ಕದಲ್ಲಿ ...ನಿಷ್ಟ ಮೊತ್ತದ ಲಾಭ ತೋರಿಸಲಾಗುತ್ತದೆ. ...ಯಾವುದನ್ನಾದರೂ ಮುಚ್ಚಿಸಬೇಕೆಂದರೆ ನಷ್ಟ ತೋರಿಸಲಾಗುತ್ತದೆ. ಆದರೆ ಅದಕ್ಕಿಂತಲೂ ಐದಾರು ಪಟ್ಟು ಲಾಭ ಬಂದಿರುತ್ತದೆ.

ಬೆಂಗಳೂರಿನ ಪರಪ್ಪನ ಅಗ್ರಹಾರದ ಕಾರಾಗೃಹದಲ್ಲೂ ದೊಡ್ಡ ಮಟ್ಟದಲ್ಲಿ ಕೊಳ್ಳೆ ನಡೆಯುತ್ತಿದೆ. ಇದಕ್ಕೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಹಾಗೂ ಕಾರಾಗೃಹಗಳ ಮಹಾ ನಿರೀಕ್ಷಕ ಗಗನ್ ದೀಪ್, ಐಪಿಎಸ್ ಡಿಐಜಿ ರಾಜು ಪ್ರಧಾನವಾಗಿ ಸೂತ್ರಧಾರಿಗಳಾಗಿದ್ದಾರೆ. ಬಯಲು ಬಂದಿಖಾನೆಯೆಂದು ಕೃಷಿ ತೋಟವನ್ನು ಪ್ರಾರಂಭಿಸಿ ಬಂಧಿಗಳಿಂದ ಚಾಕರಿ ಮಾಡಿಸಿ ಕೊಳ್ಳೆ ಹೊಡೆಯಲಾಗುತ್ತಿದೆ.

ಕಾರಾಗೃಹಗಳ ಐಜಿ ಗಗನ್‌ದೀಪ್ ಹಾಗೂ ವಂಚಕ ಅಶೋಕ್ ಅಡಿಗನ ಕೂಟ ಪರಪ್ಪನ ಅಗ್ರಹಾರದ ವ್ಯವಹಾರಗಳಲ್ಲಿ ಭಾರಿ ಕಮಾಯಿ ಮಾಡುತ್ತಿದೆ. ಸಿದ್ಧ ಉಡುಪಿನ ಕಾರ್ಖಾನೆ ಸ್ಥಾಪನೆ ಮಾಡಿ ಯಂತ್ರಗಳ ಖರೀದಿ ಮೊದಲಾದವುಗಳಲ್ಲಿ ಇವರ ಭಾರಿ ಕಳ್ಳ ವ್ಯವಹಾರ ಬಯಲಿಗೆ ಬಂದು ಈಗ ತಾತ್ಕಾಲಿಕವಾಗಿ ಸಿದ್ಧ ಉಡುಪು ಘಟಕ ಸ್ಥಗಿತವಾಗಿದೆ.

ಈ ಕಾರಾಗೃಹಗಳ ಮಹಾ ನಿರೀಕ್ಷಕ ಬಂದನಂತರ ಕಾರಾಗೃಹಗಳಲ್ಲಿ ಯಾವುದೇ ಅಭಿವೃದ್ಧಿ ಸುಧಾರಣೆಗಳನ್ನು ತರದೆ ಹೆಚ್.ಟಿ. ರಮೇಶ್‌ರಂತಹ ಕಾಳಜಿವಂತ ಮಾನವೀಯ ಅಧಿಕಾರಿಗಳು ತಂದಂತಹ ಸುಧಾರಣೆಗಳು ಅಭಿವೃದ್ಧಿಗಳನ್ನು ಹಾಳುಗೆಡವುವ ಕಾರ್ಯ ಮಾತ್ರ ಮಾಡುತ್ತಿದ್ದಾರೆ. ಯಾವಾಗಲೂ ರೇಸಿನಲ್ಲಿ, ಗಾಲ್ಫ್ ಅಂಗಣದಲ್ಲಿ ಕಾಲ ಕಳೆಯುವ ಗಗನ್‌ದೀಪ್‌ರಿಗೆ ತಮ್ಮ ಇಲಾಖೆಯ ಕುಂದುಕೊರತೆಗಳು, ಆಗಬೇಕಾದ ಕೆಲಸ ಕಾರ್ಯಗಳ ಬಗ್ಗೆ ಗಮನ ಹರಿಸಲು ಸಮಯವೇ ಸಿಗುತ್ತಿಲ್ಲ. ಆದರೆ ಯಾವ್ಯಾವ ಹೊಸ ಲಾಭ ಗಳಿಸುವ ಯೋಜನೆ ತಯಾರಿಸಿ ಸರ್ಕಾರದಿಂದ ಹಣ ಬಿಡುಗಡೆ ಮಾಡಿಸಿ ಕೊಳ್ಳೆ ಹೊಡೆಯುವ ಕೆಲಸ ಮಾತ್ರ ಚೆನ್ನಾಗಿ ಮಾಡುತ್ತಾರೆ. ಜೊತೆಗೆ ಡಿಐಜಿ ರಾಜು ಎಂಬ ಭ್ರಷ್ಟ ಈಗ ಹೆಚ್ಚುವರಿ ಐಜಿಯಾಗುವ ಹಂತದಲ್ಲಿದ್ದಾರೆ. ಇಂತಹ ಅಧಿಕಾರಿಗಳೆಲ್ಲಾ ಸೇರಿಕೊಂಡರೆ ಸಮಾಜದ ಸ್ವಾಸ್ಥ್ಯದ ಸಂಕೇತವಾಗಬೇಕಾದ ಕಾರಾಗೃಹಗಳು ಕ್ರಿಮಿನಲ್‌ಗಳನ್ನು, ಮಾನಸಿಕ ಅಸ್ವಸ್ಥರನ್ನು, ಹುಚ್ಚರನ್ನು ಉತ್ಪಾದಿಸುವ ಕೇಂದ್ರಗಳಾಗದೇ ಇನ್ನೇನಾಗಲು ಸಾಧ್ಯ? ಸರ್ಕಾರ ಕೂಡಲೇ ಈ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾದ ತುರ್ತು ಇದೆ. ಆದರೆ ರಾಜಕೀಯ ಲಾಭ ನಷ್ಟದ ಲೆಕ್ಕಾಚಾರದಲ್ಲಿ ಮುಳುಗಿರುವ ಸರ್ಕಾರಕ್ಕೆ ಕಾರಾಗೃಹಗಳ ಪರಿಸ್ಥಿತಿಗಳು ತುರ್ತು ಅಗತ್ಯ ಎಂದು ಅನಿಸಬೇಕಾಗಿದೆ. 21ನೇ ಶತಮಾನಕ್ಕೆ ಕಾರಾಗೃಹಗಳ ಅಭಿವೃದ್ಧಿ ಎಂದರೇನು ಎಂಬುದನ್ನು ಕಾದು ನೋಡಬೇಕು.

ಒಂದಂತೂ ಸ್ಪಷ್ಟ.

ಕಾರಾಗೃಹಗಳಲಿ ತುಂಬಿ ತುಳುಕುತ್ತಿರುವ ಬಂಧಿಗಳನ್ನು ಬೇಕಾಬಿಟ್ಟಿ ದುಡಿಸಿ ಅದಕ್ಕೆ ಸಮಾಜಕ್ಕೆ ಮರುಳು ಮಾಡುವ ಹೆಸರನ್ನಿಟ್ಟು ಲೂಟಿ ಹೊಡೆಯುವ ಯೋಜನೆ 'ಬಂಧಿಗಳ ಭವಿಷ್ಯದಲ್ಲಿ ಪುನರ್‌ವಸತಿಗಾಗಿ ಕಾರಾಗೃಹದಲ್ಲಿ ವಿನೂತನ ಕೈಗಾರಿಕೆಗಳು' ಎಂಬುದಾಗಿದೆ ಅನ್ನುವುದಕ್ಕೆ ಯಾವುದೇ ಸಂಶಯ ಇರಬೇಕಿಲ್ಲ.


ಕಾರಣ ಏನೆಂದರೆ ಕಾರಾಗೃಹಗಳಲ್ಲಿ ಹೆಪ್ಪುಗಟ್ಟಿ ಹೋಗಿರುವ ಮೂಲಭೂತ ಸಮಸ್ಯೆಗಳು ಇನ್ನಿತರ ಮಾನಸಿಕ ಹಾಗೂ ಬೌದ್ಧಿಕವಾಗಿ ಬಂಧಿಗಳ ಪರಿವರ್ತನೆ ಹಾಗೂ ಸುಧಾರಣೆಗಳ ಬಗ್ಗೆ ಯಾವುದೇ ಗಂಭೀರ ಯೋಜನೆ ಹಾಗೂ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡದೆ ಕೇವಲ ಕೈಗಾರಿಕೆಗಳ ಸ್ಥಾಪನೆ ಎಂಬುದಕ್ಕೆ ಮಾತ್ರ ಒತ್ತು ಕೊಡುತ್ತಿರುವುದನ್ನು ಮಾಡಲಾಗುತ್ತಿದೆ. ಈ ರೀತಿ ಮಾಡುವುದೇ ಅಮಾಯಕ ಅಸಹಾಯಕ ಬಂಧಿಗಳ ಶ್ರಮವನ್ನು ಲೂಟಿ ಮಾಡುತ್ತಾ ಅವರ ಸ್ಥಿತಿಯನ್ನು ಮತ್ತಷ್ಟು ದಾರುಣಗೊಳಿಸುವುದೇ ಆಗಿದೆ. ಅಂದರೆ ಸರಕಾರಿ ಪ್ರಾಯೋಜಿತ ಜೀತಗಾರಿಕೆ ಎಂಬುದೇ ಆಗಿದೆ. ಗಗನ್‌ದೀಪ್‌ಗಳು, ರಾಜುಗಳು ಅಲ್ಲ ಮಾಲೀಕರು, ದಲ್ಲಾಳಿಗಳು ಆಗುತ್ತಾರೆ ಅಷ್ಟೆ. ಈ ಬಗ್ಗೆ ಸಮಾಜ ಎಚ್ಚೆತ್ತುಕೊಂಡಾಗ ಮಾತ್ರ ಇದನ್ನು ತಡೆಯಲು ಸಾಧ್ಯ, ಇಲ್ಲದಿದ್ದಲ್ಲಿ ಸಮಾಜಕ್ಕೆ ಮಾರಕವಾಗಿ ಪರಿಣಮಿಸುತ್ತದೆ.

■ ಒಬ್ಬ ಜೈಲುವಾಸಿ (ಅನಾಮಿಕ)

ವಿಕೃತ ಪ್ರಿನ್ಸಿಪಾಲನಿಗೆ ಮಹಿಳೆಯರೇ ಕಪಾಳಮೋಕ್ಷ ಮಾಡಿದ್ದು

27 ನವೆಂಬರ್ 2013ರ ಸಂಚಿಕೆಯಲ್ಲಿ ಅಥಣಿಯಲ್ಲಿ ಕಾಲೇಜು ವಿದ್ಯಾರ್ಥಿನಿಯರೊಂದಿಗೆ ಪ್ರಿನ್ಸಿಪಾಲನ ವಿಕೃತ ಚೇಷ್ಟೆಯ ಸಂಗತಿ ಓದಿ, ಈಗ್ಗೆ ಸುಮಾರು 22 ವರ್ಷದ ಹಿಂದೆ 1991ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಜೂನಿಯರ್ ಕಾಲೇಜಿನಲ್ಲೂ ಇದ್ದ ಇಂಥವನೇ ಪ್ರಿನ್ಸಿಪಾಲ್ ಅಲ್ಲಿಯ ಮಹಿಳೆಯರಿಂದ ಹಿಗ್ಗಾಮುಗ್ಗಾ ತದುಕಿಸಿಕೊಂಡು ರಾತ್ರೋರಾತ್ರಿ ಊರು ಬಿಟ್ಟ ಪ್ರಕರಣ ನೆನಪಿಗೆ ಬಂತು.


ಅವನೂ ಈ ದೇಗೌಡನಂಥವನೇ. ಕಿರಿಯ ಕಾಲೇಜಾಗಿದ್ದರಿಂದ 9ನೇ ತರಗತಿ ಮತ್ತು ಮೊದಲ ಪಿಯುಸಿ ಪರೀಕ್ಷೆಗಳು ಪಬ್ಲಿಕ್ ಪರೀಕ್ಷೆಗಳಾಗಿರದೆ ಅದೇ ಕಾಲೇಜಿನ ಮಟ್ಟದಲ್ಲಷ್ಟೇ ನಡೆಯುತ್ತಿದ್ದವಷ್ಟೆ. ಆ ಎರಡೂ ತರಗತಿಗಳ ಹೆಣ್ಣುಮಕ್ಕಳಲ್ಲಿ ಸ್ವಲ್ಪ ಪುಷ್ಟವಾಗಿ ಆರೋಗ್ಯವಾಗಿ ಬೆಳೆದಿರುತ್ತಿದ್ದ ಹೆಣ್ಣುಮಕ್ಕಳಿಗೆ ಬೇಕೆಂದೇ ತನ್ನ ಸಬ್ಜೆಕ್ಟ್‌ನಲ್ಲಿ ಕಡಿಮೆ ಮಾರ್ಕ್ ಕೊಟ್ಟು ಫೇಲ್ ಮಾಡುವುದು, ನಂತರ ಅವರನ್ನು ಕರೆಸಿಕೊಂಡು "ಏನಮ್ಮಾ ಎಲ್ಲಾ ತಪ್ಪುತಪ್ಪಾಗಿ ಮಾಡಿದ್ದೀಯಲ್ಲ, ವಿನಾಕಾರಣ ಒಂದು ವರ್ಷ ಹಾಳು ಮಾಡಿಕೊಳ್ತೀಯಲ್ಲ, ಮನೆಗೆ ಬಾ, ಪ್ರಶ್ನೆಪತ್ರಿಕೆ ಕೊಡ್ತೀನಿ, ಪುಸ್ತಕ ನೋಡಿಕೊಂಡು ಪುನಃ ಎಲ್ಲ ಬರಿ. ಉತ್ತರ ಪತ್ರಿಕೆ ಬದಲಾಯಿಸಿ ಪಾಸು ಮಾಡ್ತೀನಿ" ಎಂದು ನಂಬಿಸಿ ಮನೆಗೆ ಕರೆಸಿಕೊಳ್ಳುತ್ತಿದ್ದ. ಅಲ್ಲಿ ದೇಗೌಡನಂತೆಯೇ ಅವರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ. ಕಿರಿಯ ಕಾಲೇಜಿನ ಉಪನ್ಯಾಸಕನಾದ ಒಬ್ಬ ಹರಕಲು 'ಚಡ್ಡಿ'ಯೂ ಇವನಿಗೆ ಬಹಳ 'ಆಪ್ತ'ನಾಗಿದ್ದ.



ಸುಮಾರು ಎರಡು ವರ್ಷ ಹೀಗೇ ನಡೆದು ವಿಷಯ ಊರಿಗೆಲ್ಲಾ ಗೊತ್ತಾಗಿ ತಂದೆತಾಯಿಗಳು ಆತಂಕ, ಆಕ್ರೋಶಗಳಿಂದ ಕುದಿಯುತ್ತಿದ್ದರೂ ಏನೂ ಮಾಡಲಾಗದೆ ಕೈಕೈ ಹಿಸುಕಿಕೊಳ್ಳುತ್ತ ಇದ್ದರು. ಪೊಲೀಸರಿಗೆ ದೂರು ಕೊಡೋಣವೆಂದರೆ ತಮ್ಮ ಹೆಣ್ಣುಮಕ್ಕಳ ಭವಿಷ್ಯದ ಪ್ರಶ್ನೆ ಅವರನ್ನು ಕಾಡುತ್ತಿತ್ತು. ಕೊನೆಗೆ ಊರಿನ ಕೆಲಮಂದಿ ಹಿರಿಯ ಮಹಿಳೆಯರು ಸೇರಿ ಇದಕ್ಕೊಂದು ಮುಕ್ತಾಯ ಹಾಡಲೇಬೇಕೆಂದು ನಿರ್ಧರಿಸಿದರು. ಪ್ರಿನ್ಸಿಪಾಲನಿಂದ ಸಂತ್ರಸ್ತಳಾಗಿದ್ದ ಹುಡುಗಿಯೊಬ್ಬಳ ತಂದೆತಾಯಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡರು. 'ಮಗಳ ಹೆಸರನ್ನು ಎಲ್ಲೂ ಬಹಿರಂಗಕ್ಕೆ ತರುವುದಿಲ್ಲ, ಕೇವಲ ಸಾಕ್ಷಿಗಷ್ಟೇ ಅವಳು ತಮ್ಮ ಜೊತೆ ಬಂದರೆ ಸಾಕು' ಎಂದು ಅವರನ್ನು ಒಪ್ಪಿಸಿ ಅವಳನ್ನು ಕರೆದುಕೊಂಡು ಆರೇಳು ಮಹಿಳೆಯರು ಕಾಲೇಜಿಗೆ ಹೋದರು.

ಪ್ರಿನ್ಸಿಪಾಲನ ಚೇಂಬರಿಗೆ ಹೋಗಿ ವಿಚಾರಣೆ ಶುರು ಮಾಡಿದಾಗ ಆತ ಬಹಳ ಜಾಣ್ಮೆಯಿಂದ ಅವರನ್ನೇ ಯಾಮಾರಿಸಲು ನೋಡಿದ. ಹೈಸ್ಕೂಲು, ಕಾಲೇಜು ಹುಡುಗಹುಡುಗಿಯರು ಪರಸ್ಪರ ಬರೆದುಕೊಳ್ಳುವ 'ಪ್ರೇಮಪತ್ರ'ಗಳನ್ನಷ್ಟು ಕಲೆ ಹಾಕಿಕೊಂಡಿದ್ದ. ಅದನ್ನೆಲ್ಲಾ ಆ ಮಹಿಳೆಯರ ಮುಂದೆ ಹರಡಿ "ನೋಡೀಮ್ಮ, ಇವರುಗಳು ಶಾಲೆಗೆ ಬಂದು ಮಾಡೋ ಕೆಲಸ. ಅದಕ್ಕೆ ಕರೆದು ಬುದ್ಧಿ ಹೇಳಿದರೆ ಏನೇನೋ ಸುಳ್ಳು ಹಬ್ಬಿಸಿದ್ದಾರೆ..." ಮುಂತಾಗಿ ಆತ ತನ್ನನ್ನೇ ಸಮರ್ಥಿಸಿಕೊಳ್ಳತೊಡಗಿದಾಗ ಮಹಿಳೆಯರು ಸ್ವಲ್ಪ ತಬ್ಬಿಬ್ಬಾಗುವಂತಾಯಿತು.

ಆದರೂ ಹೇಗಾದರೂ ಆತನನ್ನು ಮಾತಿನಲ್ಲಿ ಸಿಕ್ಕಿಹಾಕಿಸಲು ಪ್ರಯತ್ನ ಮುಂದುವರಿಸಿದರು. ಆತ ಮಾತಿನ ಮಧ್ಯೆ ಆ ಹುಡುಗಿಗೆ "ಏನಮ್ಮಾ, ನನ್ನ ಬೆಡ್‌ರೂಂ ನೋಡಿದ್ದೀಯಾ?" ಎಂದುಬಿಟ್ಟ. ಅಷ್ಟು ಅಂದಿದ್ದೇ ತಡ, "ಏನೋ ಲೋಫರ್, ಅವಳ್ಯಾಕೆ ನಿನ್ನ ಬೆಡ್‌ರೂಂ ನೋಡಬೇಕೋ...?" ಎನ್ನುತ್ತಾ ಮುಂದಿದ್ದ ಎಲ್ಲರಿಗಿಂತ ಹಿರಿಯ ಮಹಿಳೆ ಅವನ ಕಪಾಳಕ್ಕೆ ಸರಿಯಾಗಿ ಶಕ್ತಿಮೀರಿ ಬಾರಿಸಿದರು. ತಕ್ಷಣವೇ ಮಿಕ್ಕ ಮಹಿಳೆಯರೂ ಸಹ ಛತ್ರಿ, ವ್ಯಾನಿಟಿ ಬ್ಯಾಗು, ನೀರಿನ ಬಾಟಲಿ ಹೀಗೆ ಕೈಗೆ ಸಿಕ್ಕಿದ್ದರಿಂದೆಲ್ಲಾ ಅವನಿಗೆ ಮುಖ ಮೂತಿ ನೋಡದೆ ಇಕ್ಕತೊಡಗಿದರು. ಮೊದಲು ಪ್ರತಿರೋಧಿಸಿದರೂ ಗಟ್ಟಿ ನಿರ್ಧಾರ ಮಾಡಿದ್ದ ಮಹಿಳೆಯರ ಆಕ್ರಮಣದ ಮುಂದೆ ಅವನ ಆಟ ನಡೆಯದಾಯಿತು. ಆಗ "ರೀ ಜಿಎಸ್‌ವಿ, ಲೋ ಇಸ್ಮಾಯಿಲ್..." ಎಂದು ತನ್ನ ಆ ಆಪ್ತ ಲೆಕ್ಚರರನ್ನೂ, ಕಾಲೇಜಿನ ಜವಾನನನ್ನೂ ಕೂಗಿ ಅರಚಾಡತೊಡಗಿದ. ಆದರೆ ಮಹಿಳೆಯರ ತಂಡ ಪ್ರಿನ್ಸಿಪಾಲನ ಕೊಠಡಿಗೆ ಹೋದುದನ್ನು ನೋಡಿದ್ದ ಆ ಲೆಕ್ಚರರ್ ಕಾಲೇಜಿನಿಂದ ಜಾರಿಕೊಂಡು, ಮನೆಗೂ ಹೋಗದೆ ಊರೊಳಗೆಲ್ಲೋ ತಲೆಮರೆಸಿಕೊಂಡ. ಜವಾನ ಚೇಂಬರಿನ ಹತ್ತಿರ ಬಂದು ನೋಡಿ – ಅವನೂ ಹೆಣ್ಣು ಹೆತ್ತ ಸ್ವಚ್ಛ ಮನುಷ್ಯನೇ ಆಗಿದ್ದರಿಂದ – ಕಂಡೂ ಕಾಣದಂತೆ ಹೊರಟುಹೋದ. ಮಹಿಳೆಯರು ಪ್ರಿನ್ಸಿಪಾಲರನ್ನು ಮನಸ್ಸಿಗೆ ಬಂದಷ್ಟು ಬಡಿದು (ತಮಗೇ ಸುಸ್ತಾಗುವಷ್ಟು, ಪಾಪ!), "ಮೊದಲು ಊರು ಬಿಡು, ಇಲ್ಲವಾದರೆ ನೀನು ಹುಟ್ಟಲಿಲ್ಲ ಅನ್ನಿಸಿಬಿಡ್ತೀವಿ ಹುಷಾರ್!" ಎಂದು ಧಮಕಿ ಹಾಕಿ ತೆರಳಿದರು.



ಆ ಮಹಿಳೆಯರನ್ನು ಒಟ್ಟುಗೂಡಿಸಿ, ತಂಡದ ನೇತೃತ್ವ ವಹಿಸಿಕೊಂಡು ಪ್ರಿನ್ಸಿಯ ಕಪಾಳಕ್ಕೆ ಮೊದಲು ಹೊಡೆದಿದ್ದು ಹೇಮಲತಾ ಶೆಣೈ. ಜೊತೆಗೆ ಕೊಪ್ಪ ಮತ್ತು ನ.ರಾ.ಪುರದಲ್ಲಿ ಹೆಸರುವಾಸಿ ವಕೀಲರಾಗಿದ್ದ ಶಶಿಕಲಾ ಉರಣ್ಕರ್, ಕೊಪ್ಪ ತಾಲೂಕು ಬಸರಿಕಟ್ಟೆ ಪಂಚಾಯತಿಯ ಅಧ್ಯಕ್ಷೆಯಾಗಿದ್ದ ವಸುಮತಿ, ಖೈರುನ್ನೀಸಾ, ಸರೋಜಮ್ಮ ಮುಂತಾದ ಗೃಹಿಣಿಯರೆಲ್ಲ ಆ ಸಾಹಸಿ ಮಹಿಳೆಯರ ತಂಡದಲ್ಲಿದ್ದರು.

ಇಡೀ ಊರಿನ ತಳಮಳಕ್ಕೆ ಮಹಿಳೆಯರು ಈ ರೀತಿ ಉಗ್ರ ಅಭಿವ್ಯಕ್ತಿ ಕೊಟ್ಟ ವಿಷಯ ಕ್ಷಣಾರ್ಧದಲ್ಲಿ ಊರಲ್ಲೆಲ್ಲಾ ಹರಡಿ ಜನ ಕಾಲೇಜಿನ ಸುತ್ತ ನೆರೆದು ತಾವೂ ಏನಾದರೂ ಮಾಡೋಣ ವೋ ಹೇಗೆ ಎಂದು ಯೋಚಿಸುವಂತಾಯಿತು. ಅಷ್ಟರಲ್ಲಿ ಪರಿಸ್ಥಿತಿ ತನಗೆ ಪ್ರತಿಕೂಲವಾಗಿರುವುದನ್ನು ಮನಗಂಡ ಪ್ರಿನ್ಸಿಪಾಲ ಪೊಲೀಸ್ ಸ್ಟೇಶನ್ನಿಗೆ ಹೋಗಿ ಮಹಿಳೆಯರು ತನಗೆ ಹೊಡೆದರು ಎಂದು ದೂರು ಕೊಟ್ಟ. ಆಗ ಇನ್‌ಸ್ಪೆಕ್ಟರು 'ಅಲ್ರೀ, ಇದರಿಂದ ನಿಮ್ಮ ಮಾನ ಮರ್ಯಾದೆಯೇ ಹೋಗೋದಲ್ವೇನ್ರೀ?' ಎಂದಾಗ ಅದೂ ಹೌದೆನ್ನಿಸಿ ಅದನ್ನು ಹರಿದು ಹಾಕಿ, ಕೊನೆಗೆ ತನಗೆ ಕಚೇರಿ ಕೆಲಸಕ್ಕೆ ಅಡ್ಡಿಪಡಿಸಿದರೆಂದು ಮಾತ್ರವೇ ಬರೆದುಕೊಟ್ಟ. ಪೊಲೀಸರಿಗೂ ವಿಷಯವೆಲ್ಲ ಗೊತ್ತಿತ್ತಾದ್ದರಿಂದ – ಅಲ್ಲದೆ ಅವರಲ್ಲೂ ಹಲವರು ಅದೇ ಊರಿನವರಾಗಿದ್ದು, ಸ್ವತಃ ಹೆಣ್ಣು ಹೆತ್ತವರೂ ಆಗಿದ್ದರಿಂದ – ಆ ದೂರಿಗೊಂದು ಹಿಂಬರಹ ಕೊಡುವ ಗೋಜಿಗೂ ಹೋಗಲಿಲ್ಲ.

ಮಹಿಳೆಯರು ಇಷ್ಟಕ್ಕೇ ಸುಮ್ಮನೆ ಕೂರಲಿಲ್ಲ. ಪ್ರಿನ್ಸಿಪಾಲ್ ಮನೆಗೆ ಹೋಗಿ ಆತನ ಮಡದಿಗೆ ನಡೆದ ವಿಷಯವನ್ನೆಲ್ಲ ಸಮಾಧಾನದಿಂದ ವಿವರಿಸಿ, ತನ್ನ ಗಂಡನಿಗೆ ಸ್ವಲ್ಪ ಬುದ್ಧಿ ಹೇಳುವಂತೆ ತಿಳಿಹೇಳಿದರು. ಪಾಪ, ಆಕೆ ಗಂಡನಿಗೆ ಛೀಮಾರಿ ಹಾಕಿ, ಮಾರನೆಯ ದಿನವೇ ತೌರಿಗೆ ಹೊರಟುಹೋದರು. ನಂತರ ಮಹಿಳೆಯರು ಅವನಿಗೆ ಬಾಡಿಗೆಗೆ ಮನೆ ಕೊಟ್ಟಿದ್ದ ಊರಿನ ಗಣ್ಯರ ಬಳಿ ಹೋಗಿ ವಿಷಯ ವಿವರಿಸಿ ಅವನ ಮನೆ ಖಾಲಿ ಮಾಡಿಸುವಂತೆ ಮನವಿ ಮಾಡಿದರು. ಈಗಾಗಲೇ ಎಲ್ಲ ವಿಷಯ ಗೊತ್ತಿದ್ದ ಅವರು ತಡಮಾಡದೆ ಅವನಿಗೆ ತಾಕೀತು ಮಾಡಿ ಸುದ್ದಿ ಕಳಿಸಿದರು. ಎಲ್ಲಾ ಕಡೆಯಿಂದಲೂ ಖಂಡನೆಗೆ ಒಳಗಾದ ಆತ ರಾತ್ರೋರಾತ್ರಿ ಹೊರಟು ಬೆಂಗಳೂರಿಗೆ ಹೋಗಿ ಕೊಪ್ಪದಿಂದ ವರ್ಗಾವಣೆಯಾಗುವವರೆಗೂ ಊರಿಗೆ ಮುಖ ತೋರಿಸಲಿಲ್ಲ. ನಂತರ ನಾಲ್ಕೈದು ದಿನ ಬಿಟ್ಟು ಒಂದಿನ ಯಾರಿಗೂ ಕಾಣದಂತೆ ಕಾಲೇಜಿಗೆ ಬಂದು ಅರ್ಧ ಗಂಟೆಯೊಳಗೆ ಉಪ ಪ್ರಿನ್ಸಿಪಾಲರಿಗೆ ಚಾರ್ಜ್ ವಹಿಸಿಕೊಟ್ಟು ಓಡಿಯೇ ಹೋದ. ಈ ಹಗರಣವೆಲ್ಲ ಸ್ಥಳೀಯ ಮತ್ತು ಸುತ್ತಮುತ್ತಲ ಪತ್ರಿಕೆಗಳಲ್ಲಿ ವಿವರವಾಗಿ ಪ್ರಕಟವಾಯಿತು.

ಅಲ್ಲಿಂದ ಆ ಕಚ್ಚೆಹರುಕ ಪ್ರಿನ್ಸಿ ಬಳ್ಳಾರಿ ಜಿಲ್ಲೆಯ ಕೊಟ್ಟೂರಿಗೆ ವರ್ಗ ಮಾಡಿಸಿಕೊಂಡಿದ್ದನ್ನು ಪತ್ತೆ ಹಚ್ಚಿದ ಮಹಿಳೆಯರು, ಅಲ್ಲಿ ಪತ್ರಿಕೆ ನಡೆಸುತ್ತಿದ್ದ ಮಹಾಬಲೇಶ್ವರ ಕಾಟ್ರಹಳ್ಳಿ ಮುಂತಾದ ಪರಿಚಿತರಿಗೆ ಪತ್ರ ಬರೆದು ವಿಷಯ ತಿಳಿಸಿ ಅವನ ಮೇಲೆ ಕಣ್ಣಿಡುವಂತೆ ತಿಳಿಸಿದರು. ಮುಂದೆಂದೂ ಆತ ಇಂತಹ ವಿಕೃತಿಗಿಳಿದದ್ದು ಕೇಳಿಬರಲಿಲ್ಲ.

■ ನಾರಾಯಣ್, ಕೊಪ್ಪ

(ಈ ಪ್ರಕರಣ ಮಹಿಳೆಯರಿಗೆ ಏನಾದರೂ ಮಾರ್ಗದರ್ಶಿ ತೋರಿಸೀತು ಎಂಬ ಆಶಯದಿಂದ ಬರೆದಿದ್ದೇನೆ)

...ದುರಿಸುತ್ತಿರುವ ಸಮಸ್ಯೆಗಳಲ್ಲಿ ಕುಟುಂಬದವರ ನಿರಾಕರಣೆ ಪ್ರಮುಖ ಸಮಸ್ಯೆಯಾಗಿದೆ. ಅನೇಕ ಲಿಂಗತ್ವ ಅಲ್ಪಸಂಖ್ಯಾತರು ಕುಟುಂಬದವರಿಂದ ನಿರಂತರವಾಗಿ ...ದನೆಗೊಳಗಾಗುತ್ತಿದ್ದಾರಲ್ಲದೇ 'ಹೆಂಗುಸುತನ' ಹೊಂದಿರುವ ಹುಡುಗರನ್ನು "ಪಕ್ಕಾ ಹುಡುಗ"ನಂತೆ ನಡೆಯುವಂತೆ, ಮಾತನಾಡುವಂತೆ ಮತ್ತು ವರ್ತಿಸುವಂತೆ ಬಲವಂತ ಮಾಡುತ್ತಾರೆ, ಹಿಂಸಿಸುತ್ತಾರೆ. ಅನೇಕರನ್ನು ಮನೆಯಿಂದ ಹೊರಕ್ಕೆ ಹಾಕಿರುವುದಲ್ಲದೆ ಕುಟುಂಬದ ಆಸ್ತಿಯಲ್ಲಿ ಪಾಲನ್ನು ಕೊಡುವುದಿಲ್ಲ. ಹಿಜ್ರಾ ಸಮುದಾಯದ ದೊಡ್ಡ ಭಾಗವು ಈ ವರ್ಗಕ್ಕೆ ಸೇರಿದೆ.

ಹಾಗೆಯೇ ಅನೇಕ ಸಲಿಂಗಕಾಮಿ ಪುರುಷರನ್ನು ಕುಟುಂಬದವರು "ಅವರ ಲೈಂಗಿಕತೆಯನ್ನು ಬದಲಾಯಿಸಲು" ಮಹಿಳೆಯೊಂದಿಗೆ ಬಲವಂತದ ಮದುವೆಗೆ ತಳ್ಳುತ್ತಿದ್ದಾರೆ. ಇದರಿಂದ ಅವರ ಲೈಂಗಿಕತೆ ಬದಲಾಗುವುದಿಲ್ಲ. ಬಲವಂತ ಮದುವೆಯಿಂದಾಗಿ ಅವರ ಪತ್ನಿ / ಕುಟುಂಬ ಸದಸ್ಯರು / ಸ್ನೇಹಿತರಿಗೆ ಎಲ್ಲಿ ಅವರ ಲೈಂಗಿಕತೆ ಗೊತ್ತಾಗಿಬಿಡುತ್ತದೊ ಎಂಬ ನಿರಂತರ ಭಯದಿಂದ ದ್ವಂದ್ವ ಜೀವನ ನಡೆಸಲು ಕಾರಣವಾಗುತ್ತದೆ. ಈ ವಿಷಯವನ್ನು ಅವರ ಪತ್ನಿಯಿಂದ ಮುಚ್ಚಿಟ್ಟುಕೊಂಡು ಜೀವಿತಾವಧಿ ತಪ್ಪಿತಸ್ಥ ಭಾವನೆಯಿಂದ ಜೀವನ ನಡೆಸುತ್ತಿದ್ದಾರೆ. ಇದರಿಂದಾಗಿ ಪತ್ನಿ, ಮಕ್ಕಳು ಮತ್ತು ಕುಟುಂಬದ ಇತರ ಸದಸ್ಯರೊಂದಿಗಿನ ಸಂಬಂಧಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದು ಇವರ ಜೀವನದಲ್ಲಿ ಅಗಾಧ ಒತ್ತಡವನ್ನು ಉಂಟುಮಾಡುತ್ತದೆ. ಈ ಬಲವಂತದ ಮದುವೆಗಳಿಂದ ಸಲಿಂಗಕಾಮಿ ಪುರುಷರನ್ನು ಮದುವೆಯಾದ ಮಹಿಳೆಯರೂ ಸಮಸ್ಯೆಗಳಿಗೆ ಗುರಿಯಾಗುತ್ತಾರೆ.

ಖಿನ್ನತೆ, ಮಾನಸಿಕ ಖಿನ್ನತೆಯು (ಡಿಪ್ರೆಶನ್) ಲೈಂಗಿಕ ಅಲ್ಪಸಂಖ್ಯಾತರಲ್ಲಿ ಅತ್ಯಂತ ಸಾಮಾನ್ಯವಾಗಿದ್ದು ಇದರಿಂದಾಗಿ ...ವರು ತಮ್ಮ ಜೀವನವನ್ನು ಕೊನೆಗೊಳಿಸಿದ್ದಾರೆ.

ಉಪಾಖ್ಯಾನದ ಸಾಕ್ಷ್ಯಗಳ (ಅನೆಕ್ಡೋಟಲ್ ಎವಿಡೆನ್ಸ್) ...ಕಾರ ಒಂದೂಗಳಲ್ಲಿರುವ ಪ್ರಬಲ ಜಾತಿಯ ...ಗಳು ತಮ್ಮ ಲೈಂಗಿಕ ಅಲ್ಪಸಂಖ್ಯಾತ ಮಕ್ಕಳೊಂದಿಗೆ ...ವಾಗಿ ವ್ಯವಹರಿಸುತ್ತಾರೆ. ಆದರೆ ದಲಿತ ಕುಟುಂಬಗಳು ...ಲೈಂಗಿಕ ಅಲ್ಪಸಂಖ್ಯಾತ ಮಕ್ಕಳ ಬಗ್ಗೆ ಹೆಚ್ಚಿನ ...ಕೊಡುವುದು ಕಂಡುಬಂದಿದೆ. ಕುಟುಂಬದವರಿಂದ ...ಲೈಂಗಿಕತೆ-ಲಿಂಗತ್ವದ ಸಂಬಂಧಗಳ ತಿರಸ್ಕಾರವು ...ಲೈಂಗಿಕ ಅಲ್ಪಸಂಖ್ಯಾತರ ಪ್ರಮುಖವಾದ ಸಮಸ್ಯೆಯಾಗಿದೆ.


ಕುಟುಂಬದ ತಿರಸ್ಕಾರದಿಂದಾಗಿ ಉಂಟಾಗುವ ಒತ್ತಡವನ್ನು ಆಪ್ತ ಸಮಾಲೋಚನೆ (ಕೌನ್ಸಿಲಿಂಗ್), ಕಲಾ-ಚಿಕಿತ್ಸೆ (ಆರ್ಟ್ ಥೆರಪಿ), ಸಮುದಾಯವನ್ನು ಸಂಘಟಿಸುವ ಮುಖಾಂತರ ಒಂದು ಮಟ್ಟಕ್ಕೆ ನಿಭಾಯಿಸಬಹುದು. ಬಡ ಲೈಂಗಿಕ ಅಲ್ಪಸಂಖ್ಯಾತರಿಗೆ ಉಚಿತವಾಗಿ ಮತ್ತು ಗುಣಮಟ್ಟದ ಆಪ್ತ ಸಮಾಲೋಚನೆ ಚಿಕಿತ್ಸಾ ಸೇವೆಗಳು ದೊರಕುತ್ತಿಲ್ಲ. ಸರ್ಕಾರವು ಲೈಂಗಿಕ ಅಲ್ಪಸಂಖ್ಯಾತರ ಜೀವನದಲ್ಲಿನ ಒತ್ತಡವನ್ನು ಕಡಿಮೆ ಮಾಡಲು ಆಪ್ತ ಸಮಾಲೋಚನೆ ಚಿಕಿತ್ಸಾ ಸೇವೆಗಳನ್ನು ಪಡೆಯಲು ಈ ಕೂಡಲೇ ಹಣಕಾಸು ಬೆಂಬಲ ನೀಡಬೇಕು. ಅದಲ್ಲದೇ ಸರ್ಕಾರವು ಲೈಂಗಿಕ ಅಲ್ಪಸಂಖ್ಯಾತರ ಹೆತ್ತವರು ತಮ್ಮ ಮಕ್ಕಳ ಲಿಂಗತ್ವ-ಲೈಂಗಿಕತೆಯನ್ನು ಒಪ್ಪಿಕೊಳ್ಳಲು ಸಹಕರಿಸುವ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಹಣಕಾಸು ನೆರವು ಒದಗಿಸಬೇಕು. ಅನೇಕ ದೇಶಗಳಲ್ಲಿ ಇಂತಹ ಕಾರ್ಯಕ್ರಮಗಳು ಯಶಸ್ಸನ್ನು ಕಂಡಿವೆ. ಕಳೆದ ಎರಡು ವರ್ಷಗಳ ಹಿಂದೆ ಸಂಗಮ ಸಂಸ್ಥೆಯು ಪ್ರಾಯೋಗಿಕವಾಗಿ ಇಂತಹ ಒಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದಲ್ಲದೇ ಲೈಂಗಿಕ ಅಲ್ಪಸಂಖ್ಯಾತರ ಕುಟುಂಬದವರು ತಮ್ಮ ಲೈಂಗಿಕ ಅಲ್ಪಸಂಖ್ಯಾತ ಮಕ್ಕಳನ್ನು ಸ್ವೀಕರಿಸಲು ಸ್ವಲ್ಪ ಮಟ್ಟಿಗೆ ಯಶಸ್ಸನ್ನು ಕಂಡಿದೆ. ಈ ಕಾರ್ಯಕ್ರಮವು ಹಣಕಾಸಿನ ಕೊರತೆಯಿಂದಾಗಿ ಸ್ಥಗಿತಗೊಂಡಿದೆ.

ಲೈಂಗಿಕ ಅಲ್ಪಸಂಖ್ಯಾತರು, ಅವರ ಬೆಂಬಲಿಗರು, ಸರ್ಕಾರೇತರ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು ಮತ್ತು ಸಾಮಾಜಿಕ ಚಳವಳಿಗಳು ಈ ಕೂಡಲೇ ಒಂದಾಗಿ ಬಂದು ಲೈಂಗಿಕ ಅಲ್ಪಸಂಖ್ಯಾತರಲ್ಲಿರುವ ಹೆಚ್ಚಿನ ಪ್ರಮಾಣದ ಆತ್ಮಹತ್ಯೆ ಪ್ರಕರಣಗಳನ್ನು ಕಡಿಮೆಮಾಡಲು ಕಾರ್ಯತಂತ್ರಗಳನ್ನು ರೂಪಿಸಬೇಕು.

■ ಮನೋಹರ್ ಎಲವರ್ತಿ

(ಲೇಖಕರು ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಹೋರಾಡುವ ಸಂಗಮ ಸಂಸ್ಥೆಯ ಸಂಸ್ಥಾಪಕರಾಗಿದ್ದಾರೆ. ಇತ್ತೀಚೆಗೆ ಅವರು ತಮ್ಮ ಹೆಚ್ಚಿನ ಸಮಯವನ್ನು ಪ್ರಜಾ ರಾಜಕೀಯ ವೇದಿಕೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ)

ಕಾಮನ್ ಸ್ಕೂಲ್: ಹಲವು ಸಮಸ್ಯೆಗಳು ಒಂದೇ ಉತ್ತರ



ಭಾರತದ ಶಿಕ್ಷಣ ವ್ಯವಸ್ಥೆಯ ಮೂಲಭೂತ ಸಮಸ್ಯೆಗಳ ಕುರಿತು ಚರ್ಚೆ ಶುರುವಾಗಿ 180 (1833) ವರ್ಷಗಳಾಗಿವೆ. ಆದರೆ ಅದು ಬಗೆಹರಿಯುವ ಲಕ್ಷಣಗಳಾವುವೂ ಕಾಣುತ್ತಿಲ್ಲ. ಒಂದಾದ ಮೇಲೊಂದು ವರದಿಗಳು, ನೀತಿಗಳು, ಕಾಯ್ದೆ ಎಲ್ಲವೂ ಬಂದಿವೆ. ಅವೆಲ್ಲವೂ ಸೇರಿಕೊಂಡು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿವೆ. ಆ ಚರ್ಚೆಯ ಫಲಿತವಾಗಿ 1835ರಲ್ಲಿ ಬಂದ ಮೆಕಾಲೆ ಮಿನಿಟ್ಸ್ ಭಾರತದಲ್ಲಿ ಅದುವರೆಗೆ ಜಾರಿಯಲ್ಲಿದ್ದ ಮನು ಪ್ರಣೀತ ಶಿಕ್ಷಣ ವ್ಯವಸ್ಥೆಯನ್ನು ಸ್ಥಿರೀಕರಿಸಿತು. ಅಲ್ಲಿಂದ ಮುಂದಕ್ಕೆ 1966ರ ಕೊಠಾರಿ ಕಮೀಷನ್‌ನವರೆಗೆ, ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಶಿಕ್ಷಣವನ್ನು ಸಾರ್ವತ್ರೀಕರಿಸುವ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ಕೆಲವು ಹೆಜ್ಜೆಗಳನ್ನಿಡಲಾಯಿತು. ಆದರೆ ಅದು ಸಾರ್ವತ್ರೀಕರಣಗೊಳ್ಳಲಿಲ್ಲ.

ಒಂದು ಮಟ್ಟಿಗಿನ ಸಾರ್ವತ್ರೀಕರಣವು ವಿಶ್ವಬ್ಯಾಂಕ್ ಪ್ರಣೀತ ಆರ್ಥಿಕ ನೀತಿಯನುಸಾರ 1990ರ ನಂತರ ಜಾರಿಗೆ ಬರಲಾರಂಭಿಸಿತು. ಆದರೆ ಈ ಸಾರ್ವತ್ರೀಕರಣವು ಶೇ.100ರಷ್ಟು ಮಕ್ಕಳನ್ನು ಶಾಲೆಗೆ ತರಲು ಸಫಲವಾಗದಿದ್ದರೂ, ಎಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾತ್ರ ಮಾಡುವ ನಿಟ್ಟಿನಲ್ಲಿ ಸಾಗಿದವು. ಆದರ ಮುಂದುವರಿಕೆಯಾಗಿ ದೇಶದ ಜಾತಿ ವ್ಯವಸ್ಥೆ ಹೇಗಿದೆಯೋ, ಹಾಗೆ ಒಂದು ಶ್ರೇಣೀಕೃತವಾದ ಶಿಕ್ಷಣ ವ್ಯವಸ್ಥೆಯು ಇಂದು ಸ್ಥಿರವಾಗಿ ನೆಲೆ ನಿಂತಿದೆ.




ಅತ್ಯುತ್ತಮವೆಂದು ಹೇಳಲಾಗುವ ದುಬಾರಿ ಖಾಸಗಿ ಶಾಲೆಗಳಲ್ಲೂ ಮಕ್ಕಳ ಬೌದ್ಧಿಕವಾಗಿ ಅರಳಲು ಬೇಕಾದ ವೈಜ್ಞಾನಿಕವಾದ ಶಿಕ್ಷಣವನ್ನು ನೀಡಲಾಗುತ್ತಿಲ್ಲ. ಇನ್ನು ಪ್ರಜಾತಾಂತ್ರಿಕವಾದ, ದೇಶ ಕಟ್ಟಲು ಬೇಕಾದ ರೀತಿಯ ಶಿಕ್ಷಣದ ಪ್ರಶ್ನೆಯಂತೂ ದೂರವೇ ಉಳಿಯಿತು. ಈ ದೇಶದ ನೈಜ ಪರಿಸ್ಥಿತಿಯನ್ನು ಪದರಪದರವಾಗಿ ಪ್ರತ್ಯೇಕಿಸಿ, ಒಂದೊಂದು ಪದರಕ್ಕೆ ಒಂದೊಂದು ರೀತಿಯ ಶಾಲೆಗಳನ್ನು ತೆರೆದ ಮೇಲೆ ಅಲ್ಲಿ ಪ್ರಜಾತಂತ್ರದ ಪ್ರಶ್ನೆ ಎಲ್ಲಿ ಉಳಿಯುತ್ತದೆ?

ಹೀಗಾಗಿ ಶಿಕ್ಷಣ ಹಕ್ಕು ಕಾಯ್ದೆ 2009 ಜಾರಿಗೆ ಬಂದ ಮೇಲೂ, ಶೇ.100ರಷ್ಟು ಮಕ್ಕಳನ್ನು ಶಾಲೆಗೆ ತರಲಾಗುತ್ತಿಲ್ಲ; ಶೇ.25ರಷ್ಟು ದುರ್ಬಲ ಸಮುದಾಯಗಳ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ಸೇರಿಸಿಕೊಳ್ಳಲೇಬೇಕಾದ ನಿಯಮವು ಒಳ್ಳೆಯದನ್ನು ಮಾಡಿದ್ದಕ್ಕಿಂತ ಸಮಸ್ಯೆಯನ್ನೇ ಮಾಡಿದೆ. ಮೊದಲು ಈ ಕಾಯ್ದೆಯನ್ನು ಜಾರಿಗೆ ತಂದ ದೆಹಲಿ ರಾಜ್ಯದ ಅನುಭವಗಳನ್ನು ಅಧ್ಯಯನ ಮಾಡಿದ ವರದಿಗಳು ಅದನ್ನೇ ಹೇಳಿವೆ. ವಾಸ್ತವದಲ್ಲಿ ದುರ್ಬಲ ಸಮುದಾಯಗಳಿಗೆ ಸೇರಿದ ಈ ಶೇ.25 ಮಕ್ಕಳಲ್ಲಿ ಹೆಚ್ಚಿನವರು, ಸರ್ಕಾರೀ ಶಾಲೆಗಳಿಗೆ ಸೇರಿಕೊಂಡು ತಮ್ಮದೇ ಸಮುದಾಯಗಳ ಮಕ್ಕಳಿಗಿಂತ ಹಿಂದುಳಿಯುತ್ತಿದ್ದಾರೆ ಮತ್ತು ಶಾಲೆಯಿಂದ ಹೊರಗುಳಿಯುವವರಲ್ಲಿ (ಡ್ರಾಪ್ ಔಟ್) ಈ ಮಕ್ಕಳ ಪ್ರಮಾಣ ಹೆಚ್ಚಾಗಿದೆ.

ದೇಶ ಕಟ್ಟಲು ಸಾಧ್ಯವಾಗುವ ರೀತಿಯಲ್ಲಿ, ಮಕ್ಕಳ ಮನೋವಿಕಾಸವು ಅತ್ಯುತ್ತಮವಾದ ರೀತಿಯಲ್ಲಿ ಸಾಧ್ಯವಾಗುವಂತೆ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳಬೇಕು ಎಂಬುದು ಈ ಹೊತ್ತಿನ ಶಿಕ್ಷಣ ನೀತಿಯ ಉದ್ದೇಶವೇ ಆಗಿಲ್ಲ. ಬದಲಿಗೆ, ಶೇ.100ರಷ್ಟು ಮಕ್ಕಳು ಶಾಲೆಗೆ ಹೋಗಬೇಕು; ಅಂದರೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಆಗಬೇಕು ಎಂಬುದಷ್ಟೇ ಗುರಿಯಾಗಿದೆ. ಸರ್ಕಾರೀ ಶಾಲೆಗಳಲ್ಲಿನ ಗುಣಮಟ್ಟದ ವಿಚಾರದಲ್ಲಿ ಇಂತಹ ಯಾವ ಗುರಿಗಳೂ ಇಲ್ಲವಾಗಿದೆ. ಆದರೆ ಸಮಾಜದಲ್ಲಿ ಹಿಂದಿಗಿಂತ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆನ್ನುವ ತುಡಿತ ಪೋಷಕರಲ್ಲಿ ಹಿಂದಿಗಿಂತ ಹೆಚ್ಚಾಗಿದೆ. ಇವೆಲ್ಲದರ ಪರಿಣಾಮವಾಗಿ ಸರ್ಕಾರೀ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ; ಖಾಸಗಿ ಶಾಲೆಗಳ ದಂಧೆ ತೀವ್ರಗತಿಯಲ್ಲಿ ವಿಸ್ತರಿಸುತ್ತಿದೆ.


ಇದು ಸರ್ಕಾರದ ನೀತಿಯ ಫಲ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಅದು ಉದ್ದೇಶಪೂರ್ವಕ ಎನ್ನುವುದರಲ್ಲೂ ನಮಗೆ ಸಂದೇಹವಿರಬೇಕಾದ್ದಿಲ್ಲ. ಹೀಗಿರುವಾಗ ಶಿಕ್ಷಣ ಕ್ಷೇತ್ರದ ಸುಧಾರಣೆ ಬಯಸುವವರ ಹಕ್ಕೊತ್ತಾಯ ಏನಾಗಿರಬೇಕು ಎಂಬುದು ಪ್ರಶ್ನೆ. ಅದು ಸರ್ಕಾರೀ ಶಾಲೆಗಳಿಗೆ ಇನ್ನೊಂದಷ್ಟು ಸೌಲಭ್ಯಗಳನ್ನು ಕೇಳುವುದು, ಅಲ್ಲಿ ಇಂಗ್ಲಿಷ್ ಕಲಿಸಲು ಕೇಳುವುದು, ಕಂಪ್ಯೂಟರ್ ಕಲಿಸಿ ಎನ್ನುವ ಒತ್ತಾಯ ಹಾಕುವುದು, ಇಂಗ್ಲಿಷ್ ಮಾಧ್ಯಮವೇ ಇರಲಿ. ಎನ್ನುವುದು ಇತ್ಯಾದಿ ಇತ್ಯಾದಿ ಅಂಶಗಳು ಚರ್ಚೆಯಲ್ಲಿವೆ. ಆದರೆ ಅವ್ಯಾವುವೂ ಸಮಸ್ಯೆಯನ್ನು ಬಗೆಹರಿಸುತ್ತಿಲ್ಲ. ಬದಲಿಗೆ ಜಟಿಲಗೊಳಿಸುತ್ತಿವೆ. ಶಿಕ್ಷಣ ವ್ಯವಸ್ಥೆಯಲ್ಲಿ ಅಸಮಾನತೆ ಹೆಚ್ಚಾಗುತ್ತಿರುವ ಈ ಸಂದರ್ಭದ ದಿಕ್ಕು ಸ್ವಲ್ಪವೂ ಬದಲಾಗುತ್ತಿಲ್ಲ.

ಹೀಗಾಗಿ ಕಳೆದ 40 ವರ್ಷಗಳಿಗೂ ಹೆಚ್ಚು ಕಾಲ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಹಲವಾರು ತಜ್ಞರು ಒಂದು ಅಭಿಪ್ರಾಯಕ್ಕೆ ಬಂದು ತಲುಪಿದ್ದಾರೆ. ಅದೇನೆಂದರೆ ಈ ಎಲ್ಲಾ ಸಮಸ್ಯೆಗಳಿಗೆ ಒಂದೇ ಉತ್ತರ: ಅದು ಕಾಮನ್ ಸ್ಕೂಲ್, ಸಮಾನ ಶಾಲೆ. ಒಂದು ಶಾಲೆಯ ನೆರೆಹೊರೆಯಲ್ಲಿರುವ ಎಲ್ಲಾ ಮಕ್ಕಳೂ, ಸಂಪೂರ್ಣವಾಗಿ ಸರ್ಕಾರದ ಅನುದಾನವನ್ನು ಪಡೆಯುವ, ಪೋಷಕರು-ಶಿಕ್ಷಕರ ಸಂಘದಿಂದ ನಡೆಯುವ ಒಂದೇ ಶಾಲೆಗೆ ಹೋಗುವುದು. ಇದು ಇದ್ದಕ್ಕಿದ್ದಂತೆ ನಮ್ಮ ದೇಶದಲ್ಲಿ ಮಾತ್ರ ಪ್ರಯೋಗವಾಗುವ ಹೊಸ ಪದ್ಧತಿಯೇನಲ್ಲ. ಜಗತ್ತಿನಲ್ಲಿ ಸಾರ್ವತ್ರಿಕ ಶಿಕ್ಷಣವನ್ನೂ, ಗುಣಮಟ್ಟದ ಶಿಕ್ಷಣವನ್ನೂ ಸಾಧಿಸಿರುವ ಎಲ್ಲಾ ದೇಶಗಳಲ್ಲಿ ಇರುವುದು ಇದೇ ಪದ್ಧತಿ. ಎಷ್ಟರಮಟ್ಟಿಗೆಂದರೆ ಕಾಮನ್ ಸ್ಕೂಲ್ ಇಲ್ಲದ ಒಂದು ದೇಶವೂ, ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಿದ ಉದಾಹರಣೆಯೇ ಇಲ್ಲ ಎಂಬ ಮಟ್ಟಿಗೆ. ಇದು ಕೇವಲ ಅಮೆರಿಕಾ, ಕೆನಡಾಗಳ ವಿಚಾರದಲ್ಲಿ ಮಾತ್ರವಲ್ಲ, ಅಷ್ಟು ಶ್ರೀಮಂತವಲ್ಲದ ಕ್ಯೂಬಾದ ವಿಚಾರದಲ್ಲೂ ನಿಜವಾಗಿದೆ.

ಯಾರು ಶಿಕ್ಷಣ ನೀತಿಯನ್ನು ರೂಪಿಸುತ್ತಾರೋ, ಯಾರು ಶಿಕ್ಷಣ ಕ್ಷೇತ್ರಕ್ಕೆ ಅನುದಾನ ಮಂಜೂರು ಮಾಡುವ ಹುದ್ದೆಗಳಲ್ಲಿರುತ್ತಾರೋ, ಯಾರು ಪಠ್ಯಕ್ರಮವನ್ನು ರೂಪಿಸುತ್ತಾರೋ, ಯಾರು ಇವೆಲ್ಲವನ್ನೂ ಜಾರಿ ಮಾಡುವ ವಿವಿಧ ನೌಕರಿಗಳಲ್ಲಿರುತ್ತಾರೋ ಅವರ ಮಕ್ಕಳು ಯಾರೂ ಹೋಗದ ಸರ್ಕಾರಿ ಶಾಲೆಗಳ ಗುಣಮಟ್ಟ ಚೆನ್ನಾಗಿ ಇರಲು ಹೇಗೆ ಸಾಧ್ಯ? ಅದು ಚೆನ್ನಾಗಿ ಆಗಲು ಇಂದೂ ಸಾಧ್ಯವಿಲ್ಲ, ಎಂದೆಂದೂ ಸಾಧ್ಯವಿಲ್ಲ. ಬದಲಿಗೆ, ಅದು ದಿನೇದಿನೇ ಹಾಳಾಗುತ್ತಲೇ ಹೋಗುತ್ತದೆ. ಅದೇ ಸಂದರ್ಭದಲ್ಲಿ ಈ ದೇಶದ ಎಲ್ಲಾ ಮಕ್ಕಳೂ ಒಂದೇ ರೀತಿಯ ಶಾಲೆಯಲ್ಲಿ ಕಲಿತರೆ ಮಾತ್ರ ಅವರೆಲ್ಲರೂ (ಶ್ರೀಮಂತರ ಮಕ್ಕಳೂ ಸಹ) ಒಳ್ಳೆಯ ಶಿಕ್ಷಣವನ್ನು ಪಡೆದುಕೊಳ್ಳಲು, ಅಂದರೆ ಎಲ್ಲಾ ಸಮುದಾಯಗಳ ಅನುಭವದಿಂದ ಉತ್ಪತ್ತಿಯಾಗುವ ಜ್ಞಾನವನ್ನು ಪಡೆದುಕೊಳ್ಳಲು, ದೇಶ ಕಟ್ಟಲು ಬೇಕಾದ ಶಿಕ್ಷಣ, ದೇಶ ಬದಲಿಸಲು ಬೇಕಾದ ಶಿಕ್ಷಣ ಪಡೆದುಕೊಳ್ಳಲು ಸಾಧ್ಯ. ಸರ್ಕಾರೀ ಶಾಲೆಗಳಲ್ಲಿ ಗುಣಮಟ್ಟವನ್ನು ಖಾತರಿ ಪಡಿಸುವ ಅತ್ಯುತ್ತಮ ಸಾಧನ ಇದೇ ಆಗಿದೆ.

ಶಿಕ್ಷಣಕ್ಕಿರುವ ಮಹತ್ವ ಅಂಥದ್ದು. ಸಮಾನ ಶಾಲೆಗೆ ಇರುವ ಮಹತ್ವ ಅಂಥದ್ದು. ಇದನ್ನೇ ಈ ದೇಶದ ಮೊಟ್ಟ ಮೊದಲ ಶಿಕ್ಷಣ ಆಯೋಗ 'ಕೊಠಾರಿ ಕಮೀಷನ್' ಸಹ ಪ್ರತಿಪಾದಿಸಿದೆ. ಇದನ್ನೇ ಇಂದು ದೇಶದ ಅತ್ಯುತ್ತಮ ಶಿಕ್ಷಣ ತಜ್ಞರೆಲ್ಲರೂ ಸೇರಿ ರಚಿಸಿಕೊಂಡಿರುವ 'ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆ'ಯು ಪ್ರತಿಪಾದಿಸುತ್ತಿದೆ. ಅದರ ರೂವಾರಿಗಳಲ್ಲೊಬ್ಬರಾದ ಡಾ.ಅನಿಲ್ ಸದ್ಗೋಪಾಲ್ ದಶಕಗಳ ಕಾಲ ಮಧ್ಯಪ್ರದೇಶದ ಹೊಷಂಗಾಬಾದ್ ಜಿಲ್ಲೆಯ ಹಳ್ಳಿಗಳಲ್ಲಿ ವಿಜ್ಞಾನವನ್ನು ಅತ್ಯುತ್ತಮವಾಗಿ ಮಕ್ಕಳಿಗೆ ಸ್ಥಳೀಯ ಭಾಷೆಯಲ್ಲಿ ಕಲಿಸುವ ಯಶಸ್ವಿ ಪ್ರಯೋಗ ನಡೆಸಿದವರು. ಅವರೇ ನಂತರ ದೆಹಲಿ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಡೀನ್ ಆಗಿಯೂ ಕೆಲಸ ಮಾಡಿದ್ದರು. ಅದೇ ರೀತಿಯ ನಿಲುವನ್ನು ಕರ್ನಾಟಕದಲ್ಲಿ ಯು.ಆರ್.ಅನಂತಮೂರ್ತಿಯವರೂ, ದೇವನೂರು ಮಹಾದೇವರೂ ಹೊಂದಿದ್ದಾರೆ. ಶಿಕ್ಷಣದ ಕಾರ್ಪೋರೇಟೀಕರಣ, ಮಿಕ್ಕೆಲ್ಲಾ ಕ್ಷೇತ್ರಗಳ ಖಾಸಗೀಕರಣಕ್ಕಿಂತ ಅಪಾಯಕಾರಿಯಾದುದಾಗಿದೆ ಎಂಬ ನಿಲುವು ಇವರೆಲ್ಲರದ್ದೂ ಆಗಿದೆ.



ಈ ಸಮಾನ ಶಾಲೆಗಾಗಿನ ಹೋರಾಟವು ಸಮಾಜದ ಇತರ ಕ್ಷೇತ್ರಗಳಲ್ಲಿನ ಬದಲಾವಣೆ ಮತ್ತು ಸಮಾನತೆಗಾಗಿನ ಹೋರಾಟದಿಂದ ಹೊರತಾಗಿರುವ ಹೋರಾಟವಲ್ಲ. ಆದರೆ ಇತರೆಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆಗಾಗಿ ಹೋರಾಟ ಮಾಡುತ್ತಿರುವವರು ನಿರ್ಲಕ್ಷಿಸಲು ಸಾಧ್ಯವಾಗದ ಚಳವಳಿ 'ಸಮಾನ ಶಿಕ್ಷಣಕ್ಕಾಗಿನ ಚಳವಳಿ'. ಕರ್ನಾಟಕದ ಒಟ್ಟು ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿ ಇಂದು ಒಂದು ಹೊರಳುಘಟ್ಟದಲ್ಲಿದೆ. ಈ ಸಂದರ್ಭವು ಎಲ್ಲಾ ಪ್ರಜ್ಞಾವಂತರನ್ನು ಈ ಸಮಾನ ಚಳವಳಿಯಲ್ಲಿ ಒಂದುಗೂಡಿಸಲು ಸಾಧ್ಯವಾದರೆ, ಅದು ಚಾರಿತ್ರಿಕವಾದ ಬದಲಾವಣೆಯನ್ನು ತರಬಲ್ಲುದು. ■

ಕಾಮನ್ ಸ್ಕೂಲ್ ಮತ್ತು ಭಾಷಾ ತೊಡಕು

ಎಲ್ಲರಿಗೂ ಮಾತೃಭಾಷೆಯಲ್ಲೇ ಶಿಕ್ಷಣ ನೀಡುವುದೇ ವೈಜ್ಞಾನಿಕವೆಂತಲೂ ಹೇಳುತ್ತೇವೆ. ಈ ದೇಶದಲ್ಲಿ ಸಾವಿರಾರು ಭಾಷೆಗಳಿವೆ. ಅದರ ಜೊತೆಗೆ ಅತ್ಯುತ್ತಮವಾದ ರೀತಿಯಲ್ಲಿ ಇಂಗ್ಲಿಷನ್ನೂ ಕಲಿಸಬೇಕೆಂದು ಕೇಳುತ್ತೇವೆ. ಹಾಗಿದ್ದ ಮೇಲೆ ವಿವಿಧ ಭಾಷೆಗಳನ್ನಾಡುವ ಎಲ್ಲಾ ಮಕ್ಕಳೂ ಒಂದೇ ಶಾಲೆಯಲ್ಲಿ ಕಲಿಯಲು ಹೇಗೆ ಸಾಧ್ಯ? ಅವರಿಗೆ ಸಮಾನವಾದ ಭಾಷೆ ಯಾವುದು? ಶಿಕ್ಷಣ ಶಾಸ್ತ್ರ (pedagogy) ಪರಿಣಿತರ ಪ್ರಕಾರ ಒಂದೇ ಶಾಲೆಯಲ್ಲಿ ಮಾತ್ರವಲ್ಲ, ಒಂದೇ ತರಗತಿಯಲ್ಲಿ ವಿವಿಧ ಭಾಷೆಗಳನ್ನಾಡುವ ಮಕ್ಕಳು ಕಲಿಯಲು ಸಾಧ್ಯ.


ಮೂರ್ನಾಲ್ಕು ಭಾಷೆಗಳನ್ನಾಡುವ ಪರಿಸರವಿರುವ (ಉದಾಹರಣೆಗೆ ಕನ್ನಡ, ತೆಲುಗು, ತಮಿಳು, ಉರ್ದು ಮಾತನಾಡುವ ಜನರಿರುವ ಬೆಂಗಳೂರಿನ ಒಂದು ಸ್ಲಂ ಎಂದಿಟ್ಟುಕೊಳ್ಳಿ. ಶೇ.30ರಷ್ಟು ಸ್ಲಂಗಳಲ್ಲಿ ಕನಿಷ್ಠ ನಾಲ್ಕು ಭಾಷೆ ಮಾತನಾಡುತ್ತಾರೆ) ವಸತಿ ಪ್ರದೇಶಗಳಲ್ಲಿ ಮಕ್ಕಳು ಹೇಗೆ ಬೆಳೆಯುತ್ತಾರೆ? ಅವರಿಗೆ ಅಲ್ಲಿನ ಭಾಷೆ ಯಾವತ್ತಾದರೂ ತೊಡಕಾಗಿದೆಯೋ ಅಥವಾ ಅದು ಒಂದು ವಿಶೇಷ ಅನುಕೂಲವಾಗಿದೆಯೋ? ಅದು ಅನುಕೂಲವೇ ಆಗಿದೆ. ಶಿಕ್ಷಣವೆಂದರೆ ಅಕ್ಷರಗಳನ್ನು ಕಲಿಯುವುದು, ಬರೆಯುವುದು, ಓದುವುದು ಮಾತ್ರ ಎಂದಾದರೆ ಮಾತ್ರ ಸಮಸ್ಯೆ. ಶಿಕ್ಷಣವನ್ನು ಕೇವಲ ಪಠ್ಯಪುಸ್ತಕಗಳನ್ನು ಜೊತೆಗೆ ತರಗತಿಯೊಳಗಿನವರಲ್ಲಿ ಕಲಿಸುವ ಜವಾಬ್ದಾರಿ ಕೇವಲ ಮಾಸ್ತರರದ್ದಲ್ಲ ಎಂದು ಬಗೆದರೆ ಈ ಸಮಸ್ಯೆ ಬಗೆಹರಿದುಹೋಗಿಬಿಡುತ್ತದೆ.

ಇದು ಪ್ರಾಕ್ಟಿಕಲ್ಲಾ? ಅಥವಾ ಸುಂದರವಾದ ಕನಸಾ?

ಪ್ರಪಂಚದಲ್ಲಿ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಾಗಿರುವ (ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಶೀಲ) ರಾಷ್ಟ್ರಗಳಲ್ಲೆಲ್ಲಾ ಇರುವುದು ಕಾಮನ್ ಸ್ಕೂಲ್ ಪದ್ಧತಿಯೇ ಎಂಬುದು ತಿಳಿಯದೇ ಹಲವರು ಕೇಳುತ್ತಾರೆ 'ಇದು ಅತ್ಯುತ್ತಮ ಮಾದರಿ ಎಂಬುದೇನೋ ಸರಿ, ಆದರೆ ಇದು ಸಾಧ್ಯವಾ? ಪ್ರಾಕ್ಟಿಕಲ್ಲಾ?' ಯಾವ ಶಿಕ್ಷಣ ವ್ಯವಸ್ಥೆಯು ಶೇ.80ರಷ್ಟು ವಿದ್ಯಾರ್ಥಿಗಳನ್ನು ದಡ್ಡರೆಂದು ನೇರವಾಗಿ ಅಥವಾ ಪರೋಕ್ಷವಾಗಿ ಸಾರುವ ಶಿಕ್ಷಣ ವ್ಯವಸ್ಥೆ ಕಾರ್ಯಸಾಧುವಾ? ಆ ರೀತಿ ಹೊರದೂಡಲ್ಪಟ್ಟವರಲ್ಲಿ ಶೇ.99ರಷ್ಟು ವಿದ್ಯಾರ್ಥಿಗಳು ಬಡವರು, ಹಿಂದುಳಿದವರು, ದಲಿತರು, ಆದಿವಾಸಿಗಳು ಮತ್ತು ಮುಸ್ಲಿಮರೇ ಆಗಿದ್ದಾರೆ. ಇದು ಹೀಗೆಯೇ ಇರುವುದು ಪ್ರಾಕ್ಟಿಕಲ್ಲಾ?

ಹಾಗೆ ನೋಡಿದರೆ, ಈ ಸಮಾಜದಲ್ಲಿ ಸಮಾನತೆ ಬರುವುದು ಸಾಧ್ಯವಾ ಎಂಬ ಪ್ರಶ್ನೆಯನ್ನೂ ಹಾಕಿಕೊಳ್ಳಬೇಕಾಗುತ್ತದೆ. ಮಹಿಳೆಯರು ಪುರುಷರಿಗೆ ಸಮಾನವಾದ ಸ್ಥಾನವನ್ನು ಪಡೆದುಕೊಳ್ಳುವುದು, ಜಾತಿವಿನಾಶ ಇವೂ ಸುಂದರವಾದ ಕನಸೇ ಅಲ್ಲವೇ? ಅವು ಕಾರ್ಯಸಾಧುವಾ? ಒಂದು ವೇಳೆ ಅದನ್ನು ಕೇವಲ ಕನಸು ಎಂತಲೇ ಇಟ್ಟುಕೊಳ್ಳೋಣ. ಆ ಕನಸಿನ ಸಾಕಾರಕ್ಕಾಗಿ ದುಡಿಯುವುದು ಮಾತ್ರವೇ, ನಮ್ಮನ್ನು ಸಮಾನತೆಯೆಡೆಗೆ ಒಂದೊಂದೇ ಹೆಜ್ಜೆಯಷ್ಟನ್ನಾದರೂ ಕರೆದುಕೊಂಡು ಹೋಗುತ್ತದೆ.

ಆದರೆ, ಸಮಾನ ಶಾಲೆಯ ಜಾರಿಗಾಗಿ ಹೋರಾಟ ಮಾಡುತ್ತಿರುವವರ ಖಚಿತವಾದ ಅಭಿಪ್ರಾಯವೇನೆಂದರೆ, ಕಾಮನ್ ಸ್ಕೂಲ್‌ನ ಗುರಿಯಿಟ್ಟುಕೊಂಡು, ಆ ದಿಕ್ಕಿನಲ್ಲಿ, ಸಾವಿರಾರು ಪುಟ್ಟಪುಟ್ಟ ಹಕ್ಕೊತ್ತಾಯಗಳ ಈಡೇರಿಕೆಗೆ ಮಾಡುವ ಹೋರಾಟ ಮಾತ್ರವೇ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸುವುದು ಸಾಧ್ಯ. ದೂರದ ಗುರಿ ಮತ್ತು ಅದನ್ನು ಸಾಕಾರಗೊಳಿಸುವ ಬಿಡಿಬಿಡಿ ಅಂಶಗಳು ಎರಡೂ ಮುಖ್ಯ. ಆ ಗುರಿಯ ಸ್ಪಷ್ಟ ಪರಿಕಲ್ಪನೆ ಇಲ್ಲದಿದ್ದರೆ, ನಾವೆಂದಿಗೂ ಇಂದಿನ ಶಿಕ್ಷಣ ಅವ್ಯವಸ್ಥೆಯನ್ನು ಸುಧಾರಿಸುವುದೂ ಸಾಧ್ಯವಿಲ್ಲ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸರಸ್ವತಿ - ಅವಳ ಸ್ಥಿತಿಗತಿ

ಧುಂಡಿ-ಅರಣ್ಯಕನೊಬ್ಬ ಗಣಪತಿಯಾದ ಕಥೆಯಿಂದ ಸರಸ್ವತಿಯು ದೈವಜ್ಞನ ಶಾಪಕ್ಕೆ ಮತ್ತು ಘಾತಕ್ಕೆ ತುತ್ತಾದಳು. ಬುಡಕಟ್ಟು ಸಮುದಾಯದ ಯುವಕನೊಬ್ಬ ವೈದಿಕ ಬ್ರಾಹ್ಮಣರ, ಆರ್ಯ ದೇವತೆಗಳ ಮತ್ತು ವರ್ಣಾಶ್ರಮದ ವರ್ಗಗಳ ವಿರುದ್ಧವಾಗಿ ಸಾಮಾಜಿಕ ಬಂಡಾಯ ಮಾಡಿದ ಕಾರಣಕ್ಕಾಗಿ ಮಹಾಗಣಪತಿಯಾದನೆಂದೂ, ಅವನು ಶಿವನನ್ನು ಎದುರಿಸಿದ ಮತ್ತು ತನ್ನ ಸಾಕು ತಾಯಿ ಪಾರ್ವತಿಯನ್ನು ಮಾನುಷ ಸಹಜವಾದ ಸ್ತ್ರೀಯೆಂದು ನೋಡಿದ ಪಾಪವನ್ನು ಸರಸ್ವತಿಯು ತನ್ನ ಸಾಹಿತ್ಯದಲ್ಲಿ ಉಲ್ಲೇಖಿಸಿದ್ದು ವೈದಿಕ ಬ್ರಾಹ್ಮಣರ ಮತ್ತು ಅವರನ್ನು ತಮ್ಮ ತಾರಕ ಪುರುಷರೆಂದು ನಂಬಿದ ಇತರ ಮನುಷ್ಯರಿಗೂ ಶ್ರದ್ಧಾಘಾತವಾಯಿತೆಂದು ಸೋಮಯಾಜಿಯೆಂಬ ಭವಿಷ್ಯತ್ತನ್ನೆಲ್ಲಾ ಹೇಳುವಂತ ದೈವಜ್ಞರು ಕ್ಷುದ್ರರಾಗಿ ಈ ಸರಸ್ವತಿಯು ಕಂಗೆಡುವಂತೆ ಸರಪರನೆ ಆಕೆಯನ್ನು ವಿವಸ್ತ್ರ ಮಾಡಿ ಘಾತಿಸಿದನಂತೆ. ಆಗ ದ್ವಾರಕಾನಾಥರೆಂಬ ಹುಲು ಮಾನವರೊಬ್ಬರು "ಹೇ ದೈವವನ್ನೇ ಅರಿತಿರುವ ದೈವಜ್ಞನೇ, ಸರ್ವವನ್ನೂ ಅರಿತಿರುವ ಸರ್ವಜ್ಞನೇ, ನಮ್ಮ ಮನೆಯ ಹಿರಿಯರು ಸರಸ್ವತಿಯನ್ನು ಅಪಮಾನಿಸಿದರೆ ನಿನಗೆ ವಿದ್ಯೆಯು ಹತ್ತದೆಂದು ತಿಳಿವಳಿಕೆ ನೀಡಿದ್ದರು. ಹಾಗೂ ನಾವು ವಿದ್ಯೆಯನ್ನು ಕಲಿಯುವ ಈ ಸರಸ್ವತಿಯನ್ನು ಗೌರವಿಸುತ್ತೇವೆ" ಎಂದು ಆಕೆಯ ಘಾತಗೊಂಡ ಅಂಗಗಳನ್ನು ಜೋಡಿಸಿ, ಅವಳಿಗೆ ವಸ್ತ್ರವನ್ನು ಹೊದಿಸಿದರಂತೆ. ಅಂದು ಈ ವೈದಿಕ ಬ್ರಾಹ್ಮಣರ ಬಂಧನದಿಂದ ನನ್ನನ್ನು ಬಿಡುಗಡೆಗೊಳಿಸು ಎಂದು ಅವಲತ್ತುಕೊಂಡ ಸರಸ್ವತಿಯು ನ್ಯಾಯದೇವತೆಯ ದೇಗುಲದಲ್ಲಿ ಕಾದು ಕುಳಿತುಕೊಂಡಳೆಂದು ಧುಂಡಿ ಪುರಾಣವು ಹೇಳುತ್ತದೆ.

ಪ್ರಾರಂಭದಲ್ಲೇ ವಿದ್ಯಾಧಿದೇವತೆ ಶಾರದಾಂಬೆಯ ಮಂತ್ರವನ್ನು ಉಗುಳುತ್ತಾ ರಾಜಕಾರಣಿಗಳ, ಮುಗ್ಧ ಮತ್ತು ಮೂರ್ಖ (ಓನ್ಲೀ) ಶ್ರೀಮಂತರ ಭವಿಷ್ಯತ್ತನ್ನು ಹೇಳುವ ಆ ಜ್ಯೋತಿಷ್ಯ ರತ್ನಾಕರನಿಗೆ ಭೂತ(ಇತಿಹಾಸ)ವಾಗಲಿ, ವರ್ತಮಾನ (ಪ್ರಸ್ತುತ ವೈಚಾರಿಕಪ್ರಜ್ಞೆ)ವಾಗಲಿ, ತಾವೇ ಉದ್ಧರಿಸುವ ಮಂತ್ರಗಳ ಒಳನೋಟವಾಗಲಿ, ಪಾಪ ಹೇಗೆ ತಿಳಿಯಬೇಕು. ಆತನು ಕರತಲಾಮಲಕ ಮಾಡಿಕೊಂಡಿದ್ದು ಬರಿಯ ಭವಿಷ್ಯವಾಣಿಗಳನ್ನು ಉದುರಿಸುವುದು. ವಸ್ತುವಿಷಯವನ್ನೇ ತಿಳಿಯದೇ ವಾಸ್ತುದೋಷವನ್ನು ಹೇಳುವ ವ್ಯಾಪಾರಸ್ಥನವನು.

ದೈವ ರಹಸ್ಯವನ್ನೇ ತಿಳಿದಂತಹ ದೈವಜ್ಞನಿಗೆ ಈ ಕೆಲವು (ಅವರ ಶ್ರದ್ಧಾ ನಂಬಿಕೆಯ ಪ್ರಕಾರವೇ) ಕಾಮನ್ಸ್‌ಸೆನ್ಸ್‌ಗಳನ್ನು ರೂಢಿಸಿಕೊಳ್ಳಲು ಆತನ ಜೀವಮಾನದಲ್ಲಿ ಸಮಯ ಸಿಗದೇ ಹೋಗಿದ್ದು ಆತನ ಆತ್ಮಕಥೆಯೊಳಗಿನ ಒಂದು ದುರಂತ. ಕಾ.ಸೆ (ಕಾಮನ್ಸ್ ಸೆನ್ಸ್) 1- ಸಕಲ ವಿದ್ಯಾಧಿದೇವತೆಯಾದ ಸರಸ್ವತಿಯು ಆ ಧುಂಡಿ ಎಂಬ ಸಾಹಿತ್ಯ ಕೃತಿಯಲ್ಲಿ ಅಡಗಿದ್ದಳು. ಕಾ.ಸೆ 2- ಕಲೆ ಮತ್ತು ಸಾಹಿತ್ಯದ ಪ್ರೇರಣಾಧಿದೇವತೆಯಾದ ಸರಸ್ವತಿಯು ಧುಂಡಿ ಪುರಾಣವನ್ನು ಬರೆದ ಕೃತಿಕಾರನಿಗೂ ಬರೆಯಲು ಪ್ರೇರೇಪಿಸಿದ್ದಳು. ಕಾ.ಸೆ. 3- ತನಗೆ ಭವಿಷ್ಯತ್ತನ್ನು ಹೇಳುವ ಜ್ಞಾನವನ್ನು ಅನುಗ್ರಹಿಸಿರುವ ಆ ಸರಸ್ವತಿ, ಅವಳ ಇನ್ನೊಂದು ರೂಪವನ್ನೇ ಅವಮಾನಿಸಿದರೆ ಶಪಿಸಿ ತೊರೆದು ಹೋಗುವಳು. ಕಾ.ಸೆ 4- ಅಣುರೇಣುತೃಣಕಾಷ್ಠವೂ ಯಾರ ಅನುಜ್ಞೆಯಿಲ್ಲದೇ ಅಲುಗಾಡಲಾರದೋ ಅದೇ ಈ ಕೃತಿಯು ರೂಪುಗೊಳ್ಳುವುದಕ್ಕೂ ಕಾರಣವಾಗಿದ್ದು, ಅದನ್ನು ಮಿನಿಮಮ್ ರೆಸ್ಪೆಕ್ಟ್‌ನಿಂದಲೂ ನೋಡದೇ ಅನುಮಾನಿಸುತ್ತಾ ಅವಮಾನಿಸಬಾರದು.

ಹೋಗಲಿ ಬಿಡಿ, ಮಾಡಿದವರ ಪಾಪ ಬರೆಯುವರ ಕೈಗೇಕೆ? ಓದುವವರ ಕಣ್ಣುಗಳಿಗೇಕೆ?

ವಿದ್ಯಾಧಿದೇವತೆ

ತಾನು ಬಾಲ್ಯದಿಂದಲೂ ಹಳೆಯ ಕ್ಯಾಲೆಂಡರ್‌ಗಳಲ್ಲಿ, ಪೂಜಿಸುವ ಪಟಗಳಲ್ಲಿ ಕಂಡಿದ್ದ ಸರಸ್ವತಿಯ ಚಿತ್ರವನ್ನು, ಶಾಲೆಯ ಮೆಟ್ಟಿಲನ್ನೇ ತುಳಿಯದ ಒಂದು ಅಜ್ಜಿ ತಾನು ಕಂಡುಕೊಂಡ ಒಳನೋಟದಲ್ಲಿ ವಿವರಿಸಿದ್ದರು. ಅದೇನೆಂದರೆ, ಸರಸ್ವತಿ ಎಂದರೆ ವಿದ್ಯೆಯ ಸಂಕೇತ. ಅವಳು ಒಂದು ಬಂಡೆಗಲ್ಲಿನ ಮೇಲೆ ಕಾಲಮೇಲೆ ಕಾಲು ಹಾಕಿಕೊಂಡು ಗರ್ವದಿಂದ ಕುಳಿತಿರುತ್ತಾಳೆ. ಅಂದರೆ ವಿದ್ಯಾಸಂಪನ್ನನು ತನ್ನದು ಭದ್ರಬುನಾದಿಯೆಂಬ ಅಭಿಮಾನದಿಂದ, ಆತ್ಮವಿಶ್ವಾಸದಿಂದ, ಸ್ವಾಭಿಮಾನದಿಂದ ಇರುತ್ತಾನೆ. ಅವಳು ತೊಟ್ಟಿರುವುದು ಯಾ ಕುಂದೇಂದು ತುಷಾರಹಾರಧವಳಾ ಯಾ ಶುಭ್ರ ವಸ್ತ್ರಾವೃತ ಎಂಬಂತೆ ಅತಿ ಶುಭ್ರವಾದ ಬಿಳಿಯ ಸೀರೆಯನ್ನು. ವಿದ್ಯಾ ಸಂಪನ್ನನು ತನ್ನ ಸ್ವಾರ್ಥ ಅಥವಾ ಅಹಂಕಾರದಿಂದ ಯಾವ ಕಳಂಕವನ್ನೂ ಅಂಟಿಸಿಕೊಳ್ಳದೇ ತನ್ನ ಆ ವಿದ್ಯೆಯಿಂದ ಪರಿಶುದ್ಧನಾಗಿ ಆವೃತನಾಗಿರುತ್ತಾನೆ. ಅವಳ ನಾಲ್ಕು ಕೈಗಳ ಎರಡಲ್ಲಿ ವೀಣೆಯನ್ನು ನುಡಿಸುತ್ತಿರುತ್ತಾಳೆ. ಅಂದರೆ ವಿದ್ಯಾಸಂಪನ್ನನು ತನ್ನ ಅಭಿವ್ಯಕ್ತಿಯಲ್ಲಿ ಸುರಸವಾಗಿ, ಸಂಗೀತದಂತೆ ಇರುತ್ತಾನೆಯೇ ಹೊರತು, ವಾದ, ವಿತಂಡವಾದಗಳಿಂದ ಗದ್ದಲ ಎಬ್ಬಿಸುವುದಿಲ್ಲ. ಮತ್ತೊಂದು ಕೈಯಲ್ಲಿ ಅವಳು ಹಿಡಿದಿರುವುದು ಪುಸ್ತಕಗಳನ್ನು. ವಿದ್ಯಾ ಸಂಪನ್ನನು ತನ್ನಲ್ಲಿ ಯಾವುದೇ ಸ್ವತಂತ್ರ ವಿಚಾರ ಮೂಡಿದರೂ ತನ್ನ ಹಿಂದೆ ಉಲ್ಲೇಖಿಸಿರುವವರ ದಾಖಲುಗಳನ್ನು ಗೌರವಿಸುತ್ತಾನೆ ಮತ್ತು ಅಧ್ಯಯನ ಮಾಡುತ್ತಾನೆ. ಅವಳ ಮತ್ತೊಂದು ಕೈಯಲ್ಲಿ ಇರುವುದು ಜಪಮಾಲೆ. ಅಂದರೆ ವಿದ್ಯಾ ಸಂಪನ್ನನು ಕಲಿತದ್ದು ಮುಗಿಯಿತೆಂಬ ಅಹಂಕಾರವಿಲ್ಲದೇ ವಿದ್ಯೆಯನ್ನು ಪದೇಪದೇ ಮನನ ಮಾಡುತ್ತಾನೆ. ಆ ಸರಸ್ವತಿಯು ಕುಳಿತಿರುವುದಾದರೂ ಎಲ್ಲಿ? ಹರಿಯುತ್ತಿರುವ ನದಿಯ ಪಕ್ಕದಲ್ಲಿ. ನಿತ್ಯವೂ ನೂತನವಾಗಿರುವ ಜೀವನದ ಹರಿಯುವಿಕೆಯ ನಿತ್ಯ ಸಾಕ್ಷಿಯು ವಿದ್ಯಾ ಸಂಪನ್ನನು. ಅವಳ ವಾಹನವಾದರೂ ಹಂಸವು. ಸಂಸ್ಕಾರಾನುಗತವಾದ ನಂಬುಗೆಯಂತೆ ಹಂಸದ ಗುಣವೆಂದರೆ ಬೆರೆತಿರುವ ನೀರನ್ನೂ ಮತ್ತು ಹಾಲನ್ನೂ ಬೇರ್ಪಡಿಸುವುದು. ವಿದ್ಯಾ ಸಂಪನ್ನನಾದವನು



ಯಾವುದೇ ವಿಷಯ ವಿಚಾರಗಳು ಹೇಗೇ ಬೆರೆತಿದ್ದು ತನ್ನ ಸುಪರ್ದಿಗೆ ಬಂದರೂ, ವಸ್ತುನಿಷ್ಠವಾಗಿ ಅದನ್ನು ವಿಭಜಿಸಿ, ವಿಶ್ಲೇಷಿಸಿ ಸ್ವೀಕರಿಸುವುದು. ಸರಸ್ವತಿಯು ವರದ ಮತ್ತು ಅಭಯಗಳ ಮುದ್ರೆಯುಳ್ಳ ಕರಗಳನ್ನು ಹೊಂದಿರುವುದಿಲ್ಲ. ಏಕೆಂದರೆ ವಿದ್ಯಾ ಸಂಪನ್ನನಾಗಬೇಕಾದವನು ಯಾರದೋ ಕೃಪಾಕಟಾಕ್ಷದಿಂದ ವಿದ್ಯೆಯನ್ನು ಪಡೆಯದೇ ತಾನೇ ಅಭ್ಯಾಸದ ಮೂಲಕ ಪಡೆಯಬೇಕು! ಹೀಗೆ... ಸಾಗುತ್ತಿದ್ದ ಅಜ್ಜಿಯ ವಿವರಣೆಯನ್ನು ನಂಬುವುದು ಬಿಡುವುದು ಇರಲಿ, ಅಂಥಾ ಸರಸ್ವತಿಯ ಚಿತ್ರವನ್ನು ರಚಿಸಿದ ಕಲಾವಿದನಿಗೂ ಅದು ಹಾಗೆ ವ್ಯಕ್ತಪಡಿಸಬೇಕೆಂದಿತ್ತೋ ಇಲ್ಲವೋ. ಆದರೆ, ಒಂದು ಕಲಾಕೃತಿಯನ್ನು ನಾನಾ ಬಗೆಯಾಗಿ ವಿಶ್ಲೇಷಿಸಲು ಸಾಧ್ಯವಿದೆ. ಆ ಅಭಿವ್ಯಕ್ತಿಯನ್ನು ಗೌರವಿಸೋಣ.

ಲಕ್ಷ್ಮಿ ಕುಳಿತುಕೊಳ್ಳುವುದು ಕಮಲದ ಮೇಲೆ. ಸರಸ್ವತಿಯ ಪೀಠ ಒಂದು ಕಲ್ಲು ಬಂಡೆ. ಅಂದರೆ ಸಿರಿ ಸಂಪತ್ತುಗಳು ಸ್ಥಿರವಲ್ಲ, ತಾವರೆಯಂತೆ ಅಲ್ಪಾಯುಷ್ಯದ್ದು. ಆದರೆ, ವಿದ್ಯೆಯ ಬುನಾದಿ ಎಂಬುದು ರಾಕ್ ಬಾಟಂ ಎಂದರೆ 'ಹೂಂ' ಎನ್ನಲು ತೊಂದರೆಯೇನೂ ಇಲ್ಲ. ಪುರಾಣಗಳು ಯಾವುದೇ ಕಾರಣದಿಂದ ರಚಿತವಾಗಿದ್ದರೂ ಸಮಕಾಲೀನ ಅಧ್ಯಯನಗಳಿಗೆ, ವ್ಯಾಖ್ಯಾನಗಳಿಗೆ ಮತ್ತು ವಿವರಣೆಗಳಿಗೆ ನಿಲುಕದೇ ಹೋದರೆ ಅವು ಯಾಕಾದರೂ ಬೇಕು?

ಗುಪ್ತಗಾಮಿನಿ

ಯಾ ವೀಣಾ ವರದಂಡ ಮಂಡಿತ ಕರಾ ಎಂದು ಸರಸ್ವತಿಯ ಕೈಗೆ ವೀಣೆಯನ್ನು ಕೊಡುವ ಮುನ್ನ ನಾವು ಒಂದು ವಿಚಾರವನ್ನು ಗಮನಿಸಬೇಕು. ಈ ವೀಣಾಪಾಣಿ ಸರಸ್ವತಿ ರಾವಣನ ನಂತರದ ಕಾಲದವಳಾಗಿದ್ದಿರಬಹುದು. ಏಕೆಂದರೆ, ವೀಣೆಯ ಸಂಶೋಧಕ ಮತ್ತು ತಯಾರಕ ರಾವಣನೆಂಬ ಪ್ರತೀತಿ ಇದೆ. ಬ್ರಹ್ಮನಿಂದ ಶತರೂಪೆಯಾಗಿ ಬಂದ ಸರಸ್ವತಿಯ ಕೈಗೆ ವೀಣೆ ಏಕೆ ಬಂತೆಂದು ಅಧ್ಯಯನ ಮಾಡುವ ಅಗತ್ಯವಿದೆ. ಒಂದು ವೇಳೆ ಅಧ್ಯಯನಕ್ಕೆ ಸೂಕ್ತ ವಸ್ತುಗಳು ಸಿಗದೇ ಹೋದರೆ, ನಾವೇ ಯಾರಾದರೂ ಒಂದು ಪುರಾಣ ಬರೆದರಾಯಿತು. ಮುಂದಿನ ಪೀಳಿಗೆಯವರು ಈ ನಮ್ಮ ಪುರಾಣದ ಆಧಾರವನ್ನು ಅವಲಂಬಿಸಿ, "ಸರಸ್ವತಿ ವೀಣೆ ಹಿಡಿದಿದ್ದು ಏಕೆ!!" ಅಂತ ಟಿವಿ ಚಾನೆಲ್ಲುಗಳಲ್ಲಿ ಗಂಟೆಗಟ್ಟಲೆ ಮಾತಾಡಲಿ. ಇರಲಿ, ವಿಡಂಬನೆ ಸಾಕು ವಿಷಯಕ್ಕೆ ಬರೋಣ.



ಪ್ರ ಕ್ಷೋದಸಾ ಧಾಯಸಾ ಸಸ್ರ ಏಷಾ ಸರಸ್ವತೀ ಧರುಣಮಾಯಸೀ ಪೂಃ। (7.95.1) ಸರಸ್ವತಿಯನ್ನೇ ಉದ್ದೇಶಿಸಿದ ಋಗ್ವೇದ ಮತ್ತು ಇತರೇ ಕೃತಿಗಳಲ್ಲಿ ಋಕ್‌ಗಳು ಹಲವಿವೆ. ಅವುಗಳಲ್ಲಿ ಈ ಸಾಲು 'ಉಕ್ಕಿನ ನಗರಿಯಂತೆ ಸ್ಥಿರವಾದ ಸರಸ್ವತಿಯು ಜೀವರಕ್ಷಕ ನೀರಿನೊಂದಿಗೆ ಭರದಿಂದ ಹರಿಯುವಳು' ಎಂದು ಹೇಳುತ್ತದೆ. ಅಂದರೆ ಈಗ ಭೂಗರ್ಭದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವ ನದಿಯೆಂದು ನಂಬಲಾದ ಸರಸ್ವತಿಯು ಪ್ರಾಚೀನ ಭಾರತದ ವಾಯುವ್ಯ ಭಾಗದಲ್ಲಿ ಮಹಾನದಿಯಾಗಿ ಹರಿಯುತ್ತಿದ್ದು, ಆ ನದಿಯ ದಡದಲ್ಲಿ ಸುಭದ್ರವಾದ ನಾಗರಿಕತೆಯೊಂದಿತ್ತು ಎಂಬುದು ತಿಳಿಯುತ್ತದೆ. ಈಗ ನಾವು ಕಾಣುತ್ತಿರುವ ಜನರ ಮತ್ತು ಸಮಾಜದ ಮೇಲೆ ಪ್ರಭಾವ ಬೀರುವ ಗಂಗೆ, ಕಾವೇರಿ ನದಿಗಳಂತೆ ಸರಸ್ವತಿಯೂ ಆ ನದಿಯ ದಡದಲ್ಲಿ ವಾಸಿಸುತ್ತಿದ್ದ ಜನರ ಜೀವನದ ಮೇಲೆ ಬಹಳ ಗಾಢವಾದ ಪ್ರೇರಣೆಯನ್ನೂ ಮತ್ತು ಪ್ರಭಾವವನ್ನೂ ಬೀರಿದ್ದಳು. ಚ ಮಾ ತ್ವತ್ ಕ್ಷೇತ್ರಾಣ್ಯರಣಾನಿ ಗನ್ಮ । ನಿನ್ನಿಂದ ಅಗಲಿ ನಾವು ಬಂಜರು ಪ್ರದೇಶಗಳಿಗೆ ಹೋಗದಂತಿರಲಿ ಎಂದು ತಮ್ಮ ಒಲವನ್ನೂ ಮತ್ತು ಅವಲಂಬನವನ್ನೂ ವ್ಯಕ್ತ ಪಡಿಸುತ್ತಾರೆ. ಬೃಹತಮ್ ಅಪಾಂ ಗರ್ಭಂ ದರ್ಶತಮೋಷಧೀನಾಮ್ । ಅಭೀಪತೋ ವೃಷ್ಟಿಭಿಸ್ತರ್ಪಯಂತಂ । ವ್ಯಾಪಕ ಜಲಗರ್ಭದ ಪಕ್ಷಿ, ಪೃಥ್ವಿಯ ಬೆಳವಣಿಗೆಯನ್ನು ದರ್ಶಿಸುವ, ಎಲ್ಲೆಡೆ ತನ್ನ ಹನಿಗೈಯ್ಯುವಿಕೆಯಿಂದ ಸಂತಸ ತರುವ, ಚಲನಶೀಲ ಪಕ್ಷಿ? ಎಂದು ಇಲ್ಲಿ ಸರಸ್ವತಿ ನದಿಯು ಆಸರೆ ನೀಡಿರುವ ಅಸಂಖ್ಯ ಪಕ್ಷಿಗಳನ್ನು ಕಂಡು ಇಡೀ ನದಿಯನ್ನೇ ಒಂದು ಪಕ್ಷಿಯನ್ನಾಗಿ ಕಂಡಿದ್ದಾರೆ. ಮಹೋ ಅರ್ಣಃ ಸರಸ್ವತೀ ಪ್ರ ಚೇತಯತಿ ಕೇತುನಾ । ಪ್ರೇರಣೆಯ ಮಹಾಪ್ರವಾಹಳಾದ ಸರಸ್ವತಿಯು ಋಜುಗ್ರಹಿಂಕೆಗಳಿಂದ ಜಾಗೃತಗೊಳಿಸುವವಳು ಎಂಬ ಈ ಮಾತನ್ನು ನೋಡಿದರೆ ಆಗಿನ ಸರಸ್ವತೀ ನದಿ ಬಯಲಿನಲ್ಲಿದ್ದ ಜನರು ಆ ನದಿಯ ಪ್ರೇರಣೆಯಿಂದ ಅತ್ಯುನ್ನತ ಜೀವನ ನಡೆಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಸಂಗೀತಕ್ಕೆ, ನೃತ್ಯಕ್ಕೆ, ಇತರೇ ವಿಚಾರಗಳಿಗೆ ನದಿ ಪಾತ್ರವು ಪ್ರೇರಣೆಯನ್ನು ನೀಡಿತ್ತು, ಆಶುಕವಿಗಳು ತಮ್ಮ ಕವಿತ್ವಗಳನ್ನು ಹಾಡಲು ಸ್ಫೂರ್ತಿ ನೀಡಿದ್ದ ಆ ನದೀ ದಡದಲ್ಲಿ ಅವರ ಸಾಂಸ್ಕೃತಿಕ ಚಟುವಟಿಕೆಗಳು ಬಹು ಚೆನ್ನಾಗಿ ನಡೆಯುತ್ತಿತ್ತು. ಹಾಗಾಗಿಯೇ ಅಂಬಿತಮೇ ನದೀತಮೇ ದೇವಿತಮೇ ಸರಸ್ವತೀ । ಓ ಸರಸ್ವತೀ, ತಾಯಿಯ ಸ್ವರೂಪಿಣಿಯೇ, ಮಹಾನದಿಯೇ, ಮಹಾದೇವಿಯೇ ಎಂದು ಭಕ್ತಿಯಿಂದ ನದಿಯನ್ನು ಮೂರ್ತಸ್ವರೂಪದಿಂದ ಕೊಂಡಾಡಿದ್ದಾರೆ. ತಮ್ಮ ಭಕ್ತಿ ಮತ್ತು ಕೃತಜ್ಞತೆಯನ್ನು ಅರ್ಪಿಸುತ್ತಾರೆ. ಅವರ ಕೃಷಿ ಆಧಾರಕ್ಕೂ ಆ ಸರಸ್ವತಿ ನದಿಯು ಕಾರಣವಾಗಿರುವುದನ್ನು ಗಮನಿಸಿ, ಪಾವಕಾ ನಃ ಸರಸ್ವತೀ ವಾಜೇಭಿರ್ವಾಜಿ ನೀವತೀ । ಸರಸ್ವತಿಯು ನಮ್ಮನ್ನು ಪರಿಶುದ್ಧಗೊಳಿಸುವವಳು, ಜೀವ-ಶಕ್ತಿಗಳೊಂದಿಗೆ ನಮ್ಮನ್ನು ಸಮೃದ್ಧಗೊಳಿಸುವಳು. ಸರಸ್ವತೀ ನದಿಪಾತ್ರದ ಜನರನ್ನು ಹಲವು ಉಪನದಿಗಳಿಂದ ಆವರಿಸಿದ್ದ ನದಿಯು ಕೋಟೆಯಂತೆ ಅವರ ನೆಲೆಯನ್ನು ಶತ್ರುಗಳಿಂದ ರಕ್ಷಿಸುತ್ತಿತ್ತು. ಅದು ಬಹು ರಭಸವಾಗಿಯೂ ಪ್ರವಾಹದಿಂದಲೂ ಕೂಡಿರುತ್ತಿತ್ತು ಎಂಬುದನ್ನು ಇಯಂ ಶುಷ್ಮೇಭಿರ್ಬಿಸಖಾ ಇವಾರೂಜತ್, ಸಾನು ಗಿರೀಣಾಂ ತವಿಷೇಭಿರೂರ್ಮಿಭಿಃ । ಬಿರುಗಾಳಿಯಂತೆ ಶೂರತನದಿಂದ ಅವಳು ಪರ್ವತಶಿಖರಗಳನ್ನು ಅಶಕ್ತ ನಾರುಗಳನ್ನು ಕಿತ್ತೊಗೆಯುವಂತೆ ಪುಡಿಪುಡಿ ಮಾಡಿದಳು, ಎಂಬ ಈ ಸಾಲುಗಳು ಹೇಳುತ್ತವೆ.

ಇಷ್ಟೆಲ್ಲಾ ಪ್ರೇರಕ, ಪೋಷಕ ನದಿಯಾಗಿ ಹರಿದಿದ್ದ ಸರಸ್ವತಿಯು ಮುಂದೊಂದು ದಿನ ಬತ್ತುತ್ತಾ ಹೋದಾಗ, ಅದರ ಪಾತ್ರದಲ್ಲಿದ್ದ ಜನರು ಸಿಂಧೂ ನದಿಯ ಬಯಲಿಗೆ ವಲಸೆ ಬಂದರೆಂದು ಪ್ರತೀತಿ. ಅದೇನಾದರಾಗಲಿ, ಅಂತಹ ಸಂಗೀತ, ನೃತ್ಯ, ಕವಿತ್ವ ಇತ್ಯಾದಿಗಳಿಗೆ ಸ್ಫೂರ್ತಿಯಾಗಿದ್ದ ಮಹಾನದಿಯನ್ನು ಮೂರ್ತೀಕರಿಸಿ ನೋಡಿದ ಕವಿಗಳು, ಕಲಾವಿದರು ತಮ್ಮ ಕೃತಿಗಳಲ್ಲಿ ಉಪಮಾಲಂಕಾರಗಳಲ್ಲಿ ವಿವರಿಸಿದರು. ಆದರೆ, ಪುರಾಣಿಕರು ಮುಂದೆ ಆ ಮೂರ್ತಿಗೆ ಜೀವಕೊಟ್ಟು ಯರ್ರಾಬಿರ್ರಿ ದಾರಿ ತಪ್ಪಿಸಿದರು. ನದಿಯ ಪಕ್ಕದಲ್ಲಿ ಸುಂದರ ಸ್ತ್ರೀಯೊಬ್ಬಳು ವೀಣೆ, ಜಪಮಾಲೆ, ಪುಸ್ತಕಗಳನ್ನು ಹಿಡಿದು, ಹಂಸ ಪಕ್ಷಿಯೊಂದಿಗೆ ಏಕೆ ಕುಳಿತಿದ್ದಾಳೆಂದು ಸರಸ್ವತಿಗೆ ಸಂಬಂಧಪಟ್ಟ ಋಕ್‌ಗಳನ್ನು ಗಮನಿಸಿದರೆ ತಿಳಿಯುತ್ತದೆ.

ಒಂದು ಕಾಲದಲ್ಲಿ ಮಹಾನದಿಯಾಗಿ ಹರಿದಿದ್ದ ಸರಸ್ವತಿಯು ಭೌಗೋಳಿಕ ಮತ್ತು ಪ್ರಾಕೃತಿಕ ಕಾರಣಗಳಿಂದಾಗಿ ಬತ್ತಿ ಹೋದರೂ, ಅದರ ಸಂಕೇತವಾಗಿ ನಿಂತ ಬಿಳಿಸೀರೆಯುಟ್ಟು ನದೀ ದಂಡೆಯ ಮೇಲೆ ಗರ್ವದಿಂದ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿರುವ ಸರಸ್ವತಿಯು ಬ್ರಹ್ಮನ ರಾಣಿಯಾಗಿ ಪುರಾಣಗಳಲ್ಲಿ ಏನೇನೋ ಅವತಾರವನ್ನು ಎತ್ತಿದ್ದಕ್ಕೆ ಕಾರಣ ಮಾತ್ರ ಅವೆಲ್ಲ.

ಗುಪ್ತಗಾಮಿನಿಯಾಗಿ ಮಹಾನದಿಯೊಂದು ಹುದುಗಿ ಹೋಗಿರುವಾಗ ನಮ್ಮ ಪುರಾಣದ ಸರಸ್ವತಿಯು ಪುಸ್ತಕಗಳ ರೂಪದಲ್ಲಿ, ವಿದ್ಯಾಧಿದೇವತೆಯಾಗಿ, ನಮ್ಮ ಜನರಿಂದ ಭಯ-ಭಕ್ತಿ ಪೂರ್ವಕವಾಗಿ ಇನ್ನೂ ವಿಜೃಂಭಿಸುತ್ತಿರುವುದು ನಮ್ಮ ಪರಂಪರೆಯಲ್ಲೊಂದು ಮಹಾ ಸಂಗತಿ.

ಇಮಾ ಬ್ರಹ್ಮ ಸರಸ್ವತಿ ಜುಷಸ್ವ ವಾಜಿನೀವತಿ । ಓ ಸರಸ್ವತೀ, ಶಕ್ತಿಯಿಂದ ಕೂಡಿರುವವಳೇ, ನಮ್ಮ ಈ ಪವಿತ್ರ ಶಬ್ದಗಳಿಂದ ಆನಂದಿತಳಾಗು.

ರೈತರಿಗೆ ಕಬ್ಬಿಣ ಕೊಟ್ಟ ಇತಿಹಾಸ!



ಜಗತ್ತಿನಲ್ಲೇ ಅತಿ ಎತ್ತರವಾದ ವಲ್ಲಭಭಾಯಿ ಪಟೇಲರ ಕಬ್ಬಿಣದ ಪ್ರತಿಮೆಯನ್ನು ಸ್ಥಾಪಿಸಲು ದೇಶದಾದ್ಯಂತ ಜನತೆಯಿಂದ ಕಬ್ಬಿಣವನ್ನು ಸಂಗ್ರಹಿಸ ಲಾಗುವುದಂತೆ. ಇದು ಬಿಜೆಪಿ ಪಕ್ಷದ ಪ್ರಧಾನ ಮಂತ್ರಿ ಅಭ್ಯರ್ಥಿ ನರೇಂದ್ರ ಮೋದಿ ದೇಶದ ಜನತೆಗಾಗಿ ಕೈಗೊಂಡಿರುವ ಅಮೋಘವಾದ ಮುಂದೊಡಗಂತೆ. ಇದರಲ್ಲಿ ದೇಶದ ಜನರೆಲ್ಲರೂ ಉತ್ಸಾಹದಿಂದ ಪಾಲ್ಗೊಂಡಲ್ಲಿ ಜನತೆಯ ದಿನನಿತ್ಯದ ಸಮಸ್ಯೆಗಳು ಹಗುರವಾಗಿ ಪರಿಹಾರವಾಗಿ ಬಿಡುತ್ತವಂತೆ. ಈ ಪ್ರತಿಮೆ ಸ್ಥಾಪನೆಯ ಮೂಲಕ "ಐಕ್ಯ ಭಾರತ - ಶ್ರೇಷ್ಠ ಭಾರತ"ದ ನಿರ್ಮಾಣವಾಗುವುದಂತೆ- ಹೀಗೆಂದು ಜನತೆಯ ಹಣದಲ್ಲಿ ರೇಡಿಯೋ-ಟಿವಿಗಳಲ್ಲಿ ದಿನಕ್ಕೆ ಅಕ್ಷರಶಃ ನೂರಾರು ಸಲ ಜಾಹೀರಾತು ಪ್ರಚಾರ ನಡೆಸುತ್ತಿದ್ದಾರೆ ಮೋದಿ.

ಹೋಲಿಸಿ: 1917ರ ಸೆಪ್ಟೆಂಬರ್-ಅಕ್ಟೋಬರ್ ದಿನಗಳಲ್ಲಿ ರಷ್ಯದ ಕ್ರಾಂತಿ ಯಶಸ್ಸಿನ ಹೊಸ್ತಿಲಲ್ಲಿದ್ದಾಗ, ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಮಾರ್ಗದರ್ಶನದಂತೆ ಪೆಟ್ರೋಗ್ರಾಡ್ ನಗರದ ಕಾರ್ಮಿಕರು "ಕಾರ್ಮಿಕರಿಂದ ರೈತರಿಗೆ" ಎಂಬ ಹೆಸರಿನ ವಿಶೇಷ ಕೇಂದ್ರಗಳನ್ನು ತಮ್ಮತಮ್ಮ ಕಾರ್ಖಾನೆಗಳಲ್ಲಿ ಸ್ಥಾಪಿಸಿದರು. ನಿರುಪಯುಕ್ತ ವೆನ್ನಿಸುವ ಕಬ್ಬಿಣದ ವಸ್ತುಗಳನ್ನು, ಡ್ಯಾಮೇಜಾದ ಬಿಡಿಭಾಗ ಗಳನ್ನು ಮತ್ತಿತರ ಸಣ್ಣಪುಟ್ಟ ಸಲಕರಣೆಗಳನ್ನು ತಮ್ಮ ಕಾರ್ಖಾನೆಗಳಿಂದಲೂ ವಸತಿ ಪ್ರದೇಶಗಳಿಂದಲೂ ಈ ವಿಶೇಷ ವಿಭಾಗಗಳ ಮೂಲಕ ಸಂಗ್ರಹಿಸಿ, ಆ ಎಲ್ಲ ಹಳೆಯ ಸರಕುಗಳನ್ನು ರೈತರ ದಿನನಿತ್ಯದ ಅತ್ಯಗತ್ಯ ಬಳಕೆಯ ಅತ್ಯಂತ ಸರಳವಾದ ಕೃಷಿ ಸಲಕರಣೆಗಳ ಮತ್ತು ಅವುಗಳ ಬಿಡಿಭಾಗಗಳ ತಯಾರಿಕೆಗೆ ಬಳಸಲಾಯಿತು. ರೈತರ ಸಂಕಷ್ಟಗಳ ಬಗ್ಗೆ ಕಾರ್ಮಿಕರಲ್ಲಿ ಅರಿವು ಮೂಡಿಸಿ, ಅವರು ರೈತರೆಡೆಗೆ ಸೌಹಾರ್ದತೆಯ ಹಸ್ತವನ್ನು ಚಾಚುವ ಮೂಲಕ ಈ ಎರಡೂ ದಮನಿತ, ಶೋಷಿತ ವರ್ಗಗಳ ನಡುವೆ ಪರಸ್ಪರ ಐಕ್ಯತೆ ಉಂಟುಮಾಡುವುದು ಈ ಕ್ರಮದ ಪ್ರಧಾನ ಉದ್ದೇಶವಾಗಿತ್ತು. ಜೊತೆಗೆ ಸಾಮಾಜಿಕ-ಆರ್ಥಿಕ-






ರಾಜಕೀಯ ಕ್ರಾಂತಿಯನ್ನು ಕುರಿತು ರೈತರ ನಡುವೆಯೂ ತಳಮಟ್ಟದ ರಾಜಕೀಯ ಪ್ರಚಾರ ನಡೆಸುವುದಕ್ಕೂ ಈ ಕಾರ್ಯಕ್ರಮ ಒಂದು ಮಾಧ್ಯಮವಾಗಿತ್ತು.

ಇದರರ್ಥ - ಒಂದು ಜನಪರವಾದ ವ್ಯವಸ್ಥೆಯೋ ಸರ್ಕಾರವೋ ಇದ್ದಲ್ಲಿ ಅದು ಕೈಗೊಳ್ಳುವ ಸಾಮುದಾಯಿಕ ಆಂದೋಲನದ ರೀತಿಯ ಕ್ರಮವು ಜನತೆಯ ತಕ್ಷಣದ ಬದುಕಿನ ಕಿತ್ತುತಿನ್ನುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿರುತ್ತದೆ. ಆ ಮೂಲಕ ಜನಸಾಮಾನ್ಯರಲ್ಲಿ ಗಾಢವಾದ ಒಗ್ಗಟ್ಟನ್ನು ಉಂಟುಮಾಡಲು ಯತ್ನಿಸುತ್ತದೆ. ಅದೇ ಜನವಿರೋಧಿಯಾದ, ಸ್ವಾರ್ಥಿಯಾದ, ಪಟ್ಟಭದ್ರ ಹಿತಾಸಕ್ತರ ಲಾಭಕ್ಕಾಗಿ ಶ್ರಮಿಸುವ ಪಕ್ಷವೋ ವ್ಯವಸ್ಥೆಯೋ ಇದ್ದಾಗ ಅದು ಹೇಗೆ ಇಡೀ ಜನಸಮೂಹವನ್ನು ಅನಗತ್ಯವಾದ, ಅವರ ಬದುಕಿಗೆ ಏನೇನೂ ಅಗತ್ಯವಿರದ ಕೇವಲ ಭಾವನಾತ್ಮಕ ವಿಚಾರಗಳಲ್ಲಿ ಮುಳುಗಿಸಿ, ತಾವೇನೋ ಮಹತ್ಕಾರ್ಯದಲ್ಲಿ ಭಾಗಿಯಾದಂತೆ ಅವರಲ್ಲಿ ಭ್ರಮೆ ಉಂಟುಮಾಡಿ, ಅವರ ಗಮನವನ್ನು ಬದುಕಿನ ತೀವ್ರ ಸಮಸ್ಯೆಗಳಿಂದ ಬದಿಗೆ ಸರಿಸಿ, ತನ್ನ ಮತ್ತು ತನ್ನ ವರ್ಗದ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುತ್ತದೆ ಎನ್ನುವುದಕ್ಕೆ ವಲ್ಲಭಭಾಯಿ ಪಟೇಲರ ಪ್ರತಿಮೆಯ 'ಆಂದೋಲನ' ಒಂದು ಜ್ವಲಂತ ನಿದರ್ಶನವಾಗಿದೆ.

☐ ನಾರಾಯಣ್, ಬೆಂಗಳೂರು.

ಎನ್ನಾರೈಗಳಿಗೆ ಪಂಗನಾಮ ಹಾಕಲು ಯತ್ನ




ಅಮೆರಿಕದ ಸರ್ಕಾರ ಮೋದಿಗೆ ವೀಸಾ ನಿರಾಕರಿಸಿರುವುದು ಅಲ್ಲಿನ ಅನಿವಾಸಿ ಚಡ್ಡಿಗಳಿಗೆ ಭಾರಿ ದೊಡ್ಡ ಪೆಟ್ಟು. ಆದರೂ ಹಠ ಬಿಡದ ತ್ರಿವಿಕ್ರಮನಂತೆ ಮೋದಿಯ ಇಮೇಜನ್ನು ವೃದ್ಧಿಪಡಿಸುವ ಶತಪ್ರಯತ್ನ ನಡೆದಿದೆ. ಇವರ ಹಲವಾರು ಹಿಂದೂ ರಾಷ್ಟ್ರೀಯವಾದಿ ಎನ್ನಾರೈ ಸಂಸ್ಥೆಗಳಲ್ಲೊಂದಾದ ನ್ಯಾಷನಲ್ ಇಂಡಿಯನ್ ಅಮೆರಿಕನ್ ಪಬ್ಲಿಕ್ ಪಾಲಿಸಿ ಇನ್ಸ್‌ಟಿಟ್ಯೂಟ್ (NIAPPI)) ಇತ್ತೀಚೆಗೆ ಒಂದು ದೊಡ್ಡ ಎಡವಟ್ಟು ಮಾಡಿ ಸಿಕ್ಕಿಬಿದ್ದಿದೆ. NIAPPI ವತಿಯಿಂದ ನವಂಬರ್ 19ರಂದು ಅಮೆರಿಕದ ಕ್ಯಾಪಿಟಲ್ ಹಿಲ್‌ನಲ್ಲಿ ಮೋದಿಯ ವಿಡಿಯೊ ಕಾನ್‌ಫರೆನ್ಸ್ ಏರ್ಪಾಡು ಮಾಡಲಾಗಿದೆ ಎಂಬರ್ಥ ಬರುವಂತಹ ಆಹ್ವಾನ ಪತ್ರಿಕೆಯನ್ನು ಎಲ್ಲೆಡೆ




ಹಂಚಲಾಗಿತ್ತು. ಈ ಕಾರ್ಯಕ್ರಮಕ್ಕೆ ಸೆನೇಟರ್ ಕ್ಯಾತಿ ರಾಜರ್ಸ್ ನೇತೃತ್ವದ ಹೌಸ್ ಆಫ್ ರಿಪಬ್ಲಿಕನ್ ಕಾನ್‌ಫರೆನ್ಸ್‌ನ ಬೆಂಬಲವಿದೆ ಎಂದು ಬಿಂಬಿಸುವುದಕ್ಕಾಗಿ ಆಹ್ವಾನ ಪತ್ರಿಕೆಯಲ್ಲಿ ಹೌಸ್ ಆಫ್ ರಿಪಬ್ಲಿಕನ್ಸ್‌ನ ಮುದ್ರೆಯನ್ನು ಮತ್ತು ಕೆಲವು ಹಿರಿಯ ನಾಯಕರ ಭಾವಚಿತ್ರಗಳನ್ನು ಹಾಗೂ ಹೆಸರುಗಳನ್ನು ಅಚ್ಚುಹಾಕಿಸಲಾಗಿತ್ತು. ಇದನ್ನು ಕ್ಯಾತಿ ರಾಜರ್ಸ್ ಗಮನಕ್ಕೆ ತಂದಾಕ್ಷಣ ಕಾರ್ಯಕ್ರಮಕ್ಕೆ ತಡೆಯಾಜ್ಞೆ ನೀಡಲಾಗಿದೆ. ವಾಸ್ತವವಾಗಿ ಅದೇ ನವಂಬರ್ 19ರಂದು ಕ್ಯಾಪಿಟಲ್ ಹಿಲ್ ಕಟ್ಟಡದಲ್ಲಿ 'ಇಂಡಿಯ ಅಮೆರಿಕ ಮೀಟಪ್' ಎಂಬ ಬೇರೊಂದು ಕಾರ್ಯಕ್ರಮ ನಡೆಯಲಿತ್ತು. ಇದಕ್ಕೂ ಮೇಲೆ ಹೇಳಿದ NIAPPI ಕಾರ್ಯಕ್ರಮಕ್ಕೂ ಸಂಬಂಧವೇ ಇರಲಿಲ್ಲ. ಭಾಷಣಕಾರರಲ್ಲಿ ಮೋದಿಯ ಹೆಸರಾಗಲಿ ಅಥವಾ ಇನ್ನಿತರ ಆರೆಸ್ಸೆಸ್ ಮುಖಂಡರ ಹೆಸರಾಗಲಿ ಇರಲಿಲ್ಲ. NIAPPI ನ ಶಲಭ್ ಕುಮಾರ್ ಎಂಬಾತ ಇದೇ 'ಇಂಡಿಯ ಅಮೆರಿಕ ಮೀಟಪ್' ಅನ್ನು ದುರ್ಬಳಕೆ ಮಾಡಿ ಅದು ಮೋದಿ ಪರವಾದ ಪ್ರಚಾರ ಸಭೆ, ಅಲ್ಲಿ ಮೋದಿ ವಿಡಿಯೊ ಕಾನ್‌ಫರೆನ್ಸ್ ಮೂಲಕ ಭಾಷಣ ಮಾಡಲಿದ್ದಾನೆಂದು ಬಿಂಬಿಸಲು ಯತ್ನಿಸಿ ಸಮಾ ಉಗಿಸಿಕೊಂಡಿದ್ದಾನೆ.

(mediahcoalitionagainstgenocide.org)




ಇದು ಗುಜರಾತ್‌ನ 'ದಕ್ಷ ಆಡಳಿತ'!

ಗುಜರಾತ್ ರಾಜ್ಯದ ಮಕ್ಕಳ ಪಾಲಿಗೆ ಮೋದಿಯ ತಥಾಕಥಿತ 'ಗುಜರಾತ್ ಮಾದರಿ ಅಭಿವೃದ್ಧಿ' ಮತ್ತು 'ದಕ್ಷ ಆಡಳಿತ'ದ ಮಾತುಗಳು ಒಂದು ಕ್ರೂರ ಜೋಕ್ ಎನ್ನುವುದಕ್ಕೆ ಇನ್ನೊಂದು ನಿದರ್ಶನ ಇಲ್ಲಿದೆ. ರಾಜ್ಯದಲ್ಲಿ ಪ್ರತಿ ವರ್ಷ ಜನಿಸುವ 15 ಲಕ್ಷ ಮಕ್ಕಳಲ್ಲಿ ಶಾಲೆಗೆ ಸೇರುವವರು ಸುಮಾರು ಮೂರನೆ ಒಂದಂಶದಷ್ಟು ಮಾತ್ರ. ಶಾಲೆಗಳಲ್ಲಿ ಬಿಸಿಯೂಟ ಯೋಜನೆಯ ಅನುಷ್ಠಾನವೂ ಸಮರ್ಪಕವಾಗಿಲ್ಲ. 1984ರಲ್ಲಿ ತಮಿಳುನಾಡಿನ ನಂತ[ರ] ಬಿಸಿಯೂಟ ಯೋಜನೆ ಪ್ರಾರಂಭಿಸಿದ ಹೆಗ್ಗಳಿಕೆ ಗುಜರಾತ್‌ನದ್ದು. ಆದರೆ ಅಧಿಕಾರಿಗ[ಳ] ಅದಕ್ಷತೆ ಮತ್ತು ನಿರ್ಲಕ್ಷ್ಯದ ಪರಿಣಾಮವಾಗಿ ಯೋಜನೆ ಹಳ್ಳಹಿಡಿದಿದೆ. ಉದಾಹರಣೆಗ[ೆ] ನಿಯಮ ಪ್ರಕಾರ ಪ್ರತಿ ಮಗುವಿಗೆ 120-175 ಗ್ರಾಂ ಆಹಾರಧಾನ್ಯಗಳನ್ನು ಕೊಡಬೇಕೆಂದಿದ[ೆ].




ಆದರೆ ಇಲ್ಲಿ ಕೇವಲ 55 ಗ್ರಾ[ಂ] ನೀಡಲಾಗುತ್ತದೆ. ಅದರಲ್ಲಿರುವುದು ಬರಿ 30 ಗ್ರಾಂನ (50-75 ಗ್ರಾಂ ಇರಬೇಕು) ಒಂದು ಚಿಕ್ಕ ಗೋಧಿ ರೊಟ್ಟಿ, 2[.] ಗ್ರಾಂ ಅನ್ನ (50-75 ಗ್ರಾಂ ಇರಬೇಕು) 5 ಗ್ರಾಂ ಧಾನ್ಯಗಳು (20 ಗ್ರಾ[ಂ] ಇರಬೇಕು)! ತರಕಾರಿ (ಹಸಿ) ಸುಮಾರ[ು] 50 ಗ್ರಾಂನಷ್ಟಿರಬಹುದು. ಅಡುಗೆ[ಗೆ] ಬಳಸುತ್ತಿರುವುದು ಅಗ್ಗ ದರದ ಪಾಮೊಲಿನ್ ಅಥವಾ ಬಿಟಿ ಹತ್ತಿ ಬೀಜದ ಎಣ್[ಣೆ]. ಮಕ್ಕಳು ತಟ್ಟೆಬಟ್ಟಲುಗಳನ್ನು ಮನೆಯಿಂದ ತರಬೇಕಾಗಿದೆ. ವಾರದ ಮೆನು ಏನೆಂದು ಗೋಡೆಯಲ್ಲಿ ಪ್ರದರ್ಶಿಸಬೇಕೆಂಬ ನಿಯಮವಿದ್ದರೂ ಅದನ್ನು ಅನುಸರಿಸುವವರಿ[ಲ್ಲ]. ಶಾಲೆಗಳಿಗೆ ಆಹಾರಧಾನ್ಯ, ಎಣ್ಣೆ ಪೂರೈಕೆಯನ್ನು ನೋಡಿಕೊಳ್ಳುವ ಮತ್ತು ವಾರ[ದ] ಮೆನು ಸಿದ್ಧಪಡಿಸುವ ಹೊಣೆಗಾರಿಕೆ ಉಪ ಸಂಗ್ರಾಹಕರದು. ಆದರೆ 20 ಜಿಲ್ಲೆಗಳ[ಲ್ಲಿ] ಉಪ ಸಂಗ್ರಾಹಕರ ಸುಳಿವೇ ಇಲ್ಲ. ಮದ್ರಸಾಗಳ ಆಧುನಿಕೀಕರಣ ಮತ್ತು ಶಿಕ್ಷ[ಕ] ತರಬೇತಿ ಯೋಜನೆಗಳಿಗೆ ಕೇಂದ್ರ ಸರ್ಕಾರ ನೀಡುವ ಹಣಕಾಸು ನೆರವಿನ ಪಾಲನ[್ನು] ಕೂಡಾ ಬಿಡುಗಡೆ ಮಾಡದೆ ಕೂತಿದೆ ರಾಜ್ಯ ಸರ್ಕಾರ.

(ಟೈಮ್ಸ್ ಆಫ್ ಇಂಡಿಯ)



ಸಮಯಸಾಧಕ ರಾಜಕಾರಣ

ಮೂಢನಂಬಿಕೆ ಪ್ರತಿಬಂಧಕ ವಿಧೇಯಕ 'ಸಮಯ ಹಾಳು' ಎಂದು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ದೇವೇಗೌಡರು ಅಪ್ಪಣೆ ಕೊಡಿಸಿದ್ದಾರೆ (ದಿ ಹಿಂದೂ ಪತ್ರಿಕೆ, 25.11.2013). 'ಯಾವ ಮಸೂದೆ ಬೇಕಾದರೂ ತರಲಿ, ನಾನು ನಿಂಬೆಹಣ್ಣು ಒಯ್ಯುವುದು ಒಯ್ಯುವುದೇ' ಎಂದು ಅವರ ಪುತ್ರ, ರೇವಣ್ಣ ಘಂಟಾಘೋಷವಾಗಿ ಹೇಳಿದ್ದಾರೆ. ಇನ್ನು ಕುಮಾರ ಸ್ವಾಮಿಯವರದ್ದು 'ತಕ್ಕಂಥ' ರಾಜಕಾರಣ. 'ಜಾತ್ಯತೀತತೆ ಎಂದರೇನು?' ಎಂದು ಹಿಂದೊಮ್ಮೆ ಪ್ರಶ್ನಿಸಿದ್ದು ಬಿಜೆಪಿಯೊಂದಿಗೆ ಅಧಿಕಾರ ಹಂಚಿಕೊಂಡು ಆ ಪಕ್ಷಕ್ಕೆ ಕರ್ನಾಟಕದಲ್ಲಿ ನೆಲೆ ಕಲ್ಪಿಸಿಕೊಟ್ಟದ್ದು, ಇತ್ತೀಚಿನ ಲೋಕಸಭಾ ಉಪ ಚುನಾವಣೆಯಲ್ಲಿ ಆ ಪಕ್ಷದೊಂದಿಗೆ ಗುಟ್ಟಾಗಿ ಹಾಸಿಗೆ ಹಂಚಿಕೊಂಡದ್ದು, ಸಾಲದೆಂಬಂತೆ ಈಗ ಬುದ್ಧಿಜೀವಿಗಳ ವಿರುದ್ಧ ದಾಳಿ ನಡೆಸುತ್ತಿದ್ದಾರೆ ಈ ಮಾಜಿ ಮುಖ್ಯ ಮಂತ್ರಿಗಳು.




ಹೆಸರಿಗೆ 'ಜಾತ್ಯತೀತ' ಜನತಾ ದಳ. ಸೋಗು ಎಡಪಕ್ಷಗಳೊಂದಿಗೆ ಸ್ನೇಹ. ರಾಷ್ಟ್ರಮಟ್ಟದ ರಾಜಕಾರಣದ ಪ್ರಶ್ನೆ ಬಂದಾಗ ಒಲವು ತೃತೀಯ ರಂಗ. ಸಿದ್ಧಾಂತ ಮಾತ್ರ ಸದಾಕಾಲವೂ 'ಸಮಯಸಾಧಕತನ'. ಯಾವುದೇ ಖಚಿತ ನಿಲುವಾಗಲಿ, ಜನಪರ ಬದ್ಧತೆಯಾಗಲಿ, ಸ್ಪಷ್ಟ ಸಿದ್ಧಾಂತವಾಗಲಿ ಇಲ್ಲದ, ಕೇವಲ ಕುಟುಂಬದ ಮೂವರ ಒಡೆತನದ ಈ ಪಕ್ಷ ಅಸ್ತಿತ್ವದಲ್ಲಿರುವುದು ಕನ್ನಡಿಗರ ಪಾಲಿನ ದುರಂತ.

ನಾವೆಲ್ಲ ಎಂಥ ಮೂರ್ಖರು ಮಾರಾಯ್ರೆ.. (ನಮಗೆ ಪಾಠ ಹೇಳಿಕೊಟ್ಟ ಮೇಷ್ಟ್ರು ಕೂಡಾ).. ಪ್ರಾಥಮಿಕ ಶಾಲಾದಿನಗಳಿಂದಲೂ ಗಾಂಧೀಜಿಯ ಹೆಸರನ್ನು 'ಮೋಹನದಾಸ ಕರಮಚಂದ ಗಾಂಧಿ' ಎಂದೇ ತಿಳಿದುಕೊಂಡು, ಹಾಗೆಯೇ ಹೇಳಿಕೊಂಡು ಬಂದಿದ್ದೆವು... ಆದರೆ ಅದು ತಪ್ಪು, ಅದು 'ಮೋಹನಲಾಲ ಕರಮಚಂದ ಗಾಂಧಿ' ಎಂದಾಗಬೇಕು ಎಂದು ಸರಿಪಡಿಸಲು 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ...' ಎಂಬಂತೆ ಭಾವೀ ಪ್ರಧಾನಿ ನರೇಂದ್ರ ಮೋದೀಜಿಯೇ ಬರಬೇಕಾಯಿತು.. (ರಾಜಸ್ಥಾನದಲ್ಲಿ ನವೆಂಬರ್ 20 ರ ಸಮಾವೇಶದಲ್ಲಿ ಘೋಷಿಸಿದ್ದಾರೆ).

ಮೋದಿ ಮಹಾತ್ಮನಿಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು. ಮತ್ತೊಮ್ಮೆ ಗಟ್ಟಿಯಾಗಿ ಹೇಳಿ... ನಿತ್ಯವೂ ಹೊಸ ಹೊಸ (ಕಂಡುಕೇಳರಿಯದ) ಇತಿಹಾಸ ಬರೆಯುತ್ತಿರುವ ಮೋದಿ ಮಹಾತ್ಮನಿಗೆ ಜಯವಾಗಲಿ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಪುರಾಣ ಹಾಗೂ ಕಾವ್ಯಗಳು ರೂಪಕ ಮಹಾನ್‌ಗಳು



ಜಗತ್ತಿನ ಎಲ್ಲಾ ಪುರಾಣಗಳು ಚರಿತ್ರೆಗಳಲ್ಲ. ಅವು ಐತಿಹ್ಯಗಳಿಗೆ ಹತ್ತಿರವಾಗಿ ಜನರ ನಂಬಿಕೆಗಳಿಗೆ ಪೂರಕವಾಗಿದ್ದಂತವು. ಅದರಲ್ಲಿರುವ ಚೂರುಗಳನ್ನು ಎತ್ತಿಕೊಂಡು ಸಾಂಸ್ಕೃತಿಕ ಇತಿಹಾಸ ನಿರ್ಮಿಸುವುದು ಒಂದು ಮಾದರಿ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಮತ್ತು ಕನ್ನಡದ ಶಂಭಾ ಜೋಷಿ ಈ ರೀತಿಯ ಸಂಶೋಧಕರು. ಇದು 'ಪುರಾಣಭಂಜನ' ಕೆಲಸ. ಇದು ತರವಲ್ಲವೆಂದು ಬೇಂದ್ರೆಯವರಿಗೂ, ಶಂಭಾ ಅವರಿಗೂ ವೈಮನಸ್ಸು ಬರುತ್ತಿದ್ದುದುಂಟು. ಭೌತವಾದವೆಂಬುದು ವೈಚಾರಿಕತೆಗೆ ಊರುಗೋಲಾಗಬೇ[ಕೇ] ಹೊರತು ಪುರಾತನ ನಂಬಿಕೆಗಳನ್ನು ತದುಕು[ವ] ದಂಡವಾಗಬಾರದು. ಯೋಗೇಶ್ ಮಾಸ್ಟರ್ ಅವರ[ು] ಬರೆಯುತ್ತಿರುವ 'ಪುರಾಣದ ಹೂರಣ'ವನ್ನು ನೋಡಿದ[ರೆ] ಅವರು ವೃಥಾ ಜನರ ನಂಬಿಕೆಯ ಭಾವನೆಗಳನ[್ನು] ನೋಯಿಸುತ್ತಿದ್ದಾರೆ ಎನಿಸುತ್ತದೆ.

ತೊಂಭತ್ತಾರು ಸಾವಿರ ಹೆಂಡಿರನ್ನು ಪಡೆದ ಭರತೇಶ[ನ] 'ಮುಪ್ಪಿನ ಮುದುಕಿಯಾದರೂ ಮೈಜುಂದಟ್ಟಿಸುವುದ[ು]' ಎಂಬಂತಿದ್ದ ಎಂದು ರತ್ನಾಕರವರ್ಣಿ ಹೇಳುವಲ್ಲಿ; ಶ್ರೀಕೃಷ್ಣ[ನು] ಹದಿನಾರು ಸಾವಿರ ಹೆಂಡಿರನ್ನು ಪಡೆದಿದ್ದ ಎಂಬುದ[ು] ಸಾಲೆ ಹೊರತು ಸತ್ಯವಲ್ಲ. ಪುರಾಣಗಳ ಸತ್ಯ ಕೇಳುವವರಿಗ[ೂ] ಗೊತ್ತು ಹೇಳುವವರಿಗೂ ಗೊತ್ತು. ಈ ಪೌರಾಣಿ[ಕ] ಆಶಯಗಳನ್ನು ಬೇರ್ಪಡಿಸಿದರೆ ಅದು ಸಮರ್ಥ ಮಹಾಕಾ[ವ್ಯ] ಆಗುವುದೇ ಇಲ್ಲ. ಅದೂಅಲ್ಲದೆ ಕುಟುಂಬ[ದ] ಬೆಳವಣಿಗೆಯಲ್ಲಿ ಅನೇಕ ಹಂತಗಳಿರುತ್ತವೆ. ಅಪ್ಪ-ಮಗ[ಳ] ವಿವಾಹ, ಅಣ್ಣ-ತಂಗಿ ವಿವಾಹ, ಇಂತವೆಲ್ಲ ಸ್ಥಗಿತಗೊಂ[ಡ] ಕ್ರಮಗಳು. ಬ್ರಹ್ಮ-ಸರಸ್ವತಿ, ರಾಮ-ಸೀತೆ ಪಾತ್ರಗಳ[ು] ಕಾಲಕಾಲಕ್ಕೆ ತಿರುವು ಪಡೆದುಕೊಳ್ಳುತ್ತವೆ. 'ಪುರಾಣಭಂಜ[ನ]' ಮೂಢನಂಬಿಕೆಗಳಿಗೆ ತಿಳಿವಳಿಕೆ ಹೇಳುತ್ತ ನಂಬಿಕೆ ಮ[...] ಚರಿತ್ರೆಗಳಿಗೆ ಕಿರುದಾರಿಗಳನ್ನು ತೋರಿಸುತ್ತಾ ಸಾಗಬೇಕ[ು]. ಪುರಾಣ ಹಾಗೂ ಕಾವ್ಯಗಳು ರೂಪಕ ಮಹಾನ್‌ಗ[ಳು] ಹೊರತು 'ವಾಸ್ತವವಲ್ಲ'ವೆಂಬ ಸೂಕ್ಷ್ಮಗಳಿದ್ದರೆ ಸಾಕು.

-ಡಾ. ರಾಜೇಗೌಡ ಹೊಸಹಳ್ಳಿ ಮತ್ತು ಪ್ರ[...] ಶಿವರಾಮಯ್ಯ, ಬೆಂಗಳೂ[ರು]

ಖಾವಿಗೆ ಬೇಡ ರಾಜಕೀಯದ ಖಾದಿ..


ಇಂದಿನ ಮಠಮಾನ್ಯಗಳು ರಾಜಕೀಯದಲ್ಲಿ [...] ಮೂಗು ತೂರಿಸುತ್ತಿವೆ, ಖಾವಿಯು ತನ್ನ ಮಹತ್ವವ[ನ್ನು] ಕಳೆದುಕೊಂಡಿತೆ? ಇಂದಿನ ಸ್ವಾಮಿಜಿಗಳು ಹಗಲು ವೇ[ಷ] ಧರಿಸಿಕೊಂಡು ಖಾವಿಗೆ ಕಳಂಕ ತರುತ್ತಿದ್ದಾರೆಯೇ? ಎಂ[ಬ] ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ. ಏಕೆಂದರೆ ಇವ[ತ್ತು] ನಮ್ಮಲ್ಲಿರುವ ಸ್ವಾಮೀಜಿಗಳು ಸಮಾಜದ ಬಗ್ಗೆ ಒಳಿತ[ನ್ನು] ಬಯಸದೆ, ಧರ್ಮದ ಸನ್ಮಾರ್ಗ ತಿಳಿಯದೆ, ಸಂಕು[ಚಿತ] ಮನಸ್ಸಿನ ಜಾತಿವಾದ ಮಾಡುತ್ತಿರುವವರಾಗಿದ್ದಾರೆ. ಇಂತ[ಹ] ಸ್ವಾಮಿಗಳಿಂದ ಸಮಾಜ ಪರಿವರ್ತನೆ ಹೇಗೆ ಸಾಧ್ಯ?

ಖಾವಿ ಧರಿಸಿದವರನ್ನು "ಸರ್ವಸಂಗ ಪರಿತ್ಯಾಗಿ" ಎಂ[ದು] ಕರೆಯುತ್ತಾರೆ. ಅದರ ಅರ್ಥ ಸಮಾಜದಿಂದ ಯ[...]

ಸಿನಿಮಾ ಬರಹಗಾರನಾಗಲು ಶ್ರದ್ಧೆ ಬೇಕು

ಸಂದರ್ಶನ

'ಸರ್ವರ್ ಸೋಮಣ್ಣ', 'ಓ ಮಲ್ಲಿಗೆ', 'ಕುಟುಂಬ', 'ಮಾಂಗಲ್ಯಂ ತಂತು ನಾನೇನ', 'ಗೌರಮ್ಮ', 'ಗೋಕರ್ಣ', 'ಕುರಿಗಳು ಸಾರ್ ಕುರಿಗಳು' ಸೇರಿದಂತೆ ಸುಮಾರು ಅರವತ್ತು ಸಿನಿಮಾಗಳಿಗೆ ಸಂಭಾಷಣೆ ಬರೆದಿರುವ ಕೆ.ನಂಜುಂಡ ಅವರು ಇಲ್ಲಿ ಮಾತಾಡಿದ್ದಾರೆ


ಕೆ.ನಂಜುಂಡ

* ನಿಮ್ಮ ಕುಟುಂಬ, ಬಾಲ್ಯ ವಿದ್ಯಾಭ್ಯಾಸ ಕುರಿತಂತೆ ಹೇಳ್ತೀರಾ?

ನಾನು ಮೂಲತಃ ಬೆಂಗಳೂರಿನ ಶಿವಾಜಿನಗರದವನು. ತಂದೆ ಕೃಷ್ಣ ಟೈಲರ್ ಆಗಿದ್ದು, ತಾಯಿ ಸುಬ್ಬಲಕ್ಷ್ಮಿ ಗೃಹಿಣಿ. ಬಿಎಸ್ಸಿ ಕಂಪ್ಲೀಟಾಗಲಿಲ್ಲ. ಹೆಂಡತಿ ಸಾಯಿ ಪ್ರಸನ್ನ ಕೂಡ ಗೃಹಿಣಿ. ಮಗಳು ದೀಕ್ಷಾ ಆರನೇ ತರಗತಿ ಓದುತ್ತಿದ್ದಾಳೆ. ನಿಜಕ್ಕೂ ನನ್ನ ಬಾಲ್ಯ ರೋಚಕತೆಯಿಂದ ಕೂಡಿತ್ತು ಅನ್ನಬಹುದು. ನಮ್ಮ ಮನೆಯ ಆಸುಪಾಸಿನ ಚಿತ್ರಮಂದಿರಗಳಲ್ಲಿ ಯಥೇಚ್ಛವಾಗಿ ತಮಿಳು ಸಿನಿಮಾಗಳು ಬಿಡುಗಡೆಯಾಗುತ್ತಿದ್ದವು. ಅವುಗಳ ಮೋಡಿಗೆ ಒಳಗಾದವರಲ್ಲಿ ನಾನೂ ಒಬ್ಬ. ಆ ಕಾಲಕ್ಕೆ ಕೆ.ಬಾಲಚಂದರ್ ಅವರ 'ಅವರ್ ಒರು ತೊದರ್ ಕಥೈ', ಭಾರತಿರಾಜಾ ಅವರ 'ಪದಿನಾರು ವಯದಿನಿಲೆ', ಭಾಗ್ಯರಾಜ್ ಅವರ 'ಮುಂದಾಣೆ ಮುಡಿಚ್ಚು' ಚಿತ್ರಗಳು ನನ್ನನ್ನು ಭಾರೀ ಕಾಡಿದ್ದವು. ಕಾಲೇಜಿಗೆ ಬರುವಷ್ಟರಲ್ಲಿ ಮಣಿರತ್ನಂ ಅವರ 'ನಾಯಗನ್' ನನ್ನನ್ನು ಡಿಸ್ಟರ್ಬ್ ಮಾಡಿದ ಸಿನಿಮಾ. ನಾನು ಸಿನಿಮಾಗೆ ಬರಲು ಆ ಚಿತ್ರವೂ ಕೂಡ ಮುಖ್ಯ ಪ್ರೇರಣೆಯೆನ್ನಬಹುದು.

* ನಿಮಗೆ ಬಣ್ಣದ ಲೋಕದೆಡೆಗಿನ ಆಸಕ್ತಿ ಹೇಗೆ ಶುರುವಾಯಿತು?

ಚಿಕ್ಕಂದಿನಲ್ಲಿದ್ದಾಗ ಶಾಲಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ನಾಟಕಗಳಲ್ಲಿ ಪಾತ್ರ ಮಾಡುವ ಕಡೆ ನನಗಾಗ ತುಂಬಾ ಆಸಕ್ತಿಯಿತ್ತು. ಅದರಲ್ಲೂ 'ವೀರಪಾಂಡ್ಯ ಕಟ್ಟಬೊಮ್ಮನ್' ಪಾತ್ರ ನನಗೆ ಅಚ್ಚುಮೆಚ್ಚು. ಆ ಪಾತ್ರಕ್ಕೆ ಅಂತರಶಾಲಾ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿಯೂ ಬಂದಿತ್ತು. ಆನಂತರದ ದಿನಗಳಲ್ಲಿ ಸರ್ಕಾರಿ ವಿಜ್ಞಾನ ಕಾಲೇಜು ಸೇರಿದನಂತರ ಇನ್ನೊಂದಿಷ್ಟು ನಾಟಕಗಳಲ್ಲಿ ಪಾತ್ರ ಮಾಡುವ ಅವಕಾಶ ಒದಗಿಬಂತು. ಆಮೇಲೆ 'ಅಂತರಂಗ' ನಾಟಕ ಸಂಸ್ಥೆ ಸೇರಿಕೊಂಡೆ. ಆ ದಿನಗಳಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಅನೇಕ ನಾಟಕಗಳನ್ನು ಆಡಿದ್ದೆವು.

* ಬರವಣಿಗೆ ಕಡೆಗೆ ಆಸಕ್ತಿ ಹೇಗೆ ಬೆಳೆಯಿತು?

ನಾನು ಮೊದಲೇ ಹೇಳಿದ್ನಲ್ಲಾ... ತಮಿಳು ಸಿನಿಮಾಗಳು ಕಾಡಿದ್ದವು ಅಂತ. ಅವುಗಳ ಕಾಡುವಿಕೆಗೆ ಮುಖ್ಯವಾಗಿ ಆ ಚಿತ್ರಗಳಲ್ಲಿನ ಸ್ಕ್ರಿಪ್ಟ್. ನಾನೂ ಕೂಡ ಅಂತಹ ಕಥೆ, ಚಿತ್ರಕಥೆ, ಸಂಭಾಷಣೆ ಬರೆಯಬೇಕೆಂದು ಕನಸು ಕಂಡಿದ್ದೆ. ಹಾಗೇನೆ, ಹಿಂದಿಯ ಸಲೀಂ ಜಾವೇದ್ ಅವರ ಬರವಣಿಗೆ ನಂಗಿಷ್ಟ. ಅವರ ಬರವಣಿಗೆ ಇರುವ ಶೋಲೆ, ದೀವಾರ್, ತ್ರಿಶೂಲ್, ಮಜಬೂರ್, ಜಂಜೀರ್ ಚಿತ್ರಗಳು ನನ್ನೊಳಗಿನ ಬರಹಗಾರನಿಗೆ ಸ್ಫೂರ್ತಿ ತುಂಬಿದ್ದವು. ಉಳಿದಂತೆ, ಮದರ್ ಇಂಡಿಯ, ಮೊಘಲ್-ಇ-ಅಜಾಮ್ ಚಿತ್ರಗಳ ಬರವಣಿಗೆ ನನ್ನನ್ನು ಆಕರ್ಷಿಸಿತ್ತು.

* ಚಿತ್ರರಂಗಕ್ಕೆ ಅಧಿಕೃತವಾಗಿ ಪ್ರವೇಶ ಪಡೆದಿದ್ದು ಹೇಗೆ?

ಸಹಾಯಕ ನಿರ್ದೇಶಕನಾಗಿ ನಾನು ಕೆಲಸ ಮಾಡಿದ ಮೊದಲ ಸಿನಿಮಾ 'ಬ್ಲಡ್ ಸ್ಟೋನ್' ಅಂತ. ಆ ಚಿತ್ರ ರಜನಿಕಾಂತ್ ಅವರಿಗೆ ಇಂಗ್ಲಿಷಿನಲ್ಲಿ ಮೊದಲ ಸಿನಿಮಾ. ಹಾಗೆ ನೋಡಿದರೆ, ನನ್ನ ಸಿನಿಮಾ ಬದುಕಿಗೆ ದೊಡ್ಡ ತಿರುವು ಸಿಕ್ಕಿದ್ದು ಕೆ.ವಿ.ರಾಜು ಅವರ ಬಳಿ ಸೇರಿಕೊಂಡ ನಂತರ. ಕೆ.ವಿ.ರಾಜು ಅವರ ಜೊತೆ 'ಕದನ', 'ಸುಂದರ ಕಾಂಡ' ಸೇರಿದಂತೆ ಅನೇಕ ಸಿನಿಮಾಗಳಲ್ಲಿ ಕೆಲಸ ಮಾಡಿದೆ. ಅವರು ನನಗೆ ಓದಲು ಪುಸ್ತಕಗಳನ್ನು ಕೊಡುತ್ತಿದ್ದರು. ಅವುಗಳಲ್ಲಿ ಮುಖ್ಯವಾಗಿ, ವಿಲಿಯಂ ಗೋಲ್ಡ್ ಮ್ಯಾನ್ ಬರೆದಿರುವ 'ಅಡ್ವೆಂಚರ್ ಅಂಡ್ ಸ್ಕ್ರೀನ್ ರೈಟಿಂಗ್ಸ್' ಹಾಗೂ ಸಿಡ್ ಫೀಲ್ಡ್ ಬರೆದಿರುವ 'ಸ್ಕ್ರೀನ್ ಪ್ಲೇ' ಪುಸ್ತಕಗಳು. ಜೊತೆಗೆ, ಒಳ್ಳೊಳ್ಳೆಯ ಸಿನಿಮಾಗಳನ್ನು ನೋಡಲು ಕೊಡುತ್ತಿದ್ದರು. ನೋಡಿದ ನಂತರ ಅವುಗಳ ಕುರಿತು ಚರ್ಚಿಸುತ್ತಿದ್ದರು. ಅವುಗಳಲ್ಲಿ ಮುಖ್ಯವಾಗಿ 'ಕಾಸಬ್ಲಾಂಕ' ಹಾಗೂ 'ಸಿಟಿಜನ್ ಕೇನ್' ಚಿತ್ರಗಳು. ಆ ಮೂಲಕ ನನ್ನೊಳಗೆ ಸಿನಿಮಾಕಲೆಯನ್ನು ಸರಿಯಾದ ಮಾರ್ಗದಲ್ಲಿ ಬಿತ್ತಲು ಪ್ರಯತ್ನಿಸುತ್ತಿದ್ದರು. ನನ್ನಿಂದ ಸಂಭಾಷಣೆ ಬರೆಸುತ್ತಿದ್ದರು. ಬರೆದ ನಂತರ ಪರಿಶೀಲಿಸಿ, ತಪ್ಪುಗಳಿದ್ದಲ್ಲಿ ಮಾರ್ಗದರ್ಶನ ನೀಡಿ ಕಲಾವಿದರಿಗೆ ಕೊಡಲು ಹೇಳುತ್ತಿದ್ದರು. ಕೆ.ವಿ.ರಾಜು ಅವರಿಂದ ಬಹಳಷ್ಟು ಕಲಿತೆ.

* ನಿಮ್ಮ ಹಾಗೂ ಪ್ರಕಾಶ್ ರೈ ನಡುವೆ ಒಳ್ಳೆಯ ಬಾಂಧವ್ಯವಿತ್ತು ಅಂತ ಕೇಳಿದ್ದೇವೆ. ಅದರ ಬಗ್ಗೆ ಸ್ವಲ್ಪ ಹೇಳ್ತೀರಾ?

ಈ ನಡುವೆ ಸಿನಿಮಾ ಸಾಂಗತ್ಯದ ಜೊತೆಗೆ ನಾನು ಪತ್ರಿಕೆಗಳಿಗೂ ಬರೆಯುತ್ತಿದ್ದೆ. 'ಚಿತ್ರವಿಹಾರಿ' ಅನ್ನುವ ಪತ್ರಿಕೆಗೆ ಬರೆಯುತ್ತಿದ್ದ ಕಾಲದಲ್ಲಿ ಸು.ರಮಾಕಾಂತ ಅವರ ಮುಖೇನ ಪ್ರಕಾಶ್ ರೈ ಪರಿಚಯವಾಯಿತು. ಆನಂತರದ ದಿನಗಳಲ್ಲಿ ರೈ ನನ್ನ ಆತ್ಮೀಯ ಗೆಳೆಯರಲ್ಲಿ ಒಬ್ಬರಾದರು. ಅವರು ಹೆಚ್ಚಾಗಿ ಕನ್ನಡ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆಗ ನಾನವರಿಗೆ, ಕೆಲವು ತಮಿಳು ಚಿತ್ರಗಳನ್ನು ತೋರಿಸಿದೆ. ತಮಿಳು ಚಿತ್ರರಂಗದ ಕುರಿತು ಅವರೊಡನೆ ಮಾತಾಡುತ್ತಿದ್ದೆ. ನಮ್ಮಿಬ್ಬರ ಗೆಳೆತನ ಎಷ್ಟಿತ್ತೆಂದರೆ, ಎಷ್ಟೋ ಸಲ ನಾನು ಮನೆಗೆ ಹೋಗದೆ ಅವರ ರೂಮಿನಲ್ಲೇ ಇದ್ದುಬಿಡುತ್ತಿದ್ದೆ.

* ಸಂಭಾಷಣಾಕಾರರಾಗಿ ನಿಮ್ಮ ಮೊದಲ ಸಿನಿಮಾ ಯಾವುದು?

ನನ್ನನ್ನು ರೈಟರ್ ಮಾಡಿದ್ದು ಕೆ.ವಿ.ರಾಜು ಅವರೇ. ನಾನೊಂದು ಕಥೆ ಬರೆದಿದ್ದೆ. ಅದನ್ನು ಕೆ.ವಿ.ರಾಜು ಅವರು ಮೆಚ್ಚಿಕೊಂಡಿದ್ದರು. ತಕ್ಷಣ ಶಂಕರ್ ನಾಗ್ ಅವರ ಹತ್ತಿರ ಹೋಗಿ ಕಥೆ ಹೇಳುವಂತೆ ಹೇಳಿದ್ದರು. ಶಂಕರ್ ನಾಗ್ ಅವರ ಬಳಿ ಹೋಗಿ ಕಥೆ ಹೇಳಿದೆ. ಅವರಿಗೂ ಕಥೆ ಇಷ್ಟವಾಯಿತು. ಇನ್ನೂ ಕ್ಲೈಮ್ಯಾಕ್ಸ್ ಬರೆದಿರಲಿಲ್ಲ. ಶಂಕರ್ ನಾಗ್ ಅವರೇ ನನ್ನಲ್ಲಿ ಆತ್ಮವಿಶ್ವಾಸ ತುಂಬಿ ಕ್ಲೈಮ್ಯಾಕ್ಸ್ ಬರೆಯುವಂತೆ ಹೇಳಿದ್ದರು. ಆನಂತರ ಕ್ಲೈಮ್ಯಾಕ್ಸ್ ಬರೆದೆ. ನನ್ನ ಕಥೆ, ಚಿತ್ರಕಥೆ ಇದ್ದ ಆ ಚಿತ್ರದ ನಿರ್ದೇಶಕ ರಾಜೇಂದ್ರ ಕುಮಾರ್ ಆರ್ಯ ಅಂತ. 'ವಿಜಯ ಕ್ರಾಂತಿ' ಎಂಬ ಶೀರ್ಷಿಕೆಯಿದ್ದ ಆ ಚಿತ್ರದ ಮೂಲಕ ನಟಿ ಸೌಂದರ್ಯ ಮೊದಲಬಾರಿಗೆ ಬಣ್ಣ ಹಚ್ಚಿದರೆ, ದೇವರಾಜ್, ಶಶಿಕುಮಾರ್ ನಟಿಸಿದ್ದರು. ಕೆ.ವಿ.ರಾಜು ಅವರೇ ಆ ಚಿತ್ರಕ್ಕೆ ಡೈಲಾಗ್ಸ್ ಬರೆದಿದ್ದು ನನ್ನ ಪಾಲಿಗೆ ಹೆಮ್ಮೆ.

* ನೀವು ಸಂಭಾಷಣೆ ಬರೆದ ಪ್ರಮುಖ ಚಿತ್ರಗಳಾವುವು?


ಸರ್ವರ್ ಸೋಮಣ್ಣ, ಓ ಮಲ್ಲಿಗೆ, ಕುಟುಂಬ, ಮಾಂಗಲ್ಯಂ ತಂತು ನಾನೇನ, ಖಾಕಿ, ಗೌರಮ್ಮ, ಗೋಕರ್ಣ, ಕುರಿಗಳು ಸಾರ್ ಕುರಿಗಳು, ಜಸ್ಟ್ ಮಾತ್ ಮಾತಲ್ಲಿ, ಪ್ರೀತ್ಸು ತಪ್ಪೇನಿಲ್ಲ, ನಾನು ನನ್ನ ಹೆಂಡ್ತೀರು, ಮದುವೆ ಆಗೋಣ ಬಾ, ಉಸಿರೇ ಒಳಗೊಂಡಂತೆ ಸುಮಾರು ಐವತ್ತೇಳು ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದೇನೆ. ಸದ್ಯಕ್ಕೆ 'ಸಾಫ್ಟ್‌ವೇರ್ ಗಂಡ' ಹಾಗೂ 'ಸರ್ಕಾರಿ ಕೆಲಸ ದೇವರ ಕೆಲಸ' ಅನ್ನುವ ಸಿನಿಮಾಗಳಿಗೆ ಬರೆಯುತ್ತಿದ್ದೇನೆ.

* ನೀವು ನಿರ್ದೇಶಕರೂ ಕೂಡ. ಅದರ ಬಗ್ಗೆ ಹೇಳ್ತೀರಾ?

'ಕನಸಲೂ ನೀನೆ ಮನಸಲೂ ನೀನೆ' ಅನ್ನುವ ಸಿನಿಮಾವೊಂದನ್ನು ನಿರ್ದೇಶಿಸಿದ್ದೆ. ಆ ಚಿತ್ರದಲ್ಲಿ ಪ್ರಕಾಶ್ ರೈ, 'ಕಾದಲ್ ದೇಶಂ' ಖ್ಯಾತಿಯ ವಿನೀತ್, ಆಯೇಷಾ ಜುಲ್ಕ, ಎಸ್.ಪಿ.ಬಾಲಸುಬ್ರಹ್ಮಣ್ಯಂ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಮತ್ತೀಗ 'ಮೆಲೋಡಿ' ಅನ್ನುವ ಒಂದು ಸಿನಿಮಾ ನಿರ್ದೇಶಿಸಲು ತಯಾರಿ ನಡೆಸಿಕೊಳ್ಳುತ್ತಿದ್ದೇನೆ. ರಾಜೇಶ್ ಕೃಷ್ಣನ್ ನಾಯಕ ನಟ. ಎಲ್.ಎನ್.ಶಾಸ್ತ್ರಿ ಸಂಗೀತ ನೀಡುತ್ತಿದ್ದಾರೆ.

* ಸಿನಿಮಾ ಬರವಣಿಗೆ ಬಗ್ಗೆ ಆಸಕ್ತಿ ಇರುವ ಯುವಬರಹಗಾರರಿಗೆ ನಿಮ್ಮ ಕಿವಿಮಾತೇನು?

ನೋಡಿ, ನಿರ್ದೇಶಕನಾಗಲು 2-3 ವರ್ಷದ ಅನುಭವಿದ್ದರೆ ಸಾಕು. ಆದರೆ, ಸಿನಿಮಾ ಬರಹಗಾರನಾಗಲು ಕನಿಷ್ಠ 10 ವರ್ಷದ ಅನುಭವವಾದರೂ ಬೇಕಾಗುತ್ತದೆ. ಆ ಅನುಭವಕ್ಕಾಗಿ ನುರಿತ ಬರಹಗಾರರ ಜೊತೆ ಕೆಲಸ ಮಾಡಬೇಕಾಗುತ್ತದೆ. ಆದರೆ ಈಗಿನ ಹುಡುಗರಿಗೆ ಅಷ್ಟು ಸಂಯಮವಿಲ್ಲ, ಬರವಣಿಗೆ ಬಗ್ಗೆ ನಿಜವಾದ ಪ್ರೀತಿ ಇಲ್ಲ, ಡಿಸ್ಕಷನ್‌ಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಈ ಪ್ರವೃತ್ತಿ ಬದಲಾಗಬೇಕು. ಜೊತೆಗೆ ಹೊಸ ಬರಹಗಾರರನ್ನು ಚಿತ್ರರಂಗ ಪ್ರೋತ್ಸಾಹಿಸಬೇಕು. ಕೆ.ವಿ.ರಾಜು ತರಹದವರು ನನ್ನ ಬೆನ್ನು ತಟ್ಟಿ ರೂಪಿಸಿದ್ದರಿಂದ ಇಷ್ಟು ವರ್ಷ ಇಲ್ಲಿ ಬರೆಯಲು ಸಾಧ್ಯವಾಯಿತು. ಸಿನಿಮಾ ಬರವಣಿಗೆಯಿಂದಲೇ ಬದುಕು ಕಟ್ಟಿಕೊಳ್ಳಬಲ್ಲೆನೆಂಬ ಆತ್ಮವಿಶ್ವಾಸವನ್ನು ಯುವಬರಹಗಾರರಲ್ಲಿ ತುಂಬುವ ಕೆಲಸ ಆಗಬೇಕಿದೆ. ■



ಪ್ರತಿಫಲವನ್ನೂ ಬಯಸದೆ, ಸಮಾಜದ ಒಳಿತನ್ನು ಮಾಡುತ್ತಾ ಕಾಮ, ಕ್ರೋಧ, ಮದ-ಮತ್ಸರಗಳಂತಹ ಅರಿಷಡ್ವರ್ಗಗಳಿಂದ ದೂರುವಿರುತ್ತಾರೆಂದು. ಹೀಗೆ ಜೀವಿಸಲಾಗದವರು ಖಾವಿ ಧಿಕ್ಕರಿಸಿ ಖಾದಿ ತೊಡಬೇಕು. ಏಕೆಂದರೆ ರಾಜ್ಯದಲ್ಲಿ ರಾಜಕಾರಣಿಗಳಿಗಿಂತಲೂ ಮಠಾಧೀಶರ ಉಪಟಳ ಹೆಚ್ಚಾಗುತ್ತಿದೆ. ರಾಜಕಾರಣಿಗಳ ನೇರ ರಿಮೋಟ್ ಕಂಟ್ರೋಲರ್ಸ್ ಸ್ವಾಮೀಜಿಗಳಾಗಿದ್ದಾರೆ. ಈ ಹಿಂದೆ ರಾಜ್ಯದ ಒಬ್ಬ ಮುಖ್ಯಮಂತ್ರಿ ಜೈಲುಪಾಲಾದಾಗ ಆತನನ್ನು ಭೇಟಿ ಮಾಡಿದವರು ಇಂತಹ ಕಪಟ ಸ್ವಾಮೀಜಿಗಳು.

ಸ್ವಾಮೀಜಿಗಳ ಕಂಟಕ ಪ್ರಸ್ತುತ ಸರ್ಕಾರವನ್ನೂ ಬಿಟ್ಟಿಲ್ಲದಿರುವುದು ಎದ್ದು ಕಾಣುತ್ತದೆ. ಇತ್ತೀಚೆಗೆ ಬಹುಚರ್ಚಿತ "ಕಂದಾಚಾರ ನಿಷೇಧ ಕರಡು ಮಸೂದೆ-2013" ಬಗ್ಗೆ ಎಲ್ಲಾ ಸ್ವಾಮೀಜಿಗಳು ಸರ್ಕಾರಕ್ಕೆ ಸಲಹೆ ಸೂಚನೆ ನೀಡಿ ಉತ್ತಮ ನಿರ್ಧಾರಕ್ಕೆ ಬರಬಹುದಿತ್ತು. ಆದರೆ ಸಮಾಜದ ಒಳಿತಿಗಿಂತ ಕೇಡನ್ನೇ ಬಯಸುವ ಸ್ವಾಮಿಗಳು ಜಾತಿ ಆಧಾರದಲ್ಲಿ ಗುಂಪು ಕಟ್ಟಿಕೊಂಡು ಸರ್ಕಾರದ ಮೇಲೆ ಒತ್ತಡ ತಂದರು.

ಖಾವಿಗೆ ನಿಜವಾದ ಅರ್ಥ ಕಲ್ಪಿಸಿದ ಆರ್ಯ ಸಮಾಜದ ಸುಧಾರಕರಾದ ದಯಾನಂದ ಸರಸ್ವತಿಯವರು, ಸ್ವಾಮಿ ವಿವೇಕಾನಂದರು, ನಮ್ಮೆಲ್ಲರ ಪಾಲಿಗೆ ಆದರ್ಶಪ್ರಿಯರಾಗಲು ಕಾರಣಗಳು ಹಲವು. ಅವರು ಉತ್ತಮ ಗುಣದಿಂದ ಸಹನೆ, ಸಚ್ಚಾರಿತ್ರ್ಯ, ಸಮಾಜ ಸಾಮರಸ್ಯತೆ, ತ್ಯಾಗ, ಶಾಂತಿ, ವಿಶಾಲ ಮನೋಭಾವ ಮತ್ತು ವಿಶ್ವಮಾನವತೆಯಿಂದ ಸಮಾಜವನ್ನು ತಿದ್ದಿ ತೀಡಿದ್ದಾರೆ. ಅವುಗಳು ನಮ್ಮೆಲ್ಲರಿಗೆ ಬದುಕಲು ಹಾಕಿಕೊಟ್ಟ ಧರ್ಮ ಮಾರ್ಗ. ಆದರೆ ಆಧುನಿಕ ಸಾಧುಸಂತರು, ಸ್ವಾಮೀಜಿಗಳು ರಾಜಕೀಯದಲ್ಲಿ ತೊಡಗಿದ್ದಾರೆ. ಅದು ಅವರಿಗೆ ಸಲ್ಲದು.

- ಸಂಗಪ್ಪ ವಗ್ಗರ್ ಹಿರೇಮಳಗಾವಿ, ಬೆಂಗಳೂರು

ಮಾನಗೇಡಿ ಮಾಳವಿಕಾ!

ಕನ್ನಡ ಟಿವಿ ವಾಹಿನಿಗಳಲ್ಲಿ ಒಂದಾದ ಜೀ ಟಿವಿ ಒಳ್ಳೆಯ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. 'ಬದುಕು ಜಟಕಾ ಬಂಡಿ' ಕಾರ್ಯಕ್ರಮದ ಉದ್ದೇಶ ಒಳ್ಳೆಯದಿದ್ದರೂ ಅಲ್ಲಿ ಕೇಳುವ ಪ್ರಶ್ನೆಗಳು, ಸಂದರ್ಶಕರನ್ನು ಕರೆತರುವ ಗೂಂಡಾಗಿರಿ ರೀತಿ ಮತ್ತು ಸಂದರ್ಶನದಲ್ಲಿ ಪ್ರಚೋದನಾಕಾರಿ ಪ್ರಶ್ನೆಗಳನ್ನು ಕೇಳುವ ರೀತಿ ಅಂತು ಮಾಳವಿಕಾಗೆ ಹೇಳಿಮಾಡಿಸಿದ ಪಾತ್ರವಾಗಿದೆ.

ಕಾರ್ಯಕ್ರಮದಲ್ಲಿ ಒಂದು ಕೋಣೆಯಲ್ಲಿ ಎರಡು ಗುಂಪಿನ ಸದಸ್ಯರನ್ನು ಒಟ್ಟುಗೂಡಿಸಿ ಅಲ್ಲಿ ಒಬ್ಬರನ್ನೊಬ್ಬರನ್ನು ಅಶ್ಲೀಲವಾಗಿ ಬೈಯುವುದು, ಹೊಡೆಯುವುದು ಇದನ್ನೆಲ್ಲಾ ಕ್ಯಾಮೆರಾದಲ್ಲಿ ಸೆರೆ ಹಿಡಿಯುವುದು ಮತ್ತು ಸ್ಟುಡಿಯೋದ



ಹೊರಗಡೆ ಅವರ ಜಗಳಕ್ಕೆ ಪ್ರಚೋದನೆ ಕೊಟ್ಟು ಅದನ್ನು ಕೂಡಾ ಕ್ಯಾಮೆರಾದಲ್ಲಿ ಸೆರೆ ಹಿಡಿದು ಅದನ್ನು ತಮ್ಮ ಜೀ ಟಿವಿಯಲ್ಲಿ ಪ್ರಸಾರ ಮಾಡುತ್ತಿದ್ದಾರೆ. ಒಂದು ಕುಟುಂಬಕ್ಕೆ ಸಂಬಂಧಿಸಿದ ವಿಷಯವಾಗಿದ್ದನ್ನು ಇಡೀ ಜಗತ್ತಿಗೆ ತೋರಿಸಿ ಹೆಸರು ಮತ್ತು ಹಣ ಮಾಡಿಕೊಳ್ಳುತ್ತಿದ್ದಾರೆ.

ಪತ್ರಿಕೆಯಲ್ಲಿ ಪ್ರಕಟಗೊಂಡ ಪೂರ್ವಿ ಎಂಬ ಅಮಾಯಕ ಹುಡುಗಿಯ ಬಗ್ಗೆ ಓದಿದೆ. ಮಾಳವಿಕಾ, ಉಷಾ, ಲಕ್ಷ್ಮಿ ಮತ್ತು ಟಿವಿ ಪತ್ರಕರ್ತ ಜೆಬಿ ಇವರೆಲ್ಲರೂ ಮಾನಗೇಡಿಗಳೇ ಆಗಿದ್ದಾರೆ. ಇವರೆಲ್ಲರೂ ನೊಂದ ಕುಟುಂಬಗಳೊಡನೆ ಆಟ ಆಡುತ್ತಿದ್ದಾರೆ. 'ಇಲಿಗೆ ಪ್ರಾಣ ಸಂಕಟ ಬೆಕ್ಕಿಗೆ ಚೆಲ್ಲಾಟ' ಎನ್ನುವ ಹಾಗೆ ಜೀ ಟಿವಿಯವರು ಈ 'ಬದುಕು ಜಟಕಾ ಬಂಡಿ' ಕಾರ್ಯಕ್ರಮದಿಂದ ಹೆಸರು ಮಾಡಿಕೊಳ್ಳುತ್ತಿದ್ದಾರೆ. ಇವರೆಲ್ಲರ ಮೇಲೆ ವಕೀಲರ ಗುಂಪು ಕೋರ್ಟ್ ಕೇಸು ಮಾಡುವುದು ತುಂಬಾ ಒಳ್ಳೆಯ ವಿಷಯವೇ. ಜೊತೆಗೆ ಇಂತಹ ಅಸಹ್ಯಕರ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತಿರುವ ಜೀ ಟಿವಿ ಮೇಲೆಯೂ ಕೇಸು ಮಾಡಬೇಕು. ಈ 'ಬದುಕು ಜಟಕಾ ಬಂಡಿ' ಕಾರ್ಯಕ್ರಮ ಪ್ರಸಾರ ಮಾಡುವುದನ್ನು ನಿಲ್ಲಿಸಬೇಕು.

- ಸಂತೋಷಕುಮಾರ. ದಿ. ವಾಲಿ, ರಾಮದುರ್ಗ

ನರೇಂದ್ರ ಮೋದಿ ಭಾರತದ ಪ್ರಧಾನಿ ಆಗಲು ಈ ದೇಶದ ಜನರು ಬಿಡುವದಿಲ್ಲ. ಮೋದಿ ಗುಜರಾತ್‌ನಲ್ಲಿ 24 ಗಂಟೆ ವಿದ್ಯುತ್ ನೀಡಿದ್ದಾನೆ ಎನ್ನುವುದು ಹಸಿ ಸುಳ್ಳು. ಇತ್ತೀಚೆಗೆ ಮೋದಿ ಕರ್ನಾಟಕಕ್ಕೆ ಬಂದಾಗ ಬೇರೆ ವಿಷಯ ಸಿಗದೆ ಕಸಾಯಿಖಾನೆ ಬಗ್ಗೆ ಮಾತಾಡಿದ್ದಾನೆ. ಈ ದೇಶದಲ್ಲಿ ಅತಿಹೆಚ್ಚು ಗೋವಿನ ಮಾಂಸ ವಿದೇಶಕ್ಕೆ ರಫ್ತಾಗಿದ್ದು ವಾಜಪೇಯಿ ಸರಕಾರ ಅಧಿಕಾರದಲ್ಲಿದ್ದಾಗ ಎಂಬ ವಿಷಯ ಆತನಿಗೆ ತಿಳಿದಿಲ್ಲವೇ? ಅಥವಾ ಜಾಣ ಕುರುಡೆ?

- ಅಬ್ದುಲ್ ರಜಾಕ್, ಈ ಮೇಲ್ ಮೂಲಕ

ಹೇಳಿಕೇಳಿ ಮೋದಿ ಗುಜರಾತಿನ ಹಿಟ್ಲರ್. ಅವನಿಷ್ಟದಂತೆ ಎಲ್ಲಾ ಜರುಗಬೇಕು. ಪಾಪ ಕಟ್ಟಿಕೊಂಡವಳಿಗೆ ಕಣ್ಣೀರು, ಕೂಡಿಕೊಂಡವಳಿಗೆ ಸರ್ಕಾರಿ ಸವಲತ್ತು. ಆದರೆ ಸಂಘ ಪರಿವಾರಗಳಿಗೆ ಎಲ್ಲಾ ಹೆಣ್ಣುಗಳೂ ಆಟದ ಗೊಂಬೆಗಳೆ. 'ಭಾವಿ' ಪ್ರಧಾನಿಯನ್ನು ಬಾವಿಗೆ ಬೀಳಿಸುವ ಸ್ಫೋಟಕ ಸುದ್ದಿ ನೀಡಿದ ಪತ್ರಿಕೆಯ ದಿಟ್ಟತನಕ್ಕೆ ಹ್ಯಾಟ್ಸ್ ಆಫ್.

ಗೌರಿ ಲಂಕೇಶ್ ಪತ್ರಿಕೆಯ ಡಿಸೆಂಬರ್ 4, 2013ರ ಸಂಚಿಕೆಯನ್ನು ಗುಜರಾತಿ ಭಾಷೆಯಲ್ಲಿ ಗುಜರಾತಿಗಳು ಓದುವಂತಿದ್ದರೆ... ಛೀ!

- ರವಿಕುಮಾರ್, ಹಾಸನ

ಮೋದಿ ಕೇವಲ ಕಾಗದದ ಹುಲಿ. ಕಡಿಮೆ ಬೆಲೆಯ ವಸ್ತುಗಳಿಗೆ ಬೇಡಿಕೆ ಹೆಚ್ಚು, ಬಾಳಿಕೆ ಕಡಿಮೆ. ಭಾರತ ದೇಶದ ಒಂಭತ್ತನೆ ತರಗತಿಯ ಸಾಮಾನ್ಯ ಇತಿಹಾಸ, ಸಂವಿಧಾನವೇ ತಿಳಿಯದ ಈತ ಅದು ಹೇಗೆ ಉತ್ತೀರ್ಣನಾದ ಎಂಬುದೇ ತನಿಖೆಯಾಗಬೇಕಿದೆ.


- ಗಣೇಶ್ ಕೊಡ್ಲಾಡಿ, ಕುಂದಾಪುರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 15/-



ಬೀದರ್ ಬೀದಿಗಳಲ್ಲಿ ಮಾಣಿಕ್ಯ



ಸುದೀಪ್ ನಿರ್ದೇಶನದ 'ಮಾಣಿಕ್ಯ' ಚಿತ್ರ ಬೀದರ್‌ನಲ್ಲಿ ಬೀಡುಬಿಟ್ಟಿದೆ. ಎರಡು ಕುಟುಂಬಗಳ ನಡುವೆ ನಡೆಯುವ ಕಥೆಯುಳ್ಳ ಈ ಚಿತ್ರದಲ್ಲಿ ರವಿಚಂದ್ರನ್ ಹಾಗೂ ರವಿಶಂಕರ್ ತಲಾ ಒಂದೊಂದು ಕುಟುಂಬದ ಮುಂದಾಳತ್ವ ವಹಿಸಲಿದ್ದಾರೆ. ರವಿಚಂದ್ರನ್ ಅವರದ್ದು ಸುದೀಪ್ ತಂದೆಯ ಪಾತ್ರ. ಬೀದರ್‌ನಲ್ಲಿ ಹತ್ತು ದಿನಗಳ ಕಾಲ ಚಿತ್ರೀಕರಣ ನಡೆಯಲಿದ್ದು, ಬೀದರ್ ಪಟ್ಟಣದ ಪ್ರಮುಖ ಲೊಕೇಶನ್‌ಗಳು ಕ್ಯಾಮರಾದಲ್ಲಿ ಸೆರೆಯಾಗಲಿವೆ. ಸಾಮಾನ್ಯವಾಗಿ ಬೀದರ್‌ನ ಕೋಟೆ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಕೆಲವು ಲೊಕೇಶನ್‌ಗಳನ್ನಷ್ಟೇ ಈ ಮೊದಲು ಕೆಲವು ಹಾಡುಗಳಿಗೆ ಬಳಸಿಕೊಳ್ಳಲಾಗಿದ್ದು, 'ಮಾಣಿಕ್ಯ' ಚಿತ್ರದಲ್ಲಿ ಬೀದರ್ ಸಿಟಿಯನ್ನು ವಿಶೇಷವಾಗಿ ತೋರಿಸಲಾಗುವುದಂತೆ.

ಭಾರತದ ಅತಿ ದುಬಾರಿ ಸಿನಿಮಾ 'ಧೂಮ್'



ಡಿಸೆಂಬರ್ 20ರಂದು ದೇಶ ಮತ್ತು ವಿದೇಶಗಳಲ್ಲಿ ಒಮ್ಮೆಗೆ ಬಿಡುಗಡೆಯಾಗಲಿರುವ ಹಿಂದಿ ಚಿತ್ರ 'ಧೂಮ್ 3' ಭಾರತದಲ್ಲಿ ನಿರ್ಮಾಣಗೊಂಡಿರುವ ಅತಿ ದುಬಾರಿ ಚಿತ್ರ ಎಂದೆನಿಸಿಕೊಂಡಿದೆ. ಆಮೀರ್ ಖಾನ್, ಕತ್ರೀನಾ ಕೈಫ್, ಅಭಿಶೇಕ್ ಬಚ್ಚನ್ ಮತ್ತು ಉದಯ್ ಚೋಪ್ರಾ ನಟಿಸಿರುವ ಈ ಚಿತ್ರದ ಬಜೆಟ್ ಬರೋಬ್ಬರಿ 150 ಕೋಟಿ ರೂಪಾಯಿಗಳು.

ಈ ಹಿಂದೆ ಬಂದಿದ್ದ 'ಧೂಮ್' ಮತ್ತು 'ಧೂಮ್ 2' ಎಂಬ ಆಕ್ಷನ್‌ಭರಿತ ಚಿತ್ರಗಳು ಬಾಕ್ಸ್ ಆಫೀಸನ್ನು ಚಿಂದಿ ಉಡಾಯಿಸಿದ್ದವು. ಮೊದಲನೆ 'ಧೂಮ್' ಜಾನ್ ಅಬ್ರಹಾಮ್ ಮುಖ್ಯಪಾತ್ರದಲ್ಲಿ ನಟಿಸಿದ್ದರೆ, 'ಧೂಮ್ 2' ಹೃತಿಕ್ ರೋಷನ್ ನಟಿಸಿದ್ದರು. ಮೂರೂ ಧೂಮ್ ಚಿತ್ರಗಳಲ್ಲಿ ನಟಿಸಿರುವವರು ಅಭಿಶೇಕ್ ಬಚ್ಚನ್ ಮತ್ತು ಉದಯ್ ಚೋಪ್ರಾ ಮಾತ್ರ.

ಈಗ ಎಲ್ಲೆಡೆ ಹವಾ ಎಬ್ಬಿಸಿರುವ 'ಧೂಮ್ 3' ಚಿತ್ರದಲ್ಲಿರುವ 'ಮಲಂಗ್' ಎಂಬ ಒಂದು ಹಾಡಿಗೆಂದೇ ಐದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆಯಂತೆ. ಆ ಹಾಡಿಗೆ ಅಮೆರಿಕದಿಂದ 200 ಜಿಮ್ನಾಸ್ಟ್‌ಗಳಲ್ಲಿ ಕರೆತರಲಾಗಿತ್ತು, ಹಾಗೆಯೇ ಈ ಹಾಡಿನ ಚಿತ್ರೀಕರಣಕ್ಕೆ ರಿಲಯನ್ಸ್ ಸ್ಟುಡಿಯೋದಲ್ಲಿ ಅದ್ದೂರಿಯಾದ ಸೆಟ್ ಅನ್ನು ನಿರ್ಮಿಸಲಾಗಿತ್ತು. ಈ ಸೆಟ್ ನಿರ್ಮಿಸಲು ತೆಗೆದುಕೊಂಡ ಅವಧಿ ಎರಡು ತಿಂಗಳು! ಈ ಹಾಡಿಗೆಂದೇ ಆಮೀರ್ ಖಾನ್ ಜಿಮ್ನಾಸ್ಟ್ ಆಗಿ ತರಬೇತಿಯನ್ನೂ ಪಡೆದಿದ್ದಾರೆ.

ಈಗಾಗಲೇ ಈ ಚಿತ್ರದ ಇನ್ನೊಂದು 'ಧೂಮ್ ... ಹಾಡು ಇಂಟರ್‌ನೆಟ್‌ನಲ್ಲಿ ಹುಚ್ಚೆಬ್ಬಿಸಿದೆ.

'ಧೂಮ್ 3' ಚಿತ್ರವನ್ನು ವಿಜಯ್ ಆ... ನಿರ್ದೇಶಿಸಿದ್ದಾರೆ. ಇದರ ನಿರ್ಮಾಪಕ ಆದಿತ್ಯ ... ಸಂಗೀತ ನಿರ್ದೇಶಕ ಪ್ರೀತಮ್. ಈ ಚಿತ್ರ ತೆಲುಗು... ತಮಿಳಿನಲ್ಲೂ ಡಬ್ ಆಗಿ ಬಿಡುಗಡೆಯಾಗಲಿದ...

ಮತ್ತೊಮ್ಮೆ ಎಲ್ಲೆಡೆ 'ಧೂಮ್ ... ಕೂಗುಗಳು ಕೇಳಿಬಂದರೆ ಅಚ್ಚರಿ ಇಲ...



ಹರ್ಷಿಕಾ ಡಬಲ್ ಧಮಾಕ



ಕೊಡಗಿನ ಬೆಡಗಿ ಹರ್ಷಿಕಾ ಪೂಣಚ್ಚ ಅಭಿನಯದ 'ಬ 3' ಚಿತ್ರ ಈ ವಾರ ತೆರೆಕಾಣಬೇಕಿತ್ತು. ಬಿಡುಗಡೆ ಕಾರ್ಯಕ್ರಮ ಕಾರಣಾಂತರಗಳಿಂದ ಮುಂದಿನ ವಾರಕ್ಕೆ ಹೋಗಿದೆ. ವಿಶೇಷವೆಂದರೆ ಅದೇ ದಿನ, ಹರ್ಷಿಕಾ ಅಭಿನಯದ ಮತ್ತೊಂದು ಚಿತ್ರ 'ಅದ್ವೈತ'ವೂ ಬಿಡುಗಡೆಯಾಗುತ್ತಿದೆ. ಈ ಮೊದಲು, ಇದೇ ಹರ್ಷಿಕಾಳ 'ಸುಗ್ರೀವ' ಹಾಗೂ 'ಜುಗಾರಿ' ಚಿತ್ರಗಳು ಒಂದೇ ದಿನ ಬಿಡುಗಡೆಯಾಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹೀಗೆ ತನ್ನ ಚಿತ್ರಗಳು ಒಂದೇ ದಿನ ಬಿಡುಗಡೆಯಾಗುವ ಪವಾಡದ ಬಗ್ಗೆ ಹರ್ಷಿಕಾ ಅಷ್ಟಾಗಿ ತಲೆಕೆಡಿಸಿಕೊಂಡಿಲ್ಲವಂತೆ. ಬದಲಾಗಿ ತನ್ನೆರಡು ಹೊಸ ಚಿತ್ರಗಳು ತೆರೆಕಾಣಲಿರುವ ದಿನಕ್ಕೆ ಎರಡು ದಿನ ಮುಂಚಿತವಾಗಿ ತನ್ನ ತಂದೆಯ ಹುಟ್ಟಿದ ಹಬ್ಬ ಇರುವುದು ಆಕೆಗೆ ಖುಷಿ ಕೊಟ್ಟಿದೆಯಂತೆ. ಜನಗಳು ತನ್ನೆರಡೂ ಚಿತ್ರಗಳನ್ನು ನೋಡಿ ಪ್ರೋತ್ಸಾಹಿಸಬೇಕೆಂಬುದು ಹರ್ಷಿಕಾಳ ಬಯಕೆ.

ಒಂದು ಕಾಲದಲ್ಲಿ ರವಿಚಂದ್ರನ್ ಅವರ ಎರಡೆರಡು ಚಿತ್ರಗಳು ಒಂದೇ ದಿನ ತೆರೆ ಕಾಣುತ್ತಿದ್ದವು ಅನ್ನುವ ಸ್ವಾರಸ್ಯಕರ ಸಂಗತಿಯನ್ನು ನೆನಪಿಸಿಕೊಳ್ಳಬಹುದು. ಆ ಚಿತ್ರಗಳು ಎಷ್ಟು ಸಂಭ್ರಮದಿಂದ ಬಿಡುಗಡೆಯಾಗುತ್ತಿದ್ದವೋ ಅಷ್ಟೇ ಸಂಭ್ರಮದಿಂದ ಓಡಿ ನೂರು ದಿನ, ಸಿಲ್ವರ್ ಜುಬಿಲಿ ಆಚರಿಸುತ್ತಿದ್ದವು. ಈಗ ಹರ್ಷಿಕಾಳ ಸರದಿ.

'ಸುಗ್ರೀವ', 'ಜುಗಾರಿ' ಚಿತ್ರಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ್ದ ಕನ್ನಡ ಪ್ರೇಕ್ಷಕ ಹರ್ಷಿಕಾಳ ಮುಂಬರುವ ಜೋಡಿ ಚಿತ್ರಗಳನ್ನು ಹೇಗೆ ಸ್ವೀಕರಿಸುತ್ತಾನೋ ನೋಡಬೇಕು.

ಸಿನಿಮಾನೇ ನಮ್ಮವ್ವ



ಬೆಳಗಾವಿ ಅಧಿವೇಶನಕ್ಕೆ ಚಕ್ಕರ್ ಹೊಡೆದು ಈ ವಾರ ತೆರೆಕಾಣುತ್ತಿರುವ ತಮ್ಮ 'ಕೂಲ್ ಗಣೇಶ' ಚಿತ್ರದ ಬಿಡುಗಡೆಯ ಪ್ರಯುಕ್ತ ಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದ ಜಗ್ಗೇಶ್ "ಸಿನಿಮಾ ನನ್ನ ತಾಯಿ. ಕೈಯಲ್ಲಿ ಬರೀ ಇಪ್ಪತ್ತು ರೂಪಾಯಿ ಇಟ್ಟುಕೊಂಡಿದ್ದ ನನ್ನಂಥವನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದ್ದು ಸಿನಿಮಾನೇ. ಸಿನಿಮಾ ನನಗೆ ಎಲ್ಲವನ್ನೂ ಕೊಟ್ಟಿದೆ. ನನ್ನ ಮಾತಿನಲ್ಲಿ ಯಾವುದೇ ಡವ್ ಇಲ್ಲ, ಬೇರೆಯವರು ಹೇಗೋ ನನಗೆ ಗೊತ್ತಿಲ್ಲ, ನಾನು ಯಾವತ್ತೂ ಸಿನಿಮಾವನ್ನು ಕಡೆಗಣಿಸಲಾರೆ. ಅಧಿವೇಶನದಲ್ಲಿ ಭಾಗವಹಿಸಲು ಸಾಧ್ಯವಾಗದಿರುವುದರ ಕುರಿತು ಈಗಾಗಲೇ ಸ್ಪೀಕರ್ ಜೊತೆ ಮಾತಾಡಿ ಕ್ಷಮೆ ಕೇಳಿದ್ದೇನೆ. ಸಿನಿಮಾ ವಿಷಯದಲ್ಲಿ ನಾನು ಮೊದಲಿನಿಂದಲೂ ಶಿಸ್ತುಪಾಲಕನಾಗಿದ್ದು ಹೆಂಡತಿ ಬಂದನಂತರ ತಾಯಿ ಮರೆಯುವ ಜಾತಿ ನನ್ನದಲ್ಲ, ಅದಕ್ಕಾಗಿಯೇ ಬೆಳಗಾವಿ ಅಧಿವೇಶನದಲ್ಲಿ ಭಾಗವಹಿಸದೆ ನನ್ನ 'ಕೂಲ್ ಗಣೇಶ' ಚಿತ್ರವನ್ನು ಪ್ರಮೋಟ್ ಮಾಡಲು ಇಲ್ಲಿ ಬಂದಿದ್ದೇನೆ. ನಾನು ನಂಬಿಕೆಯ ದಾಸನಾಗಿದ್ದು ಯಾವತ್ತೂ ಯಾರನ್ನೂ ಕ್ಯಾಚ್ ಹಾಕಿಕೊಳ್ಳಲು ಪ್ರಯತ್ನಿಸುವುದಿಲ್ಲ" ಎಂದು ಹೇಳಿಕೊಂಡಿದ್ದಾರೆ. ಅಂದಹಾಗೆ 'ಕೂಲ್ ಗಣೇಶ'ನಿಗೆ ಸ್ಪರ್ಧಿಗಳಾಗಿ 'ಚಿಡ್ಡಿ ದೋಸ್ತ್', '6-5=2' ಹಾಗೂ ಮೂವತ್ತು ವರ್ಷಗಳ ನಂತರ ಭರ್ಜರಿಯಾಗಿ ಬಿಡುಗಡೆಯಾಗುತ್ತಿರುವ ಕಾಶೀನಾಥ್ ಅಭಿನಯದ 'ಅನುಭವ' ಚಿತ್ರಗಳಿವೆ.

ದಯಾನಂದ... ಬೆಂಕಿಪ...

ತಮ್ಮ ಕಥೆಗಳ ಮೂಲಕ ... ಓದುಗ ಬಳಗವನ್ನು ಗಿಟ್ಟಿಸಿಕೊ... ಪ್ರತಿಭಾವಂತ ಕಥೆಗಾರ ಟಿ.ಕೆ.ದಯ... ನಿರ್ದೇಶನದ 'ಬೆಂಕಿಪಟ್ಣ' ಚಿತ್ರ ಪ್ರೀ ಪ್ರ... ಹಂತದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ... ಆ ನಿಟ್ಟಿನಲ್ಲಿ ಪತ್ರಿಕಾಗೋಷ್ಠಿ ಕರೆದು ತಮ್ಮ ... ಮಾಧ್ಯಮದವರಿಗೆ ಪರಿಚಯಿಸಿದೆ. ಕೂಲಿ ಕಾ... ಬದುಕಿನ ಸುತ್ತ ಹೆಣೆಯಲಾದ ಕಥೆಯುಳ್ಳ ಈ... ಮಾಸ್ತಿ ಜಾಕಿರ್ ಅಲಿ ಖಾನ್ ಹಣ ಸುರಿಯ... ಅರುಣ್ ಸಾಗರ್ ಪ್ರಮುಖ ಪಾತ್ರದಲ್ಲಿ ನಟ... ಈ ಚಿತ್ರದಲ್ಲಿ ನಾಯಕನಟನಾಗಿ ಪ್ರತಾಪ್ ನಾ...



ಅಭಿನಯಿಸುತ್ತಿದ್ದು, ನಾಯಕಿಯಾಗಿ ... ಇದ್ದಾರೆ. ಬಿ.ಸುರೇಶ ಪುಟ್ಟ ಪಾತ್ರವೊ... ನಟಿಸುತ್ತಿದ್ದಾರೆ. ಸುರೇಶ್ ಪ್ರಕಾರ 'ಬೆಂ... ಕಥೆ ನೆಲದ ಕಥೆಯಾಗಿದ್ದು, ಕ... ಕೇಳುವಾಗ ದೇವನೂರ ಮಹಾ... 'ಒಡಲಾಳ', 'ಕುಸುಮಬಾಲೆ' ಕ... ಓದಿದ ಅನುಭವವಾಯಿತಂತೆ. ... ಯುವಕರ ಚಿತ್ರವಾಗಿರುವ 'ಬೆಂ... ಈ ಮೂಲಕ ಗಂ... ಹೇಳೋಣ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com